ವಿಷಯಾನುಕ್ರಮಣಿಕೆ

# ಬ್ರಹ್ಮವಿದ್ಯೆ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1983

# ಮುನ್ನುಡಿ

ಹೊಳೆನರಸೀಪುರದಲ್ಲಿ ನಡೆದ ಶ್ರೀಶೋಭಕೃತ್‌ಸಂವತ್ಸರದ ಮೂವತ್ತ ಮೂರನೆಯ ಶಂಕರಸಪ್ತಾಹದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ಮಾಡಿದ ಉಪದೇಶಗಳಿವು.

ಬ್ರಹ್ಮವಿದ್ಯೆಯು ಲೌಕಿಕವಿದ್ಯೆಗಳಿಗಿಂತ ಯಾವ ಯಾವ ಅಂಶಗಳಲ್ಲಿ ವಿಲಕ್ಷಣವಾಗಿದೆ, ಅದಕ್ಕೆ ಸಾಧಕರು ಅನುಸರಿಸಬೇಕಾದ ಮಾರ್ಗವು ಯಾವದು ?– ಎಂಬುದನ್ನು ಇಲ್ಲಿ ಸರಳವಾದ ಶೈಲಿಯಿಂದ ಶ್ರೀಗಳವರು ಉಪದೇಶಿಸಿರುತ್ತಾರೆ.

ಕೇವಲ ಪುಸ್ತಕಪರಿಚಯದಿಂದ ತೃಪ್ತರಾಗದೆ ಬ್ರಹ್ಮವಿದ್ಯೆಯ ಮರ್ಮವನ್ನು ಅರಿತುಕೊಳ್ಳಲೇಬೇಕೆಂದು ಹವಣಿಸುವ ಜಿಜ್ಞಾಸುಗಳಿಗೆ ಇದರಿಂದ ಹೆಚ್ಚಿನ ಪ್ರಯೋಜನವಾಗಬಹುದೆಂದು ಪುಸ್ತಕರೂಪದಿಂದ ಹೊರಕ್ಕೆ ತರಲಾಗಿದೆ.

ಜನಪ್ರಿಯವಾಗಿರುವ ಈ ಗ್ರಂಥದ ಮೊದಲನೆಯ ಮುದ್ರಣದ ಪ್ರತಿಗಳೆಲ್ಲವೂ ಮಾರಾಟವಾಗಿಬಿಟ್ಟದ್ದರಿಂದ ಹೊಸಸಂಸ್ಕರಣವನ್ನು ಈಗ ಹೊರತರಲಾಗಿದೆ. ಎಂದಿನಂತೆ ಮಹಾಜನರು ಪ್ರೋತ್ಸಾಹಿಸುವರೆಂದು ನಂಬಿದೆ.

ತಾ|| 15-9-1983. ಪ್ರಕಾಶಕರು.

# ವಿಷಯಗಳ ಪರಿವಿಡಿ


೧. ಬ್ರಹ್ಮವಿದ್ಯೆಯ ಹೆಚ್ಚುಗಾರಿಕೆ

೨. ಜ್ಞಾನಸಾಧನಗಳು

೩. ಬ್ರಹ್ಮಾನುದರ್ಶನಪ್ರಕಾರ

೪. ಆತ್ಮಾನಾತ್ಮಜ್ಞಾನವಿವೇಕ

೫. ಬ್ರಹ್ಮಾತ್ಮಜ್ಞಾನದಿಂದ ಅನರ್ಥನಿವೃತ್ತಿ

೬. ಶಾಸ್ತ್ರೋಪದೇಶ

೭. ಆಚಾರ್ಯೋಪದೇಶ, ಈಶ್ವರಾನುಗ್ರಹ

॥ ಓಂ ॥

# ಬ್ರಹ್ಮವಿದ್ಯೆ

## ೧. ಬ್ರಹ್ಮವಿದ್ಯೆಯ ಹೆಚ್ಚುಗಾರಿಕೆ

(28—4—63)

ಭೌತಿಕವಿಜ್ಞಾನವು ಅಗಾಧವಾಗಿ ಬೆಳೆದಿರುವ ಈ ಕಾಲದಲ್ಲಿ ಬ್ರಹ್ಮವಿದ್ಯೆಯ ವಿಷಯದಲ್ಲಿ ಜನರಿಗೆ ಆದರವುಂಟಾಗುವದು ಕಷ್ಟತರವಾಗಿದೆ. ಚಂದ್ರಲೋಕವನ್ನು ಮುಟ್ಟುವ ರಾಕೆಟ್ಟುಗಳುಕೂಡ ಈಗ್ಗೆ ಸಿದ್ಧವಾಗಿರುತ್ತವೆ. ಆದರೆ ಆತ್ಮಲೋಕವನ್ನು ಮುಟ್ಟುವ ಮನಸ್ಸು ಸಿಕ್ಕುವದು ದುರ್ಲಭವಾಗಿರುತ್ತದೆ.

ನಿಜವಾಗಿಯೂ ಬ್ರಹ್ಮವಿದ್ಯೆ ಎಂಬುದು ಹಿಂದಿನ ಕಾಲದಲ್ಲಿಯೂ ಎಲ್ಲರಿಗೂ ದಕ್ಕುವಹಾಗಿರಲಿಲ್ಲ. ಆಗಲೂ ಸಾವಿರಗಟ್ಟಲೆಯ ಜನಗಳಲ್ಲಿ ಯಾವನೋ ಒಬ್ಬನು ಈ ವಿದ್ಯೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದನು; ಪ್ರಯತ್ನವನ್ನು ಮಾಡಿದವರೊಳಗೂ ಎಲ್ಲಿಯೋ ಒಬ್ಬೊಬ್ಬನು ಬ್ರಹ್ಮತತ್ತ್ವವನ್ನು ಇದ್ದದ್ದು ಇದ್ದಂತೆ, ಅರಿತುಕೊಳ್ಳಬಹುದಾಗಿತ್ತು. ಇದು ದಕ್ಕುವದು ಎಷ್ಟು ಕಷ್ಟವೆಂಬುದನ್ನು ತಿಳಿಸುವದಕ್ಕೆ ಹಿಂದಿನಕಾಲದಲ್ಲಿಯೇ ಒಂದು ನಾಣ್ಣುಡಿ ಹುಟ್ಟಿಕೊಂಡಿತ್ತು. **ಅದೇನು ಬ್ರಹ್ಮವಿದ್ಯೆಯೆ ?** ಎಂಬ ವಾಕ್ಯವನ್ನು ಜನರು ಆ ವಿದ್ಯೆಯಷ್ಟು ಕಷ್ಟವಾದ ಕೆಲಸವೆ ?– ಎಂಬರ್ಥದಲ್ಲಿ ಉಪಯೋಗಿಸುವದು ರೂಢಿಯಲ್ಲಿತ್ತು. ಬ್ರಹ್ಮವಿದ್ಯೆ ಎಂಬುದು ಒಂದು ಶಾಸ್ತ್ರೀಯಜ್ಞಾನವೂ ಆಗಿದೆ, ಒಂದಾನೊಂದು ಕಲಾಕೌಶಲವೂ ಆಗಿದೆ– ಎಂಬ ಆಶಯವು ಆ ವಾಕ್ಯದಲ್ಲಿ ಅಡಗಿರುತ್ತದೆ. ಭೌತಿಕವಿಜ್ಞಾನದಲ್ಲಿಯೇ ಆಸಕ್ತಿಯು ಹೆಚ್ಚಾಗುತ್ತಿರುವ ಈ ಕಾಲದಲ್ಲಿ 'ಬ್ರಹ್ಮವಿದ್ಯೆ ಎಂದರೇನು ?' ಎಂಬ ಪ್ರಶ್ನೆಯನ್ನು ಹಾಕುವವರೂ ಕಡಿಮೆಯಾಗುತ್ತಿದ್ದಾರೆ.

**ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ**
**ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ ।**
**ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಂ**
**ಅಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ ॥**

ಮುಂ. ೧-೧-೧.

'ಬ್ರಹ್ಮನು ದೇವತೆಗಳೊಳಗೆ ಎಲ್ಲರಿಗಿಂತಲೂ ಮೊದಲು ಹುಟ್ಟಿದವನು; ಅವನು ವಿಶ್ವವನ್ನೇ ಸೃಷ್ಟಿಮಾಡಿ ಕಾಪಾಡುವಾತನು. ಆತನು ಸರ್ವವಿದ್ಯಾ ಪ್ರತಿಷ್ಠೆಯಾದ ಬ್ರಹ್ಮವಿದ್ಯೆಯನ್ನು ತನ್ನ ಹಿರಿಯಮಗನಾದ ಅಥರ್ವನಿಗೆ ಹೇಳಿಕೊಟ್ಟನು'-ಎಂದು ಮುಂಡಕೋಪನಿಷತ್ತಿನಲ್ಲಿದೆ. ದೇವತೆಗಳ ಮೂಲ ಪುರುಷನಾದ ಮಹಾಮಹಿಮನಾದ ಹಿರಣ್ಯಗರ್ಭನು ತನ್ನ ನೆಚ್ಚಿನ ಮಗ ನಿಗೆ ಹಿತವಾಗಲೆಂದು ಉಪದೇಶಮಾಡಿದ ವಿದ್ಯೆಯು ಬ್ರಹ್ಮವಿದ್ಯೆಯು. ಈ ವಿದ್ಯೆಯು ಸಕಲವಿದ್ಯೆಗಳಿಗೂ ಕೊನೆಯ ಗುರಿ. ಯಾವದಾದರೊಂದು ವಿದ್ಯೆಯು 'ವಿದ್ಯೆ' ಎನಿಸಿಕೊಳ್ಳುವ ಹೆಸರಿಗೆ ತಕ್ಕದ್ದಾಗಿರಬೇಕಾದರೆ ಅದು ಹೇಗೋ ಪರಂಪರೆಯಿಂದಲಾದರೂ ಬ್ರಹ್ಮವಿದ್ಯೆಗೆ ಮುಟ್ಟಿಸುವದಾಗಿರಬೇಕು -ಎಂಬಿದು ಋಷಿಗಳ ಭಾವನೆ. ಆದ್ದರಿಂದ ಹಿಂದಕ್ಕೆ ಶಾಸ್ತ್ರಕಾರರು ತಾವು ರಚಿಸಿರುವ ಶಾಸ್ತ್ರವು ಬ್ರಹ್ಮವಿದ್ಯೆಗೆ ಹೇಗೆ ಸಾಧಕವಾಗಿದೆ ಎಂಬುದನ್ನು ತೋರಿಸಿಕೊಡಬೇಕಾಗಿತ್ತು. ಹಾಗಿಲ್ಲದಿದ್ದರೆ ಅದಕ್ಕೆ ಶಾಸ್ತ್ರವೆಂಬ ಗೌರವದ ಹೆಸರು ಸಲ್ಲುತ್ತಿರಲಿಲ್ಲ. ಉದಾಹರಣೆಗೆ ಗಣಿತಶಾಸ್ತ್ರದಿಂದ ಏನು ಪ್ರಯೋಜನ?-ಎಂದು ಕೇಳಿದರೆ 'ಆ ಶಾಸ್ತ್ರದ ಜ್ಞಾನವಿಲ್ಲದವರಿಗೆ ಗ್ರಹನಕ್ಷತ್ರಗಳ ಗತಿಯ ಅರಿವಾಗಿ ಯಜ್ಞಾದಿಗಳಲ್ಲಿ ರಚಿಸಿಕೊಳ್ಳಬೇಕಾದ ಇಷ್ಟಕಾಚಿತಿಗಳೇ ಮುಂತಾದವುಗಳ ಪ್ರಮಾಣ, ಆಕಾರ - ಇವುಗಳ ಜ್ಞಾನವು ಉಂಟಾಗಲಾರದು. ಯಜ್ಞಾದಿಕರ್ಮಾನುಷ್ಠಾನದಿಂದಲಲವೆ. ಚಿತ್ತಶುದ್ಧಿ? ಅದರಿಂದಲಲ್ಲವೆ, ತತ್ತ್ವಜ್ಞಾನ? ಹೀಗೆ ಮೋಕ್ಷಕ್ಕೆ ಪರಂಪರೆಯಿಂದ ಕಾರಣವಾಗಿರುವದರಿಂದ ಗಣಿತಶಾಸ್ತ್ರವನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು' ಎಂದು ಪಂಡಿತರು ವಾದಿಸುತ್ತಿದ್ದರು. ಋಷಿಗಳು ಈಗಿನ ಕಾಲದಲ್ಲಿರುತ್ತಿದ್ದರೆ ಭೌತಿಕವಿಜ್ಞಾನವನ್ನೂ ಸರಿಯಾಗಿ ಉಪಯೋಗಿಸಿಕೊಂಡರೆ ಬ್ರಹ್ಮ

ವಿದ್ಯೆಗೆ ಅಂಗವಾದೀತು- ಎಂದೇ ವಾದಿಸುತ್ತಿದ್ದರೆಂಬುದಕ್ಕೆ ಯಾವ ಸಂಶಯವೂ ಇಲ್ಲ.

ಬ್ರಹ್ಮವಿದ್ಯೆಗೆ ಇಂದಿಗೂ ಇಂಥ ಮಹತ್ತ್ವವು ಇದ್ದೇ ಇದೆ. ಬ್ರಹ್ಮವಿದ್ಯೆಯಿಂದಾಗುವ ಪ್ರಯೋಜನವೇನು?-ಎಂಬುದನ್ನು ಉಪನಿಷತ್ತುಗಳಲ್ಲಿರುವ ಕೆಲವು ವಾಕ್ಯಗಳಿಂದ ತಿಳಿದುಕೊಳ್ಳಬಹುದು.

೧. **ಬ್ರಹ್ಮವಿದಾಪ್ನೋತಿ ಪರಮ್ ।** ತೈ. ೨-೧.

'ಬ್ರಹ್ಮವನ್ನು ಅರಿತುಕೊಂಡವನಿಗೆ ಪರಮಪುರುಷಾರ್ಥವು-ಮಾನವನು ಪಡೆದುಕೊಳ್ಳಬಹುದಾದ ಮಿಗಿಲಿಲ್ಲದ ಪರಮಫಲವು- ದೊರಕುತ್ತದೆ.' ಈ ವಾಕ್ಯದಲ್ಲಿ ಬ್ರಹ್ಮವಿದ್ಯೆಯ ಫಲವನ್ನು ಸಾಮಾನ್ಯರೀತಿಯಿಂದ ಹೇಳಿದೆ. ಪರಮಪುರುಷಾರ್ಥವೆಂದರೇನೆಂಬುದನ್ನು ಇಲ್ಲಿ ಬಾಯಿಬಿಟ್ಟು ಹೇಳಿಲ್ಲ.

೨. **ಯದಾ ಸರ್ವೇ ಪ್ರಮುಚ್ಯಂತೇ**
**ಕಾಮಾ ಯೇಽಸ್ಯ ಹೃದಿ ಶ್ರಿತಾಃ ।**
**ಅಥ ಮರ್ತ್ಯೋಽಮೃತೋ ಭವತಿ**
**ಅತ್ರ ಬ್ರಹ್ಮ ಸಮಶ್ನುತೇ ॥** ಕ. ೨-೩-೧೪.

'ಮನುಷ್ಯನ ಹೃದಯದಲ್ಲಿರುವ ಕಾಮಗಳೆಲ್ಲವೂ ಯಾವಾಗ ಬಿಡುಗಡೆಯಾಗುವವೋ ಆಗ ಮರ್ತ್ಯನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುವನು.' ಈ ಫಲಶ್ರುತಿಯನ್ನು ಕೇಳಿದರೆ ಆಶ್ಚರ್ಯವೂ ಕುತೂಹಲವೂ ಆಗುತ್ತವೆ. ಮನುಷ್ಯನ ಮನಸ್ಸಿನಲ್ಲಿರುವ ಕಾಮಗಳನ್ನು ಇಂತಿಷ್ಟೆಂದು ಲೆಕ್ಕಮಾಡಿ ಹೇಳುವದಕ್ಕಾದೀತೆ? ಆ ಕಾಮಗಳೆಲ್ಲವೂ ಎಂದಿಗಾದರೂ ಜನರನ್ನು ಬಿಟ್ಟುಹೋಗುವದುಂಟೆಂದು ನಂಬಬಹುದೆ? ನಮಗೆಲ್ಲ ನಿಶ್ಚಿತವಾಗಿರುವದೇನೆಂದರೆ ಮನುಷ್ಯನ ಕಾಮಗಳು ಇಷ್ಟೆಂಬುದಿಲ್ಲ; ಅವುಗಳು ನಿಂತುಹೋಗುವದು ಹಾಗಿರಲಿ, ಒಂದು ಕಾಮವು ಪರಿಪೂರ್ತಿಯಾಗುವದರೊಳಗೆ ಮತ್ತೆ ಬೇರೆಯ ಹತ್ತುಕಾಮಗಳು ತಲೆದೋರಿಕೊಳ್ಳುತ್ತವೆ. ಹೀಗಿರುವಾಗ-ಎಲ್ಲಾ ಕಾಮಗಳೂ ಇಲ್ಲದಂತಾಗುವದೆಂಬುದು ಎಂಥ

ಆಚ್ಚರಿಯ ಮಾತು! ಇನ್ನು 'ನನಗೆ ಯಾವ ಕಾಮವೂ ಇಲ್ಲ, ನನ್ನ ಕಾಮಗಳೆಲ್ಲವೂ ಪರಿಪೂರ್ತಿಯಾಗಿವೆ' ಎನ್ನುವವನು ಈ ಬ್ರಹ್ಮಾಂಡದಲ್ಲಿ ಒಬ್ಬನಾದರೂ ಸಿಕ್ಕಿಯಾನೆಂದು ಯಾರು ತಾನೆ ಹೇಳಲಾಪರು ?

ಇದು ಹಾಗಿರಲಿ, 'ಮನುಷ್ಯನು ಸಾವಿಲ್ಲದವನಾಗುವನು' ಎನ್ನುವದು ಎಂಥ ಎದೆಗಾರಿಕೆಯ ಮಾತು! ಮನುಷ್ಯನೆಂಬ ಮಾತಿಗೆ ಮರ್ತ್ಯ (ಸಾಯುವವನು) ಎಂಬ ಮಾತು ಪರ್ಯಾಯವೆಂದು ಕೋಶದಲ್ಲಿದೆ. 'ಮರ್ತ್ಯನು ಅಮೃತನಾಗುವನು' ಎನ್ನುವದು ಎಂದಿಗಾದರೂ ಒಪ್ಪುವಮಾತಾದೀತೆ? ಈಗ ಹಿಂದೆ ಪ್ರಸಿದ್ಧರಾಗಿದ್ದವರು ಯಾರು ತಾನೆ ಬದುಕಿದ್ದಾರೆ? ಮರ್ತ್ಯನು ಅಮೃತನಾಗುವನು' ಎಂಬ ವಾಕ್ಯವನ್ನು ಆಡಿದ ಋಷಿಯಾದರೂ ಈಗ ಬದುಕಿದ್ದಾನೆಯೆ? ಈ ವಾಕ್ಯವನ್ನು ಹೇಳಿದಾತನು ಹುಚ್ಚನೊ, ಅಥವಾ ಇದರ ಅರ್ಥವಾಗದೆ ನಾವೇ ಹುಚ್ಚರಾಗಿರುವೆವೊ!

ಇನ್ನೊಂದು ಕುತೂಹಲಜನಕವಾದ ಮಾತೆಂದರೆ 'ಇಲ್ಲಿಯೇ ಜ್ಞಾನಿಯು ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ.' ಪುಣ್ಯವಂತನಾದ ಮನುಷ್ಯನು ಸತ್ತಬಳಿಕ ಪುಣ್ಯವಂತನಿಗೆ 'ಅಂಥ ಲೋಕವು ಸಿಕ್ಕುವದು, ಇಂಥ ಲೋಕವು ಸಿಕ್ಕುವದು' ಎಂದು ಬಣ್ಣಿಸುವ ಮತಗಳುಂಟು. ಆದರೆ ಅದು ನಿಜವೊ, ಅಲ್ಲವೊ-ಎಂಬುದನ್ನು ದೃಢಪಡಿಸಿಕೊಳ್ಳಬೇಕಾದವರು ಮೊದಲು ಸಾಯಬೇಕಾಗಿರುತ್ತದೆ. ಸತ್ತವರು ಯಾರೂ ಹಿಂತಿರುಗಿ ಈ ಲೋಕಕ್ಕೆ ಬಂದವರಿಲ್ಲವಾದ್ದರಿಂದ ಆ ಫಲಶ್ರುತಿಯ ವಾಕ್ಯದ ಅರ್ಥವನ್ನು ನಿಜವೆಂದಾಗಲಿ ಸುಳ್ಳೆಂದಾಗಲಿ ಹೇಳುವದಕ್ಕೆ ಆಗುವಂತಿರುವದಿಲ್ಲ. ಆದರೆ ಈ ಶ್ರುತಿಯಲ್ಲಿ 'ಇಲ್ಲಿಯೇ ಬ್ರಹ್ಮವನ್ನು ಪಡೆಯುತ್ತಾನೆ' ಎಂದಿದೆಯಲ್ಲ! ಬ್ರಹ್ಮವನ್ನು ಪಡೆದುಕೊಳ್ಳುವದೆಂದರೆ ಹೇಗೆ? ಈ ಜನ್ಮದಲ್ಲಿಯೇ ಬ್ರಹ್ಮವನ್ನು ಪಡೆದುಕೊಂಡವರು ಯಾರಿದಾರೆ? ಬ್ರಹ್ಮವನ್ನು ಅರಿತುಕೊಂಡು ಎಲ್ಲಾ ಕಾಮಗಳಿಂದಲೂ ಬಿಡುಗಡೆಯಾಗಿ ಇಲ್ಲಿಯೇ ಆ ಬ್ರಹ್ಮವನ್ನು ಸೇರುವದು ಸಾಧ್ಯವೆ? ಇದು ನಿಜವಾದರೆ ನಾವು ಅವಶ್ಯವಾಗಿ ಈ ಬ್ರಹ್ಮವಿದ್ಯೆಯ ಪ್ರಾಪ್ತಿಗಾಗಿ ಪ್ರಯತ್ನವನ್ನು ಮಾಡಬೇಕು. ಇದು ಸುಳ್ಳಾದರೆ, ಹಾಗೆಂದು ನಾವು ಎಲ್ಲರಿಗೂ ಮನದಟ್ಟಾಗುವಂತೆ ಇದನ್ನು ಡಂಗುರ ಹೊಡೆಯಿಸಿ ತಿಳಿಯಿಸತಕ್ಕದ್ದು ಅವಶ್ಯ ಎನಿಸುತ್ತದೆ ಅಲ್ಲವೆ?

ಈಗ ಇನ್ನೊಂದು ಫಲಶ್ರುತಿಯನ್ನು ಕೇಳಿರಿ !

**ಭಿದ್ಯತೇ ಹೃದಯಗ್ರಂಥಿಃ**
**ಛಿದ್ಯಂತೇ ಸರ್ವಸಂಶಯಾಃ**
**ಕ್ಷೀಯಂತೇ ಚಾಸ್ಯ ಕರ್ಮಾಣಿ**
**ತಸ್ಮಿನ್ ದೃಷ್ಟೇ ಪರಾವರೇ ।** ಮುಂ. ೨-೨-೮

'ಆ ಪರಾವರನಾದ ಪರಮಾತ್ಮನನ್ನು ಕಂಡುಕೊಂಡರೆ, ಹೃದಯ ಗ್ರಂಥಿಯು ಸಡಿಲವಾಗುವದು, ಸಕಲಸಂಶಯಗಳೂ ನಾಶವಾಗುವವು ; ಅವನ ಕರ್ಮಗಳೂ ಸವೆದುಹೋಗುವವು.'

ಕಾಮಗಳೆಲ್ಲ ಇಲ್ಲವಾಗುವವೆಂಬುದು ಎಷ್ಟು ಸಂಭಾವಿತವೋ, ಮನುಷ್ಯನ **ಸಂಶಯಗಳೆಲ್ಲ ಮುಗಿದುಹೋಗುವವೆಂಬುದೂ** ಅಷ್ಟೇ ಸಂಭಾವಿತ. ಮನುಷ್ಯರೊಳಗೆ ಅನೇಕರು ಬುದ್ಧಿವಂತರು ಆಗಿರುತ್ತಾರೆ. ಅವರು ಕೂಡಿಹಾಕಿಕೊಂಡಿರುವ ಜ್ಞಾನದ ರಾಶಿಯು ಎಷ್ಟೋ ಪರ್ವತಗಳಷ್ಟಿವೆ. ಆದರೆ ಒಂದು ಕಾಮವು ಪೂರ್ತಿಯಾಗುವದರೊಳಗೆ ಹಲವು ಹೊಸ ಕಾಮಗಳು ಹೇಗೆ ಎದ್ದುಕೊಳ್ಳುವವೆಂಬುದು ನಮ್ಮೆಲ್ಲರ ಅನುಭವದಲ್ಲಿದೆಯೋ, ಒಂದು ಸಂಶಯವನ್ನು ಬಗೆಹರಿಸಿಕೊಳ್ಳುವದರೊಳಗೆ ಹತ್ತು ಹೊಸ ಸಂಶಯಗಳು ತಲೆಯೆತ್ತುವವೆಂಬುದೂ ಹಾಗೆಯೇ ನಮ್ಮೆಲ್ಲರ ಅನುಭವದಲ್ಲಿರುವ ವಿಷಯವಾಗಿದೆ. ಹೀಗಿರುವಲ್ಲಿ ಬ್ರಹ್ಮವಿದ್ಯೆಯಿಂದ ಸಂಶಯಗಳೆಲ್ಲವೂ ಒಂದೇ ಬಾರಿಗೆ ಕತ್ತರಿಸಿ ಹೋಗುವವೆಂದರ ಎಂಥ ಮಾತಿದು !

ಇದೂ ಹಾಗಿರಲಿ, **ಕರ್ಮಗಳೆಲ್ಲ ಸವೆದುಹೋಗುವದು** ಸಾಧ್ಯವೆ? ಮನುಷ್ಯನು ಈ ಜನ್ಮದಲ್ಲಿ ಮಾಡಿರುವ ಕರ್ಮಗಳ ಸಂಖ್ಯೆಯೇ ಅಗಣಿತ ; ಇನ್ನು ಹಿಂದಿನ ಅನಂತಜನ್ಮಗಳಲ್ಲಿ ಅವನು ಮಾಡಿರುವ ಕರ್ಮಗಳ ಲೆಕ್ಕವನ್ನು ಯಾರು ಇಟ್ಟುಕೊಂಡಿದ್ದಾರೆ? ಇದಕ್ಕೆ ಹೋಲಿಸಿದರೆ ಅವನು ಅನುಭವಿಸುವ ಫಲಗಳಿಂದ ಸವೆದುಹೋಗಿರುವ ಕರ್ಮಗಳು ಎಷ್ಟು ಅಲ್ಪವಾಗುತ್ತವೆ ! ಸಾಲವನ್ನು ಮಾಡುವವನು ದಿನದಿನವೂ ಚಕ್ರಬಡ್ಡಿಯ ದರದಲ್ಲಿ

ತೆರುವ ಹಣವು ಮೊತ್ತದಲ್ಲಿ ಕಳೆದುಹೋಗುತ್ತದೆಯಾದರೂ ಅವನ ಸಾಲವು ಮಾತ್ರ ಎಂದಿಗೂ ತೀರಿಸುವದಕ್ಕಾಗದೆ ಹೇಗೆ ಉಳಿದುಕೊಂಡೇ ಇರುವದೋ ಹಾಗೆಯೇ ಕರ್ಮಗಳೊಳಗೆ ಎಷ್ಟರ ಫಲವನ್ನು ನಾವು ಉಪಭೋಗಿಸಿದ್ದರೂ ಇನ್ನೂ ಸವೆಯದೆ ಇರುವ ಕರ್ಮಗಳು ಅಗಣಿತವಾಗಿರಬೇಕಲ್ಲವೆ? ಇನ್ನು ಮುಂದೆ ನಾನು ಅನುಭವಿಸಬೇಕಾದ ಕರ್ಮಗಳೇ ಇಲ್ಲವೆನ್ನಬಹುದಾದವನು ಯಾವನು ತಾನೆ ಇದ್ದಾನೆ?

ಈವರೆಗೆ ಶಾಸ್ತ್ರದಲ್ಲಿ ಶ್ರದ್ಧೆಯಿರುವ ಆಸ್ತಿಕರಿಗೆ ಉಂಟಾಗಬಹುದಾದ ಸಂಶಯಗಳನ್ನು ಮಾತ್ರ ನಾವು ವಿಚಾರಿಸಿರುತ್ತೇವೆ. ಯುಕ್ತಿಪ್ರಧಾನರಾದ ಅವಿಶ್ವಾಸಿಗಳಾದ, ಈಗಿನ ಜನರಿಗಂತೂ ಈ ಫಲಶ್ರುತಿಗಳು ನಗೆಗೀಡಾಗಿಯೇ ತೋರುವವೆಂಬುದು ನಿಶ್ಚಯ. ಹಿಂದಿನಕಾಲದಲ್ಲಿಯೂ ಚಾರ್ವಾಕರೂ ನಾಸ್ತಿಕರೂ ಇಂಥ ಆಕ್ಷೇಪಗಳನ್ನು ವೇದಾಂತದಮೇಲೆ ಒಡ್ಡಿಯೇ ಇದ್ದರು. ಹಿಂದಿನ ಚಾರ್ವಾಕಶಾಸ್ತ್ರವನ್ನು ರಚಿಸಿದ ಬೃಹಸ್ಪತಿಯು ಯಾರೇ ಆಗಿರಲಿ, ಈಗ ಆತನನ್ನು ಮೀರಿಸಿರುವ 'ನೂತನಬೃಹಸ್ಪತಿಗಳ' ತಂಡಗಳೇ ಇರುತ್ತವೆ. ನಮ್ಮ ತರುಣರು ಅಂಥವರ ಯುಕ್ತಿಗಳನ್ನೆಲ್ಲ ನಮ್ಮ ಮುಂದೆ ಇಡುತ್ತಿದ್ದಾರೆ. ವೇದಾಂತವು ಸರ್ವಸಂಮತವಾದ ದರ್ಶನವೆಂದೆನಿಸಿಕೊಳ್ಳಬೇಕಾದರೆ ಅವರಿಗೆಲ್ಲ ಈಗ ಸಮಾಧಾನವನ್ನು ಹೇಳುವದು ಅತ್ಯವಶ್ಯವಾಗಿರುತ್ತದೆ.

ವೇದಾಂತವನ್ನು ನಂಬಲಾರದೆ ಇರುವವರ ಮನೋಭಾವವು ಬಗೆಬಗೆಯಾಗಿರಬಹುದು. ಅವರಲ್ಲಿ ಕೆಲವರು **ಸಂಶಯವಾದಿಗಳು** (Sceptics). ಇಲ್ಲಿಗೆ ಸಿದ್ಧಾಂತವಾಯಿತೆಂಬ ನಿಶ್ಚಿತಜ್ಞಾನವನ್ನು ಪಡೆಯುವವರು ಅಸಾಧ್ಯ ಎಂಬವರಿವರು. ಗ್ರೀಸ್‌ದೇಶದಲ್ಲಿ ಕ್ರಿ. ಪೂ. 300ರ ಸುಮಾರಿನಲ್ಲಿದ್ದ ಪಿರ್ಹೊ (Prrho of Elis) ಎಂಬಾತನು ಈ ಸಂಪ್ರದಾಯದ ಪ್ರಥಮ ಪ್ರವರ್ತಕನು ಎಂದು ಪಾಶ್ಚಾತ್ಯರು ನಂಬುತ್ತಾರೆ- ಇಂದ್ರಿಯಗಳಾಗಲಿ ಮಾನಸಿಕಜ್ಞಾನವಾಗಲಿ ವಿಶ್ವಾಸಕ್ಕೆ ಅರ್ಹವಲ್ಲ- ಎಂಬ ಸಿದ್ಧಾಂತವನ್ನು ಆತನು ಮೊಟ್ಟಮೊದಲು ತೆಗೆದಿದ್ದನಂತೆ. ಈಚೆಗೆ ಯೂರೋಪಿನಲ್ಲಿ ಬಗೆ ಬಗೆಯ ಸಂಶಯವಾದಿಗಳು ಆಗಿಹೋಗಿರುತ್ತಾರೆ. ಆತ್ಮವಸ್ತು (ನಾನು ಎಂಬ ನನ್ನ ಸ್ವರೂಪವು) ಎಷ್ಟು ಹುಡುಕಿದರೂ ಕಾಣಿಸುವಂತಿಲ್ಲ; ಕಾರ್ಯ

ಕಾರಣಭಾವವೆಂಬುದು ಸುಳ್ಳು, ನಮಗೆ ಗೊತ್ತಿರುವದೆಲ್ಲ ಇಂದ್ರಿಯಜನ್ಯ ವೃತ್ತಿಗಳೇ ಎಂದು ಸ್ಕಾಟ್ಲೆಂಡಿನ ಹ್ಯೂಮ್ (David Hume) ಎಂಬಾತನು ಮತ್ತೊಂದು ಬಗೆಯ ಸಂಶಯವಾದವನ್ನು ಇತ್ತೀಚೆಗೆ ತೆಗೆದಿರುತ್ತಾನೆ. ನಮ್ಮ ಇಂದ್ರಿಯಗಳಿಗೆ ದೃಶ್ಯವಾಗಿರುವಷ್ಟು ಮಾತ್ರ ನಿಶ್ಚಿತ-ಅದೂ ಸಾಪೇಕ್ಷಸತ್ಯ- ಎಂದು ನಂಬುವ ವಾದವನ್ನು ನಿಶ್ಚಿತಭಾವವಾದ (Positivism) ಎಂದು ಕರೆಯಬಹುದು. ಅದನ್ನು ಆಗಸ್ಟ್ ಕಾಮ್ಟೆ (August Compte) ಎಂಬ ಹೆಸರಿನ ಫ್ರೆಂಚುದೇಶದ ತತ್ತ್ವವಿಚಾರಕನು ಪ್ರಸಿದ್ಧಿಗೆ ತಂದನಂತೆ; ಈ ಮತಕ್ಕೆ ರುಜುಹಾಕುವವರಿಗೇನೂ ನಮ್ಮ ದೇಶದಲ್ಲಿ ಕಡಿಮೆಯಿಲ್ಲ. ಮಾನವನಿಗೆ ಬೇಕಾದದ್ದನ್ನು- ಅದರಲ್ಲಿಯೂ ಮಾನವಕುಲದ ಏಳಿಗೆಗೆ ಬೇಕಾದ ವಿಚಾರವನ್ನು ಮಾತ್ರ- ವಿಚಾರಕ್ಕಿಟ್ಟು ಕೊಳ್ಳಬೇಕು ಎನ್ನುವವರ ಮತವು **ಮಾನವಶಾಸ್ತ್ರಸಿದ್ಧಾಂತವು** (Humanism). ಮುಂದಕ್ಕೆ ಆದರ್ಶಪುರುಷರು ಹುಟ್ಟುವಂತೆ ನಾವು ಹೇಗೆ ನಡೆದುಕೊಳ್ಳಬೇಕು- ಎಂಬ ಜಿಜ್ಞಾಸೆಯೇ ಮುಖ್ಯ; ವ್ಯಕ್ತಿಗಳು ಅಷ್ಟೇನೂ ಪ್ರಧಾನವಲ್ಲ- ಎಂಬುದು ಈ ಮತದವರ ಆಶಯ. ಇವರೂ ದೇವರು, ಸ್ವರ್ಗ, ನರಕ-ಮುಂತಾದವುಗಳಿಗೆ ಸೊನ್ನೆಯನ್ನು ಸುತ್ತುವವರೇ.

ಈ ತತ್ತ್ವವಿಚಾರಕರ ಮಾತಂತಿರಲಿ, ಭೌತಿಕವಿಜ್ಞಾನವಾದದಲ್ಲಿ **ವಿಕಾಸವಾದ** (Theory of Evolution)ವನ್ನು ನಂಬುವವರು ಈಗ ಅನೇಕರಿರುತ್ತಾರೆ. ಅವರಿಗೆ ಮತಗಳ ಹೇಳಿಕೆಗಳಲ್ಲಿ ಯಾವ ನಂಬಿಕೆಯೂ ಉಂಟಾಗುವಂತೆ ಇಲ್ಲ. ಇನ್ನು ಸದ್ಯಕ್ಕೆ ನಮ್ಮ ದೇಶದಲ್ಲಿ **ರಾಷ್ಟ್ರದ ವಿಚಾರ**ಗಳನ್ನು ಮುಖ್ಯವಾಗಿಟ್ಟುಕೊಂಡು ನಮ್ಮ ದೇಶವು ಅಭಿವೃದ್ಧಿಗೆ ಬರಬೇಕಾದರೆ ಏನುಮಾಡಬೇಕು?-ಎಂಬ ಪ್ರಶ್ನೆಗೆ ತಮ್ಮತಮ್ಮ ಮೂಗಿನ ನೇರಕ್ಕೆ ಉತ್ತರವನ್ನು ಹೇಳುತ್ತಾ ಜನರ ತಂಡಗಳನ್ನು ಸೇರಿಸಿಕೊಂಡು ಒಬ್ಬರೊಡನೊಬ್ಬರು ಕಾದಾಡುತ್ತಿರುವ ಜನರೇ ಹೆಚ್ಚಾಗಿರುವ ಗುಂಪುಗಳ ಜನರು ಬೇರೆ. ಅವರಿಗೆ ಈ ತತ್ತ್ವವಿಚಾರವು ಎಷ್ಟರಮಟ್ಟಿಗೆ ಮನಸ್ಸಿಗೆ ಬಂದೀತು?

ಹೀಗೆ ಬಗೆಬಗೆಯ ಸಂಶಯವಾದಿಗಳೂ ಲೋಕಾಯತಶಿಷ್ಯರೂ ಹೇರಳವಾಗಿರುವ ಈ ಕಾಲದಲ್ಲಿಯೂ ವೇದಾಂತಸಿದ್ಧಾಂತದಲ್ಲಿ ನಂಬುಗೆಯಿರುವ

ವರೂ ಸುದೈವದಿಂದ ಇನ್ನೂ ಕೆಲವರು ಇರುತ್ತಾರೆ. **“ಅಜ್ಞಶ್ಚಾಶ್ರದ್ದ ಧಾನಶ್ಚ ಸಂಶಯಾತ್ಮಾ ವಿನಶ್ಯತಿ”** (ಗೀ. ೪–೪೦) ಅಜ್ಞನೂ ಶ್ರದ್ಧೆಯಿಲ್ಲ ದವನೂ ಸಂಶಯಾತ್ಮನಾದವನೂ ಪುರುಷಾರ್ಥವನ್ನು ಪಡೆಯದೆ ಕೆಟ್ಟು ಹೋಗುತ್ತಾನೆ– ಎಂಬ ಗೀತೋಕ್ತಿಯಲ್ಲಿ ಇನ್ನೂ ಅವರಿಗೆ ವಿಶ್ವಾಸವಿದೆ. ಇಂಥ ಕಾಲದಲ್ಲಿಯೂ ವೇದಾಂತತತ್ತ್ವಗಳನ್ನು ಜನರಿಗೆ ಮನಗಾಣುವಂತೆ ಉಪದೇಶಿಸಬಹುದೆಂಬುದನ್ನು ಪಾಶ್ಚಾತ್ಯದೇಶಗಳಲ್ಲಿ ಸಂಚರಿಸಿ ಅಲ್ಲಿಯ ಮಹಾವಿದ್ವಾಂಸರನ್ನೂ ತಮ್ಮ ಭಾಷಣಗಳಿಂದ ಬೆರಗುಮಾಡಿದ **ಸ್ವಾಮಿ ವಿವೇಕಾನಂದ**ರವರ ಚರಿತ್ರೆಯಿಂದ ನಾವು ಮನಗಾಣಬಹುದಾಗಿದೆ. ಈ ದಿನ ನಾನು ಉದಾಹರಿಸಿರುವ ಫಲಶ್ರುತಿಗಳ ಅಭಿಪ್ರಾಯವನ್ನು ಮನವರಿಕೆ ಮಾಡಿಕೊಳ್ಳುವ ಬಗೆಯನ್ನು ನಾಳೆಯಿಂದ ವಿವರಿಸುವದಕ್ಕೆ ಪ್ರಯತ್ನಿಸು ವೆನು.

# ೨. ಜ್ಞಾನಸಾಧನಗಳು

(29—4—63)

ಬ್ರಹ್ಮಜ್ಞಾನದ ಹೆಚ್ಚುಗಾರಿಕೆಯನ್ನು ನಿನ್ನೆಯ ದಿನ ಪ್ರಸ್ತಾಪಿಸಿದ್ದಾಯಿತು. ಅನೇಕರು ಇದರ ಮಾರ್ಗವನ್ನು ಅರಿಯರು, ಕೆಲವರಿಗೆ ಇದರ ವಿಷಯಕ್ಕೆ ಸಂದೇಹವಿದೆ, ಕೆಲವರಿಗೆ ಇದರಲ್ಲಿ ಅಶ್ರದ್ಧೆಯೂ ಇದೆ. ಆದರೆ ಈ ಜ್ಞಾನದ ವಿಷಯದಲ್ಲಿ ಶ್ರದ್ಧೆಯಿರುವವರೂ ಕೆಲವರಿರುತ್ತಾರೆ. ನಿಜವಾಗಿಯೂ ಬ್ರಹ್ಮಜ್ಞಾನದ ಸ್ವರೂಪವನ್ನು ಅರಿತುಕೊಳ್ಳಬೇಕೆಂದಿರುವವರಿಗಾಗಿ ಈ ದಿನ ಜ್ಞಾನದ ಸಾಧನಗಳು ಯಾವವು?-ಎಂಬುದನ್ನು ಕುರಿತು ಮಾತನಾಡುವೆನು.

ಮಕ್ಕಳಿಗೂ ಪಶುಗಳಿಗೂ ಸಾಮಾನ್ಯಜನರಿಗೂ ಸಹಜವಾದ ಒಂದು ಜ್ಞಾನಸಾಧನವಿದೆ. ಅದನ್ನು **ನೈಸರ್ಗಿಕಪ್ರವೃತ್ತಿಸಾಧನ** (Instinct) ಎಂದು ಕರೆಯಬಹುದು. ಕೆಲಕೆಲವು ಪ್ರವೃತ್ತಿಗಳು ಸಹಜವಾಗಿ ನಡೆಯುತ್ತವೆ. ನಿದ್ದೆಗಣ್ಣಿನಲ್ಲಿ ಮಕ್ಕಳು ಊಟಮಾಡಿ ಮಲಗಿಕೊಂಡಿದ್ದು 'ನಾನು ಊಟಮಾಡಿಲ್ಲ' ಎಂದು ಬೆಳಗ್ಗೆ ಹೇಳುವದುಂಟು. ಇದು ನೈಸರ್ಗಿಕ ಪ್ರವರ್ತಕಜ್ಞಾನ. ಇಂದ್ರಿಯಗಳಿಂದ ನಾವು ಶಬ್ದಸ್ಪರ್ಶರೂಪರಸಗಂಧಗಳನ್ನು ಅರಿಯುವಂತೆಯೇ ಪಶ್ವಾದಿಗಳೂ ಅರಿಯುತ್ತವೆ. ಇದು ಆಲೋಚನಾರೂಪವಾದ ಇಂದ್ರಿಯವ್ಯಾಪಾರದಿಂದ ಆಗುವ **ಪ್ರತ್ಯಕ್ಷ.** ಇಂಥ ಪ್ರತ್ಯಕ್ಷದಿಂದ ಪಶುಗಳಿಗೆ ಪ್ರವೃತ್ತಿನಿವೃತ್ತಿಗಳು ಆಗುತ್ತವೆಯಾದರೂ ಅವು ತರ್ಕವನ್ನೇನೂ ಉಪಯೋಗಿಸುವದಿಲ್ಲ. ನಾಯಿಗೆ ಆಗಾಗ್ಗೆ ಆಹಾರವನ್ನು ಹಾಕುವ ಅಭ್ಯಾಸವಿದ್ದವನು ಬರಿಯ ಕೈಯನ್ನು ಕೆಳಕ್ಕಿಟ್ಟರೂ ಆ ಪ್ರಾಣಿಯು ಅವನು ತನಗೆ ಆಹಾರವನ್ನು ಕೊಡುವದಕ್ಕೆ ಬರುತ್ತಿದಾನೆಂದೇ ಭಾವಿಸುತ್ತದೆ, ಕೈಯಲ್ಲಿ ಕೋಲನ್ನು ಹಿಡಿದುಕೊಂಡಿದ್ದರೆ ಭಯದಿಂದ ಓಡಿಹೋಗುತ್ತದೆ. ಹೀಗೆ ಪಶ್ವಾದಿಗಳಿಗೆ ಹೊರಗಿನ **ಇಂದ್ರಿಯಜನ್ಯಜ್ಞಾನವೂ,** ಒಳಗೆ ಕಾಮಕ್ರೋಧಾದಿವೇದನೆಗಳೂ (Feelings) ಹಸಿವು, ಬಾಯಾರಿಕೆ ಮುಂತಾದವುಗಳೂ ಮನುಷ್ಯರಂತೆಯೇ ಆಗುತ್ತಿದ್ದರೂ ಅವಕ್ಕೆ

ಮನಸ್ಸಿನಿಂದ ಹೀಗಿರಬೇಕೆಂದು ವಿಚಾರಮಾಡಿಕೊಳ್ಳುವ (Thinking) ಶಕ್ತಿಯಾಗಲಿ, ಹೀಗೆಹೀಗೆ ಎಂದು ವಿಚಾರಮಾಡಿ ನಿಶ್ಚಯಿಸುವ ಪ್ರತ್ಯಯಗಳನ್ನು ಉಪಯೋಗಿಸುವ (Intellectual Conception and Judgment) ಶಕ್ತಿಯಾಗಲಿ ಇರುವದಿಲ್ಲ. ಇದನ್ನು ಶ್ರುತಿಯು ಹೀಗೆಂದು ವಿವೇಚಿಸಿ ತಿಳಿಸುತ್ತದೆ :

**ಪುರುಷೇ ತ್ವೇವಾವಿಸ್ತರಾಮಾತ್ಮಾ ಸ ಹಿ ಪ್ರಜ್ಞಾನೇನ ಸಂಪನ್ನತಮೋ ವಿಜ್ಞಾತಂ ವದತಿ ವಿಜ್ಞಾತಂ ಪಶ್ಯತಿ ವೇದ ಶ್ವಸ್ತನಂ ವೇದ ಲೋಕಾಲೋಕೌ ಮರ್ತ್ಯೇನಾಮೃತಮೀಪ್ಸತ್ಯೇವಂ ಸಂಪನ್ನಃ। ಅಥೇತರೇಷಾಮಶನಾಪಿಪಾಸೇ ಏವಾಭಿವಿಜ್ಞಾನಮ್ ॥**

ಐ. ಆ. ೨-೩-೨.

ಅಂತಃಸಂಜ್ಞೆ (ಒಳ ಅರಿವು) ಮಾತ್ರ ಇರುವ ಮರಗಿಡಗಳಲ್ಲಿ ಆತ್ಮನು ಸ್ವಲ್ಪಮಟ್ಟಿಗೆ ತೋರಿಕೊಳ್ಳುತ್ತಾನೆ, ಅವುಗಳಿಗಿಂತ ಜಂಗಮಪ್ರಾಣಿಗಳಲ್ಲಿ ಹೆಚ್ಚಾಗಿ ತೋರಿಕೊಳ್ಳುತ್ತಾನೆ; ಆದರೆ ಮನುಷ್ಯನಲ್ಲಿ ಮಾತ್ರವೇ ಆತ್ಮನು ಸ್ಪಷ್ಟವಾಗಿ ಪ್ರಕಟವಾಗಿರುತ್ತಾನೆ. ಏಕೆಂದರೆ ಅವನಲ್ಲಿ ಅರಿವು ಅತ್ಯಂತವಾಗಿ ಹೆಚ್ಚಾಗಿ ಹೊರತೋರಿಕೊಂಡಿರುತ್ತದೆ. ಮನುಷ್ಯನು ಅರಿತು ಮಾತನಾಡುತ್ತಾನೆ, ಅರಿತು ಕಾಣುತ್ತಾನೆ, ನಾಳೆಗೇನೆಂಬುದನ್ನು ಬಲ್ಲನು, ಲೋಕಾಲೋಕಗಳನ್ನು ಬಲ್ಲನು, ಮರ್ತ್ಯವಾದ ಸಾಧನದಿಂದ ಅಮೃತವನ್ನು ಪಡೆಯಲಿಚ್ಛಿಸುತ್ತಾನೆ; ಇನ್ನು ಮಿಕ್ಕ ಪ್ರಾಣಿಗಳಿಗಾದರೋ ಹಸಿವುಬಾಯಾರಿಕೆಗಳೇ ಅರಿವು.

ಹೀಗೆ ಮನುಷ್ಯನಲ್ಲಿ ನಿಸರ್ಗಜ್ಞಾನಸಾಧನವೂ ಇಂದ್ರಿಯಜನ್ಯಜ್ಞಾನವೂ ಮಾನಸಪ್ರತ್ಯಕ್ಷದಿಂದ ಅರಿತುಕೊಳ್ಳುವದೂ 'ಕಾಮ, ಸಂಕಲ್ಪ, ಸಂಶಯ, ಶ್ರದ್ಧೆ, ಅಶ್ರದ್ಧೆ, ಧೃತಿ, ಅಧೃತಿ, ನಾಚಿಕೆ, ಜ್ಞಾನ, ಭಯ'-ಮುಂತಾದ ವೃತ್ತಿಗಳನ್ನು ಅನುಭವಿಸುವದೂ-ಎಲ್ಲವೂ ಇರುತ್ತವೆ.

ವಿಶೇಷವಾಗಿ ಮನುಷ್ಯನಿಗೆ ಇಂದ್ರಿಯಮನಸ್ಸುಗಳಿಂದಾದ ಜ್ಞಾನವಲ್ಲದೆ, ಆ ಜ್ಞಾನಗಳನ್ನು ಒಂದಕ್ಕೊಂದು ಕೂಡಿಹಾಕಿಕೊಂಡು ಒಂದು ತಿಳಿವಳಿಕೆಯಿಂದ ಮತ್ತೊಂದು ತಿಳಿವಳಿಕೆಯನ್ನು ತರ್ಕಿಸಿ ಅರಿತುಕೊಳ್ಳುವ

ಶಕ್ತಿಯೂ ಇರುತ್ತದೆ. ಈ ಅರಿವಿಗೆ **ಅನುಮಾನಪ್ರಮಾಣಜನ್ಯಜ್ಞಾನ**ವೆಂದು ಹೆಸರು. ಮನುಷ್ಯನು ಪ್ರತಿಯೊಂದು ತಿಳಿವಳಿಕೆಯನ್ನೂ ನೇರಾಗಿ ಇಂದ್ರಿಯದಿಂದಲೇ ನೋಡಿ ಜ್ಞಾನವನ್ನು ಸಂಪಾದಿಸುವದಿಲ್ಲ; ತನ್ನ ಬುದ್ಧಿಯಿಂದ ತರ್ಕಿಸಿಯೂ ಜ್ಞಾನರಾಶಿಯನ್ನು ಕೂಡಿಹಾಕಿಕೊಳ್ಳುತ್ತಿದಾನೆ.

ಇದರ ಜೊತೆಗೆ **ವಾಕ್ಯಜನ್ಯಜ್ಞಾನವೂ** ಅವನಿಗೆ ಸಹಾಯಕವಾಗಿರುತ್ತದೆ. ಯಾವನು ಒಂದು ಪ್ರಮಾಣದಿಂದ ಅರಿತದ್ದನ್ನು ನಮಗೆ ತಿಳಿಸುವದಕ್ಕೆ ಶಕ್ತನಾಗಿದ್ದು ವಿಷಯವನ್ನು ತಿಳಿಸಿಕೊಡಬಲ್ಲನೋ ಅವನು ಆಪ್ತನು; ಅವನ ವಾಕ್ಕಿನಿಂದಲೂ ನಾವು ವಸ್ತುತತ್ತ್ವವನ್ನು ತಿಳಿದುಕೊಳ್ಳಬಹುದು. ಉದಾಹರಣೆಗೆ ಪಾಶ್ಚಾತ್ಯದೇಶಗಳಿಗೆ ಹೋಗಿ ಅಲ್ಲಿಯ ಜನರ ಮತ್ತು ವಸ್ತುಗಳ ಸ್ವಭಾವವನ್ನು ಅರಿತವರು ಹೇಳಿಕೊಡುವದರಿಂದ ನಮಗೂ ಆ ದೇಶಗಳ ಜನರ ಮತ್ತು ವಸ್ತುವಿನ ಜ್ಞಾನವು ಪರೋಕ್ಷವಾಗಿ ಆಗಬಹುದಾಗಿರುತ್ತದೆ. ನಾವೂ ನಮಗೆ ತಿಳಿದದ್ದನ್ನು ಮತ್ತೊಬ್ಬರಿಗೆ ಹೀಗೆಯೇ ವಾಕ್ಯದ ಮೂಲಕ ತಿಳಿಯಪಡಿಸಬಹುದು. ಅಂತೂ ಹೀಗೆ ನಿಸರ್ಗವಾದ ಅರಿವು, ಇಂದ್ರಿಯಗಳು, ಮನಸ್ಸು, ಬುದ್ಧಿ, ತರ್ಕ, ಆಪ್ತವಾಕ್ಯ– ಈ ದ್ವಾರಗಳಿಂದ ನಾವು ವ್ಯವಹಾರಕ್ಕೆ ಗೋಚರವಾಗುವ ವಸ್ತುಗಳ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತೇವೆ–ಎಂದಾಯಿತು.

ಆದರೆ ಬ್ರಹ್ಮಾತ್ಮಜ್ಞಾನವೆಂಬುದು ಹೀಗೆ ವ್ಯವಹಾರಗೋಚರವಸ್ತುವಿನ ಜ್ಞಾನವಲ್ಲವೆಂದು ಶ್ರುತಿಗಳು ಹೇಳುತ್ತಿವೆ.

**(೧) ಯತೋ ವಾಚೋ ನಿವರ್ತಂತೇ।**
**ಅಪ್ರಾಪ್ಯ ಮನಸಾ ಸಹ ।**
**ಆನಂದಂ ಬ್ರಹ್ಮಣೋ ವಿದ್ವಾನ್।**
**ನ ಬಿಭೇತಿ ಕುತಶ್ಚನೇತಿ ॥** ತೈ. ೨-೯.

ಯಾವದು ಇಂದ್ರಿಯಗಳಿಗೆ ಗೋಚರವಾಗುತ್ತದೆಯೋ ಅದರ ವಿಷಯದಲ್ಲಿ ನಾವು ಮನಸ್ಸಿನಲ್ಲಿ ಪ್ರತ್ಯಯಗಳನ್ನು ಮಾಡಿಕೊಳ್ಳಬಹುದಾಗಿರುತ್ತದೆ; ಮತ್ತು ಮತ್ತೊಬ್ಬರಿಗೆ ತಿಳಿಯಿಸಿಕೊಡಲೂಬಹುದಾಗಿರುತ್ತದೆ. ಆದ್ದರಿಂದ ಅದು ವಾಕ್ಕಿಗೆ ಗೋಚರವಾದದ್ದು ಎಂದರೆ ಇಂದ್ರಿಯಗಳಿಗೆ ವಿಷಯ

ವಾದದ್ದು ಎಂದು ಇಟ್ಟುಕೊಳ್ಳಬಹುದು. ಆದರೆ ಬ್ರಹ್ಮದ ಆನಂದಸ್ವರೂಪವು ವಾಕ್ಕಿಗೆ ಗೋಚರವಲ್ಲ-ಎಂದು ಶ್ರುತಿಯು ಹೇಳುತ್ತಿದೆ. ಹೀಗಿದ್ದರೂ ಆ ಬ್ರಹ್ಮಾನಂದವನ್ನು ಅರಿತುಕೊಂಡವನು ಏತಕ್ಕೂ ಅಂಜುವದಿಲ್ಲ-ಎಂದೂ ಹೇಳುತ್ತಿದೆಯಲ್ಲ ! ಇದು ಹೇಗೆ ಸಾಧ್ಯ ?

**(೨) ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್**
**ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ।**

ಮುಂ. ೧-೨-೧೨.

**(೧) ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್**
**ಪ್ರಶಾಂತಚಿತ್ತಾಯ ಶಮಾನ್ವಿತಾಯ ।**
**ಯೇನಾಕ್ಷರಂ ಪುರುಷಂ ವೇದ ಸತ್ಯಂ**
**ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಮ್ ॥**

ಮುಂ. ೧-೨-೧೩.

ನಿತ್ಯವಾದ ಬ್ರಹ್ಮತತ್ತ್ವವನ್ನು ಅರಿತುಕೊಳ್ಳುವದಕ್ಕೆ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವನ್ನೇ ವಿನಯದಿಂದ ಬಳಿಸಾರಬೇಕು. ಹಾಗೆ ವಿಧಿವತ್ತಾಗಿ ತನ್ನಲ್ಲಿಗೆ ಶಿಷ್ಯನಾಗಿ ಬಂದವನಿಗೆ ಅವನು ಚೆನ್ನಾಗಿ ಪ್ರಶಾಂತವಾದ ಚಿತ್ತವುಳ್ಳವನೂ ಇಂದ್ರಿಯನಿಗ್ರಹವನ್ನು ಮಾಡಿಕೊಂಡಿರುವವನೂ ಆಗಿದ್ದರೆ ಆ ಸತ್ಯವಾದ ಅಕ್ಷರವೆಂಬ ಪುರುಷನನ್ನು ತಿಳಿಯುವಂತೆ ಇದ್ದದ್ದು ಇದ್ದಂತೆ ಬ್ರಹ್ಮವಿದ್ಯೆಯನ್ನು ಹೇಳಿಕೊಡಬೇಕು - ಎಂದು ಮತ್ತೊಂದು ಶ್ರುತಿಯು ಹೇಳುತ್ತಿದೆ. ಯೋಗ್ಯನಾದ ಶಿಷ್ಯನಿಗೆ ಬಲ್ಲವನಾದ ಗುರುವು ಬ್ರಹ್ಮವಿದ್ಯೆಯನ್ನು ಹೇಳಿಕೊಡಬೇಕು-ಎಂದದ್ದರಿಂದ ಇದನ್ನು ಸದ್ಗುರುವಾದವನು ಉಪದೇಶಿಸುವದಕ್ಕೆ ಬರುತ್ತದೆ ಎಂದಾಗುತ್ತದೆ. ಆದರೆ ಯಾವದು ವಾಕ್ಕಿಗೆ ಗೋಚರವಲ್ಲವೋ ಯಾವದು ಮನಸ್ಸಿಗೂ ವಿಷಯವಲ್ಲವೋ ಅದನ್ನು ಗುರುವಾದರೂ ಹೇಗೆ ಹೇಳಿಕೊಟ್ಟಾನು ? ಆಪ್ತವಾಕ್ಯದಿಂದ ನಮಗೆ ವ್ಯವಹಾರಜ್ಞಾನವು ಆಗುತ್ತದೆ ಎಂಬುದು ನಿಜ. ಆದರೆ ಆಪ್ತರಾದವರಾದರೂ ತಾವು ಪ್ರಮಾಣಾಂತರದಿಂದ ತಿಳಿದುಕೊಂಡದ್ದನ್ನಲ್ಲವೆ, ಹೇಳಿಕೊಟ್ಟಾರು ? ಎಂಥ ಶಕ್ತನಾದರೂ, ಎಂಥ ಕರುಣಾಳು

ವಾದರೂ ತನಗೇ ತಿಳಿಯುವದಕ್ಕೆ ಬರಲಾರದ್ದನ್ನು ಹೇಗೆ ಹೇಳಿಕೊಟ್ಟಾನು? ಶ್ರುತಿಯೇ ಹೀಗೆಂದು ಹೇಳುತ್ತಿದೆ

(೨) **ಕೋ ಅದ್ಧಾ ವೇದ ಕ ಇಹ ಪ್ರವೋಚೆತ್**
**ಕುತ ಆಜಾತಾ ಕುತ ಇಯಂ ವಿಸೃಷ್ಟಿಃ ।**
ಋ. ೧೦-೧೨೯-೬.

"ಈ ಸೃಷ್ಟಿಯು ಹೇಗೆ ಯಾರಿಂದ ಆಗಿಬಂದಿರುವದೋ ಅದನ್ನು ಯಾರು ಬಲ್ಲರು ? ಅದನ್ನು ಯಾರುತಾನೆ ಹೇಳಿಯಾರು ?" ಜಗತ್ಕಾರಣ ವಾಗಿರುವ ಬ್ರಹ್ಮವೆಂಬುದು ಅತೀಂದ್ರಿಯವಾಗಿರುವದರಿಂದ ಅದಕ್ಕೆ ಜಗತ್ತಿನ ಯಾವ ಸಂಬಂಧವಿದೆ-ಎಂಬುದನ್ನು ಯಾರುತಾನೆ ಹೇಗೆ ಸ್ಪಷ್ಟವಾಗಿ ತಿಳಿದು ಕೊಳ್ಳಲಾದೀತು ? ಯಾವದು ವಾಕ್ಕಿಗೆ ವಿಷಯವೇ ಅಲ್ಲವೋ ಅದನ್ನು ಯಾರುತಾನೆ ಹೇಳಬಲ್ಲರು ?

(೧) **ನ ತತ್ರ ಚಕ್ಷುರ್ಗಚ್ಛತಿ**
**ನ ವಾಗ್ಗಚ್ಛತಿ ನೋ ಮನಃ ।**
**ನ ವಿದ್ಮೋ ನ ವಿಜಾನೀಮೋ**
**ಯಥೈತದನುಶಿಷ್ಯಾತ್ ॥** ಕೇ. ೧-೩.

"ಅದನ್ನು ಕಣ್ಣು ಮುಟ್ಟಲಾರದು, ವಾಕ್ಕು ತಿಳಿಸಲಾರದು, ಮನಸ್ಸೂ ಹಿಡಿಯಲಾರದು ; ಅದನ್ನು ಹೇಗೆ ಅರಿತುಕೊಳ್ಳಬೇಕೋ, ಹೇಗೆ ತಿಳಿಸಿಕೊಡಬೇಕೋ ನಮಗೆ ತಿಳಿಯದು, ನಾವರಿಯೆವು" ಎಂದು ಬ್ರಹ್ಮ ವನ್ನು ಯಾವ ಪ್ರಮಾಣದಿಂದಲೂ ಅರಿತುಕೊಳ್ಳುವದಕ್ಕೆ ಆಗಲಾರದೆಂದೇ ಸಾರಿಸಾರಿ ಹೇಳುತ್ತಿರುವ ಶ್ರುತಿಯೇ **'ಆಚಾರ್ಯವಾನ್ ಪುರುಷೋ ವೇದ'** ಉತ್ತಮನಾದ ಆಚಾರ್ಯನನ್ನು ಪಡೆದುಕೊಂಡಿರುವಾತನು ಅದನ್ನು ತಿಳಿದುಕೊಳ್ಳುತ್ತಾನೆ-ಎಂದೂ ಹೇಳುತ್ತಿದೆ.

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥**
ಗೀ. ೪-೩೪.

–ಗುರುಗಳಿಗೆ ನಮಸ್ಕರಿಸಿ, ವಿನಯದಿಂದ ಪ್ರಶ್ನೆಮಾಡುವದರಿಂದಲೂ ಸೇವೆಯನ್ನು ಮಾಡುವದರಿಂದಲೂ ಆ ಜ್ಞಾನವನ್ನು ಸಂಪಾದಿಸಿಕೊ – ಎಂಬುದನ್ನು ಸ್ಮೃತಿಯೂ ಹೇಳುತ್ತಿದೆಯಲ್ಲ! ಆ ಗುರುಗಳು ಹೇಗೆ ತಿಳಿಸಿ ಕೊಟ್ಟಾರೊ !-ಎಂದು ನಮಗೆಲ್ಲ ಕುತೂಹಲವಾಗುವದು ಖಂಡಿತ.

ಇನ್ನು ನಾವು ಏತರಿಂದ ಈ ಬ್ರಹ್ಮವನ್ನು ಅರಿತುಕೊಳ್ಳಬೇಕೆಂಬ ಬಗ್ಗೆ ಶ್ರುತಿಯು ಏನು ಹೇಳುತ್ತಿದೆಯೋ ನೋಡೋಣ !

(೨) **ಮನಸೈವೇದಮಾಪ್ತವ್ಯಂ**
**ನೇಹ ನಾನಾಸ್ತಿ ಕಿಂಚನ ।**
**ಮೃತ್ಯೋಃ ಸ ಮೃತ್ಯುಂ ಗಚ್ಛತಿ**
**ಯ ಇಹ ನಾನೇವ ಪಶ್ಯತಿ ॥** ಕ. ೨-೧-೧೧.

ಈ ಶ್ರುತಿಗೆ ಅರ್ಥವನ್ನು ಶ್ರೀಶಂಕರಭಗವತ್ಪಾದರು ಹೀಗೆ ಬಿಡಿಸಿರುತ್ತಾರೆ :

(೧) **'ಪ್ರಾಗೇಕತ್ವವಿಜ್ಞಾನಾತ್ ಆಚಾರ್ಯಾಗಮಸಂಸ್ಕೃತೇನ ಮನಸೈವ**– ಒಂದೇ ಒಂದು ಅದ್ವಿತೀಯತತ್ತ್ವವು ನಿಜವಾಗಿರುತ್ತದೆ ಎಂಬ ವಿಜ್ಞಾನವಾಗುವದಕ್ಕಿಂತ ಮುಂಚೆ ಆಚಾರ್ಯರಿಂದಲೂ ಆಗಮದಿಂದಲೂ ಸಂಸ್ಕೃತವಾದ ಮನಸ್ಸಿನಿಂದಲೇ ಇದನ್ನು ಅರಿತುಕೊಳ್ಳಬೇಕು.' ಭಗವದ್ಗೀತಾಭಾಷ್ಯದಲ್ಲಿ ಇದೇ ಆಚಾರ್ಯರು ಬರೆದಿರುವದೇನೆಂದರೆ :

**ಶಾಸ್ತ್ರಾಚಾರ್ಯೋಪದೇಶಶಮದಮಾದಿಸಂಸ್ಕೃತಂ ಮನಃ ಆತ್ಮದರ್ಶನೇ ಕರಣಮ್'** ॥ ಗೀ. ಭಾ. ೨-೨೧.

ತಾನೇ ಸ್ವತಂತ್ರವಾಗಿ ತಿಳಿಯುವದಕ್ಕಾಗುವದಿಲ್ಲವಾದರೂ ಶಾಸ್ತ್ರೋಪದೇಶದಿಂದಲೂ ಆಚಾರ್ಯರ ಉಪದೇಶದಿಂದಲೂ ಶಮದಮಾದಿಸಾಧನಗಳಿಂದಲೂ ಮನಸ್ಸಿಗೆ ಸಂಸ್ಕಾರವನ್ನು ಮಾಡಿಕೊಂಡರೆ ಅದು ಆತ್ಮನನ್ನು ತಿಳಿದುಕೊಳ್ಳುವದಕ್ಕೆ ಯೋಗ್ಯವಾಗುತ್ತದೆ.

(೨) **ಇದಂ ಬ್ರಹ್ಮ ಏಕರಸಮ್ ಆಪ್ತವ್ಯಮ್ ಆತ್ಮೈವ ನಾನ್ಯದಸ್ತೀತಿ ।** ಇದನ್ನು ಎಂದರೆ ಈ ಅಖಂಡೈಕರಸವಾದ ಬ್ರಹ್ಮವನ್ನು, 'ಇದು ಆತ್ಮನೇ ಆಗಿದೆ; ಇದಕ್ಕಿಂತ ಬೇರೆಯಿಲ್ಲ' ಎಂದು ಅರಿತುಕೊಳ್ಳಬೇಕು.

(೩) **ಅಸ್ಮೇ ಚ ನಾನಾತ್ವಪ್ರತ್ಯುಪಸ್ಥಾಪಿಕಾಯಾ ಅವಿದ್ಯಾಯಾ ನಿವೃತ್ತತ್ವಾತ್, ಇಹ ಬ್ರಹ್ಮಣಿ ನಾನಾ ನಾಸ್ತಿ ಕಿಞ್ಚನ ಅಣುಮಾತ್ರ ಮಪಿ ।** ಈ ಬ್ರಹ್ಮವನ್ನು ಪಡೆದುಕೊಂಡಮೇಲೆ, ಭೇದವನ್ನು ಕಲ್ಪಿಸುವ ಅವಿದ್ಯೆಯು ತೊಲಗಿಹೋಗುವದರಿಂದ ಸ್ವಲ್ಪವೂ ಇದರಲ್ಲಿ ಭೇದವು ಇರು ವದೇ ಇಲ್ಲ.

(೪) **ಯಸ್ತು ಪುನಃ, ಅವಿದ್ಯಾತಿಮಿರದೃಷ್ಟಿಂ ನ ಮುಞ್ಚತಿ ಇಹ ಬ್ರಹ್ಮಣಿ ನಾನೇವ ಪಶ್ಯತಿ ಸ ಮೃತ್ಯೋರ್ಮೃತ್ಯುಂ ಗಚ್ಛತಿ ॥** ಆದರೆ ಯಾವನು ಅವಿದ್ಯೆಯೆಂಬ ಕಣ್ಣುಪರೆಯ ದೃಷ್ಟಿಯನ್ನು ಬಿಟ್ಟಿರುವದಿಲ್ಲ ವೋ, ಅದರಿಂದ ಈ ಬ್ರಹ್ಮದಲ್ಲಿ ಭೇದವಿರುವಂತೆ ಕಾಣುತ್ತಿರುವನೋ ಅವನು ಸಾವಿನಮೇಲೆ ಸಾವನ್ನು ಪಡೆದುಕೊಳ್ಳುವನು.

ಈ ಭಾಷ್ಯದಿಂದ ತಿಳಿಯಬರುವದೇನೆಂದರೆ ಪ್ರಾಕೃತರ ವಾಙ್ಮನಸ್ಸು ಗಳಿಗೆ ಬ್ರಹ್ಮವು ಸಿಕ್ಕುವದಿಲ್ಲವಾದರೂ, ಆಚಾರ್ಯರು ಮಾಡುವ ಉಪದೇಶ ವಾಕ್ಯದಿಂದ ಅದನ್ನು ತಿಳಿದುಕೊಳ್ಳಬಹುದು. ಆಚಾರ್ಯರೆಂದರೆ ಶಾಸ್ತ್ರಾರ್ಥವನ್ನು ಬಲ್ಲವರಾಗಿದ್ದುಕೊಂಡು, ಅದನ್ನು ವಿವರಿಸಿ ಹೇಳಬಲ್ಲವ ರಾಗಿರುವವರು. ಶಿಷ್ಯರನ್ನು ಶಿಷ್ಟಾಚಾರದಲ್ಲಿ ನಿಲ್ಲಿಸಬಲ್ಲವರು, ಮತ್ತು ತಾವೂ ಆ ಆಚಾರದಲ್ಲಿರುವವರು. ಪ್ರಕೃತದಲ್ಲಿ ಬ್ರಹ್ಮವನ್ನು ತಿಳಿಸುವ ಶ್ರುತಿಗಳ ಅಭಿಪ್ರಾಯವನ್ನು ಬಲ್ಲವರಾಗಿದ್ದುಕೊಂಡು ತಾವೂ ಬ್ರಹ್ಮತತ್ತ್ವ ವನ್ನು ಕಂಡುಕೊಂಡು ಬ್ರಹ್ಮನಿಷ್ಠರಾಗಿರುವರಲ್ಲದೆ, ತಮ್ಮಲ್ಲಿಗೆ ಶರಣುಬಂದ ಶಿಷ್ಯರನ್ನು ಉಪದೇಶದಿಂದ ಅನುಗ್ರಹಿಸುವವರೇ ನಿಜವಾದ ಆಚಾರ್ಯರು. ಅಂಥ ಆಚಾರ್ಯರು ತಿಳಿಸಿಕೊಟ್ಟ ಶಾಸ್ತ್ರದ ಅಭಿಪ್ರಾಯದಿಂದಲೂ ಶಮ ದಮಾದಿಸಾಧನಗಳನ್ನು ಅನುಷ್ಠಾನಮಾಡುವದರಿಂದಲೂ ಮನಸ್ಸಿನ ಕಲ್ಮಷವೆಲ್ಲ ಹೋದಾಗ ಅದು ಬ್ರಹ್ಮತತ್ತ್ವವನ್ನು ಅರಿತುಕೊಳ್ಳುವ ಯೋಗ್ಯತೆಯನ್ನು ಪಡೆದುಕೊಳ್ಳುವದು.

ಬ್ರಹ್ಮವನ್ನು ಅರಿತುಕೊಳ್ಳುವ ಮುಂಚೆ ಅರಿಯುವಾತನು, ಅರಿವು, ಅರಿತುಕೊಳ್ಳಬೇಕಾಗಿರುವ ಬ್ರಹ್ಮ– ಎಂಬ ಭೇದವೂ ಈಗ ನಮಗೆಲ್ಲ ಅನು ಭವದಲ್ಲಿರುವ ನಾನಾಜೀವರುಗಳೂ ಬಗೆಬಗೆಯ ಅಚೇತನವಸ್ತುಗಳೂ ಇರುವ ಪ್ರಪಂಚರೂಪವಾದ ಭೇದವೂ ಇರುತ್ತವೆ. ಆದರೆ ಅದನ್ನು ಅರಿತು

ಕೊಂಡಮೇಲೆ ಅಖಂಡೈಕರಸವಾದ ಬ್ರಹ್ಮವೊಂದೇ ಇರುತ್ತದೆ; ಭೇದವೆಂಬುದು ಅಣುಮಾತ್ರವೂ ಉಳಿದಿರುವದಿಲ್ಲ.

ಬ್ರಹ್ಮವನ್ನು ಅರಿತುಕೊಂಡಮಾತ್ರದಿಂದ ಭೇದವೆಲ್ಲವೂ ಅಳಿದು ಹೋಗುವದೆಂದದ್ದರಿಂದ ಈಗ ಕಾಣುವ ಭೇದವು ಅವಿದ್ಯೆಯಿಂದ- ಎಂದರೆ ತಪ್ಪು ತಿಳಿವಳಿಕೆಯಿಂದ- ತೋರುತ್ತಿರುವದೆಂದು ತಾನೇ ಸಿದ್ಧವಾಗುತ್ತದೆ. ಹೇಗೆ ಕಣ್ಣು ಪರೆಯು ಬರುತ್ತಿರುವವನಿಗೆ ಒಬ್ಬ ಚಂದ್ರನೇ ಅನೇಕಚಂದ್ರರಾಗಿ ಕಾಣುತ್ತಿರುವನೋ, ಆದರೆ ಹಾಗೆ ಕಾಣುವಾಗಲೂ ನಿಜವಾಗಿ ಒಬ್ಬನೇ ಚಂದ್ರನೇ ಇರುವನೋ, ಹಾಗೆಯೇ ಈ ಅವಿದ್ಯೆಯಿಂದ ಕ್ರಿಯಾಕಾರಕಫಲರೂಪವಾಗಿರುವ ಈ ಪ್ರಪಂಚವು ಅವಿದ್ಯೆಯಿರುವವರೆಗೂ ಕಾಣಿಸುತ್ತಲೇ ಇರುವದು. ಇದು ಅವಿದ್ಯೆ, ನಿಜವಾದ ಜ್ಞಾನವಲ್ಲ- ಎಂಬ ಭಾವನೆಯು ಮಾತ್ರ ನಮಗೆ ಇರುವದಿಲ್ಲ. ಪಶ್ವಾದಿಗಳಿಗೂ ನಮ್ಮಂತೆಯೇ ಅವಕ್ಕೆ ಕಾಣುವ ವಸ್ತುಗಳಲ್ಲಿ ಅನುಕೂಲ ಅಥವಾ ಪ್ರತಿಕೂಲ- ಎಂಬ ಬುದ್ಧಿಯುಂಟಾಗುತ್ತಿರುತ್ತದೆ. ಆದ್ದರಿಂದ ಅವೂ ನಮ್ಮಂತೆಯೇ ತಮಗೆ ಅನುಕೂಲವೆಂದು ಕಂಡು ವಿಷಯಗಳ ಕಡೆಗೆ ಪ್ರವೃತ್ತವಾಗುತ್ತಿರುವವು; ಪ್ರತಿಕೂಲವೆಂದು ಕಾಣುವ ವಿಷಯಗಳಿಂದ ನಿವೃತ್ತವಾಗುತ್ತಿರುವವು. ಇಷ್ಟು ಸಾಮ್ಯವು ಮನುಷ್ಯರಿಗೂ ಪಶ್ವಾದಿಗಳಿಗೂ ಸಮಾನವಾಗಿದ್ದರೂ ಮನುಷ್ಯನಿಗೆ ಬುದ್ಧಿಜನ್ಯವಾದ ತರ್ಕಜ್ಞಾನವಿರುತ್ತದೆ; ಮುಂದಕ್ಕೆ ಏನಾದೀತೆಂಬುದನ್ನು ವಿಚಾರದಿಂದ ಊಹಿಸಿಕೊಂಡು ಅದಕ್ಕನುಗುಣವಾಗಿ ಪ್ರವೃತ್ತಿನಿವೃತ್ತಿಗಳನ್ನು ವ್ಯವಸ್ಥೆಗೊಳಿಸುವ ಶಕ್ತಿಯು ಇರುತ್ತದೆ. ಆದರೆ ಇಂಥ ಜ್ಞಾನವು ಮನುಷ್ಯರಿಗೆ ಇರುವದೆಂಬುದರ ಕಲ್ಪನೆಯುಕೂಡ ಪಶ್ವಾದಿಗಳಿಗೆ ಉಂಟಾಗುವಹಾಗಿಲ್ಲ. ಅಲ್ಲವೆ? ಇದರಂತೆಯೇ 'ವಿವೇಕಿಗಳೆನಿಸಿಕೊಂಡಿರುವ ಸಾಮಾನ್ಯಮನುಷ್ಯರಿಗೂ ಬ್ರಹ್ಮಜ್ಞಾನಿಗಳಿಗೂ ವ್ಯವಹಾರದ ಪ್ರವೃತ್ತಿನಿವೃತ್ತಿಗಳಲ್ಲಿ ಸಾಮ್ಯವಿರುವಂತೆ ಕಂಡರೂ ಜ್ಞಾನಿಗಳಿಗೆ ಯಾವ ಭೇದವೂ ಇರುವದಿಲ್ಲವಂತೆ. ಅಖಂಡೈಕರಸವಾದ ಬ್ರಹ್ಮವನ್ನು ಇದೇ ಮನಸ್ಸಿನಿಂದ ಅವರು ಹೇಗೆ ಅರಿತುಕೊಳ್ಳುವರು? ಯಾವ ಶಬ್ದಪ್ರವೃತ್ತಿನಿಮಿತ್ತಗಳೂ ಇಲ್ಲದ ಅತೀಂದ್ರಿಯವಾದ ಆ ಬ್ರಹ್ಮವನ್ನು ಅವರು ಹೇಗೆ ಅರಿತುಕೊಳ್ಳುವರು?' ಎಂಬುದರ ಕಲ್ಪನೆ ನಮಗೆ ಉಂಟಾಗುವಹಾಗಿಲ್ಲ.

ಇಷ್ಟೇ ಅಲ್ಲ ಅತೀಂದ್ರಿಯವಾದ ತತ್ತ್ವವೊಂದು ಇದೆ ಎಂಬುದನ್ನು ನಾವು ಮನಸ್ಸಿನಿಂದ ಕಲ್ಪಿಸಿಕೊಳ್ಳಲೂ ಆರೆವು. ಅದನ್ನು ಅರಿತುಕೊಂಡು ವೇದಾಂತದಲ್ಲಿ ಹೇಳಿರುವ ಫಲವನ್ನು ಅನುಭವಿಸುವದು ಸಾಧ್ಯ- ಎಂಬ ಬಗ್ಗೆ ನಮಗೆ ಸಂಶಯಗಳು ಉಂಟಾಗುತ್ತಿರುವವು; ಸಂಶಯವೇಕೆ? ಅಂಥ ಅತೀಂದ್ರಿಯತತ್ತ್ವಜ್ಞಾನವು ಮನುಷ್ಯನಿಗೆ ಲಭಿಸುವ ಸಂಭವವೇ ಇಲ್ಲ- ಎಂದು ನಾವು ಯುಕ್ತಿಯಿಂದ ಸ್ಥಾಪಿಸಲೂ ಹಿಂಜರಿಯುವದಿಲ್ಲ. ಬ್ರಹ್ಮವನ್ನು ಅರಿತುಕೊಳ್ಳುವದಕ್ಕೂ ಉಪದೇಶಿಸುವದಕ್ಕೂ ಬೇರೆಯೊಂದು ಜ್ಞಾನದ್ವಾರವು ಇರಬಹುದೆಂದು ಯಾರು ಶ್ರದ್ಧೆಯಿಂದ ನಂಬುವರೋ, ಅದನ್ನು ಅರಿಯುವದಕ್ಕೆಂದು ಶಾಸ್ತ್ರಾಚಾರ್ಯರ ಉಪದೇಶವನ್ನು ಶ್ರವಣಮಾಡುವದಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಯತ್ನಿಸುತ್ತಿರುವರೋ ಅಂಥವರಿಗಾಗಿಯೇ ವೇದಾಂತದರ್ಶನವು ಹುಟ್ಟಿರುತ್ತದೆ. ಅದರ ಪ್ರಕಾರವನ್ನು ಈಗ ನಾವು ವಿಚಾರಮಾಡಬೇಕಾಗಿದೆ.

# ೩. ಬ್ರಹ್ಮಾನುದರ್ಶನಪ್ರಕಾರ

(30—4—53)

ಜ್ಞಾನದ ದ್ವಾರಗಳನ್ನು ಕುರಿತು ವಿಚಾರವನ್ನು ಮಾಡಿದ್ದಾಯಿತು. ನಮಗೆ ಆಗುತ್ತಿರುವ ಹೊರಗಿನ ವಿಷಯಗಳ ಅರಿವು, ಮನಸ್ಸಿನಲ್ಲಿ ಆಗುತ್ತಿರುವ ವೃತ್ತಿಗಳು, ವೇದನೆಗಳು, ತರ್ಕ, ಆಪ್ತವಾಕ್ಯ— ಇವುಗಳಿಂದ ನಮಗೆ ಜ್ಞಾನವಾಗುತ್ತಿದೆ ಎನ್ನುತ್ತೇವೆಯಲ್ಲ, ಹಾಗೆಂದರೇನು? ಇದನ್ನು ಈಗ ವಿಚಾರಮಾಡಬೇಕಾಗಿದೆ. ಕಣ್ಣಿನಿಂದ ನೋಡಿದ್ದರಿಂದ ರೂಪಜ್ಞಾನವಾಯಿತು; ಕಿವಿಯಿಂದ ಕೇಳಿದ್ದರಿಂದ, ಮೂಗಿನಿಂದ ಮೂಸಿದ್ದರಿಂದ, ಕೈಯಿಂದ ಮುಟ್ಟಿದ್ದರಿಂದ, ನಾಲಗೆಯಿಂದ ಸವಿದದ್ದರಿಂದ, ಮನಸ್ಸಿನಿಂದ ವಿಚಾರಮಾಡಿದ್ದರಿಂದ 'ನನಗೆ ಇಂಥಿಂಥ ವಿಷಯದ ಜ್ಞಾನವಾಯಿತು' ಎಂದು ಜನರು ವ್ಯವಹರಿಸುತ್ತಾರೆ. ಆದರೆ ಇದು ಶರೀರ, ಇದು ಇಂದ್ರಿಯ, ಇದು ವಿಷಯ, ಇದು ಮನಸ್ಸು, ಇವು ರಾಗದ್ವೇಷಾದಿಗಳು— ಎಂಬುದು ನಮಗೆ ಹೇಗೆ ಗೊತ್ತಾಗುತ್ತದೆ? ಜ್ಞಾನವುಂಟಾಗುವ ಮುಂಚೆಯೇ ನಾವು ಜ್ಞಾನಕ್ಕಾಗಿ ಪ್ರವರ್ತಿಸುತ್ತೇವಷ್ಟೆ? ಆಗ ಆ ಪ್ರವೃತ್ತಿಯು ಆಗುವದೆಂಬುವರ ಅರಿವು ನಮಗೆ ಹೇಗೆ ಆಗುತ್ತದೆ? 'ಜ್ಞಾನವು ಆಯಿತು' ಎನ್ನುವಾಗ ನಮ್ಮಲ್ಲಿ ವಿಶೇಷವೇನು? ಇದನ್ನು ಲಕ್ಷ್ಯವಿಟ್ಟು ನೋಡಿ ಅರಿತುಕೊಳ್ಳುವದು ಅವಶ್ಯ.

ಇಂದ್ರಿಯಗಳು, ಮನಸ್ಸು— ಮುಂತಾದ ಸಾಧನಗಳು ವ್ಯಾಪಾರ ಮಾಡುವದನ್ನೂ ಬಿಡುವದನ್ನೂ— ಇಂದ್ರಿಯಗಳ ಆಲೋಚನೆ, ಮನಸ್ಸಿನ ಸಂಕಲ್ಪವಿಕಲ್ಪಗಳು, ಪ್ರವೃತ್ತಿನಿವೃತ್ತಿಗಳು, ಅವಸ್ಥೆಗಳು ಈ ಎಲ್ಲವನ್ನೂ ಬೆಳಗುತ್ತಿರುವ ನಮ್ಮ ಸ್ವರೂಪವೊಂದುಂಟು. ಅದಕ್ಕೆ **ಸಿದ್ಧಾನುಭವ** ಎಂಬ ಹೆಸರನ್ನು ಕೊಡಬಹುದು. 'ಅನುಭವ'ವೆಂಬ ಮಾತನ್ನು ನಾವು ಅನು— ಆಮೇಲೆ ಭವ— ಆದದ್ದು ಎಂಬ ಅಕ್ಷರಾರ್ಥವನ್ನು ಹಿಡಿದು 'ಈಗ ನಿಶ್ಚಿತಾನುಭವವಾಯಿತು'— ಎಂದು ಮುಂತಾಗಿ ವ್ಯವಹರಿಸುತ್ತಿರುತ್ತೇವೆ. ಹೀಗೆ ಆಗುವದನ್ನು **'ಫಲಾನುಭವ'** ಎಂದು ಕರೆಯಬಹುದು. ಈ ಅನು

ಭವವು ಪ್ರಮಾಣದ ಫಲವಾಗಿರುವದರಿಂದ ಇದನ್ನು ಪ್ರಮಿತಿ, ಅವಗತಿ - ಎಂದೂ ಕರೆಯುತ್ತಾರೆ. ಬೆಂಕಿಕಡ್ಡಿಯನ್ನು ಗೀರಿದಾಗ ಎದ್ದುತೋರುವ ಬೆಂಕಿಯ ಉರಿಯಂತೆ **ಈ ಅನುಭವವು ಆಯಾ ಪ್ರಮಾಣದ ವ್ಯಾಪಾರದ ಕೊನೆಯಲ್ಲಿ ಕಾಣಿಸುವದಾದರೂ ನಿಜವಾಗಿ ಅದೇನೂ ಹೊಸದಾಗಿ ಉಂಟಾದ 'ಅನು'ಭವವಲ್ಲ ; ಏಕೆಂದರೆ ನಮ್ಮ ಆತ್ಮನೇ ಎಂದರೆ ನಿಜವಾದ ಸ್ವರೂಪವೇ ಅನುಭವವಾಗಿರುತ್ತದೆ.** ಮೊದಲೇ ಸಿದ್ಧವಾಗಿರುವ ಚೈತನ್ಯವಿದು ಎಂಬುದನ್ನು ತಿಳಿಸುವದಕ್ಕೆ ಇದನ್ನು 'ಅನುಭೂತಿ' 'ಚೈತನ್ಯ'-ಎಂದೂ ಕರೆಯುತ್ತಾರೆ.

ನಿಜವಾಗಿ ನೋಡಿದರೆ ಈ ಅನುಭವಕ್ಕೆ ಸಂಬಂಧಿಸದೆ ಇರುವ ಯಾವ ವಸ್ತುವೂ ಇಲ್ಲ; ಇದು 'ಇದೆ' ಎನ್ನುವದಕ್ಕೆ ಅನುಭೂತಿಯ ಸಂಬಂಧವಾಗಬೇಕು. ಆದ್ದರಿಂದಲೇ ಶ್ರುತಿಯು ಹೀಗೆನ್ನುತ್ತಿದೆ :

**ಏಕೋ ದೇವಃ ಸರ್ವಭೂತೇಷು ಗೂಢಃ**
**ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।**
**ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ**
**ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥** ಶ್ವೇ. ೬-೧೧

ಒಬ್ಬನೇ ಒಬ್ಬ ಪ್ರಕಾಶಸ್ವರೂಪನಾದ ದೇವನು ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳೊಳಗೂ ಅಡಗಿಕೊಂಡಿರುತ್ತಾನೆ. ಅವನು ಎಲ್ಲವನ್ನೂ ವ್ಯಾಪಿಸಿಕೊಂಡಿರುತ್ತಾನೆ; ಎಲ್ಲಾ ಭೂತಗಳಿಗೂ ಅವನು ಅಂತರಾತ್ಮನಾಗಿರುತ್ತಾನೆ. ಅವನೇ ಎಲ್ಲಾ ಕರ್ಮಫಲಗಳಿಗೂ ಅಧ್ಯಕ್ಷನಾಗಿದ್ದುಕೊಂಡು ಸರ್ವಭೂತಗಳೊಳಗೂ ಇದ್ದುಕೊಂಡಿರುವಾತನು, ಅವನು ನೇರಾಗಿಯೇ ಎಲ್ಲವನ್ನೂ ನೋಡುತ್ತಿರುತ್ತಾನೆ, ಚೈತನ್ಯಸ್ವರೂಪನಾಗಿರುತ್ತಾನೆ, ಅದ್ವಿತೀಯನಾಗಿರುತ್ತಾನೆ, ಯಾವ ಗುಣವೂ ಇಲ್ಲದವನಾಗಿರುತ್ತಾನೆ-ಹೀಗೆಂಬುದು ಶ್ರುತಿಯ ಅರ್ಥ.

ಈ ಅನುಭವದಿಂದ ವ್ಯಾಪ್ತವಾಗಿಯೇ ನಮ್ಮ ಇಂದ್ರಿಯಗಳು, ಮನಸ್ಸು-ಮುಂತಾದವುಗಳೆಲ್ಲ ಚಿದ್ರೂಪವಾಗಿರುವಂತೆ ತೋರುತ್ತಿರುತ್ತವೆ. ನದಿಯಲ್ಲಿ ಅಥವಾ ಸಮುದ್ರದಲ್ಲಿ ಸಂಚರಿಸುತ್ತಿರುವ ಮೀನುಗಳಿಗೆ ಮೇಲೆ, ಕೆಳಗೆ, ಎಡಕ್ಕೆ, ಬಲಕ್ಕೆ- ಎಲ್ಲೆಲ್ಲಿಯೂ ನೀರೇ ಇರುವಂತೆ ನಮ್ಮ ಶರೀರ,

ಇಂದ್ರಿಯ, ಮನಸ್ಸು, ವೇದನೆಗಳು, ಬಾಹ್ಯವಿಷಯಗಳು–ಎಲ್ಲವೂ ಈ ಅನುಭವಸಾಗರದೊಳಗೇ ಮುಳುಗಿರುತ್ತವೆ. ಇಂದ್ರಿಯಗಳ ಮತ್ತು ಮನಸ್ಸಿನ ವೃತ್ತಿಗಳು ಈ ಅನುಭವದಿಂದ ವ್ಯಾಪ್ತವಾಗಿ ಇದರ ಪ್ರತಿಚ್ಛಾಯೆಯಿಂದೊಡಗೂಡಿರುವದರಿಂದಲೇ–ವಿದ್ಯುದ್ದೀಪದ ಬೆಳಕಿನಿಂದ ವ್ಯಾಪ್ತವಾಗಿರುವ ಬಲ್ಬುಗಳಂತೆ-ಆ ಕರಣಗಳೂ ಬೆಳಗುತ್ತಿರುವದರಿಂದಲೇ ತಾವೂ ಚಿನ್ಮಯವಾಗಿರುವಂತೆ ತೋರುತ್ತಿರುವವು. ಇಂದ್ರಿಯಜನ್ಯಜ್ಞಾನಗಳು ಬಗೆಬಗೆಯಾಗಿ ತೋರುತ್ತಿದ್ದರೂ ಜ್ಞಾನವೆಲ್ಲ ಒಂದೇ ರೂಪವಾಗಿರುತ್ತದೆ. ಮನೆಯೊಳಗಿನ ದೀಪದ ಬೆಳಕು ಕಿಟಕಿಯ ದ್ವಾರದಿಂದ ಹೊರಕ್ಕೆ ಸೂಸಿತೋರುವಂತೆ ನಿತ್ಯ ಸಿದ್ಧವಾದ ಅನುಭವವೇ ಬೇರೆಬೇರೆಯ ಇಂದ್ರಿಯಾದಿದ್ವಾರಗಳಿಂದ ಹೊರ ಹೊರಟು, ಆಯಾ ಪ್ರಮಾಣಪ್ರತ್ಯಯದ ಕೊನೆಯಲ್ಲಿ ಅಭಿವ್ಯಕ್ತವಾಗುವದರಿಂದ ಶಬ್ದಸ್ಪರ್ಶರೂಪರಸಾದಿಗಳ 'ಜ್ಞಾನವಾಯಿತು' ಎಂಬ ವ್ಯವಹಾರವು ಉಂಟಾಗುವದು. ಸರಿಯಾಗಿ ನೋಡಿದರೆ ಜ್ಞಾನವು– ಎಂದರೆ ಫಲರೂಪವಾದ ಅವಗತಿಯು– ಹೊಸದಾಗಿ ಉಂಟಾಗುವದಿಲ್ಲ. ಮೊದಲೇ ಸಿದ್ಧವಾಗಿದ್ದ ಚೈತನ್ಯವೇ ಆಯಾ ಪ್ರತ್ಯಯಗಳ ಕೊನೆಯಲ್ಲಿ ಅಭಿವ್ಯಕ್ತವಾಗುತ್ತಿರುತ್ತದೆ. ಚಂದ್ರನು ಮೋಡದಿಂದ ಮರೆಯಾಗಿದ್ದು ಮೋಡವು ಅತ್ತಸರಿಯಲು, 'ಇಗೊ, ಚಂದ್ರನು ಈ ಕಡೆಗೆ ಬಂದನು' ಎಂದು ವ್ಯವಹರಿಸುವಂತೆಯೇ ಸಾಮಾನ್ಯಜನರು 'ಜ್ಞಾನವಾಯಿತು' ಎಂದು ವ್ಯವಹರಿಸುತ್ತಿರುತ್ತಾರೆ. ನಿಜವಾಗಿ ನೋಡಿದರೆ ಹೊಸದಾಗಿ ಆದದ್ದೆಂಬುದು ಆಯಾ ಪ್ರತ್ಯಯರೂಪವಾದ ವಿಕಾರವು; ಜ್ಞಾನವು ಆಯಾ ಅವಗತಿಯ ರೂಪದಿಂದ ಅಭಿವ್ಯಕ್ತವಾಗಿರುತ್ತದೆಯೇ ಹೊರತು ಹೊಸದಾಗಿ ಹುಟ್ಟಿರುವದಿಲ್ಲ. ಇದು ಗಂಧಜ್ಞಾನ, ಇದು ರಸಜ್ಞಾನ– ಎಂಬ ಜ್ಞಾನವಿಶೇಷರೂಪವಾದರೊ– ಹಸರು, ಕೆಂಪು, ಹಳದಿ– ಮುಂತಾದ ಬಲ್ಬುಗಳ ಬಣ್ಣದಿಂದ ಬೆಳಕೂ ಆಯಾ ಬಣ್ಣವನ್ನು ತಳೆದಿರುವಂತೆ ತೋರುವಹಾಗೆ– ಆಯಾ ಇಂದ್ರಿಯಾದಿವೃತ್ತಿಗಳ ರೂಪವಿಶೇಷದಿಂದ ಜ್ಞಾನದಲ್ಲಿ ಅಧ್ಯಸ್ತವಾಗಿರುತ್ತದೆ. ಅಷ್ಟೆ.

ಈ ವಿಶೇಷಜ್ಞಾನಗಳೇ ಆತ್ಮನ ರೂಪಗಳೆಂದು ಭ್ರಾಂತರಾಗಬಾರದು- ಎಂಬುದನ್ನು ಶ್ರುತಿಯು ಹೀಗೆಂದು ಹೇಳುತ್ತಿದೆ :

**ಸ ಏಷ ಇಹ ಪ್ರವಿಷ್ಟಃ । ಆ ನಖಾಗ್ರೇಭ್ಯೋ ಯಥಾ ಕ್ಷುರಃ ಕ್ಷುರಧಾನೇಽವಹಿತಃ ಸ್ಯಾತ್ ವಿಶ್ವಂಭರೋ ವಾ ವಿಶ್ವಂಭರ ಕುಲಾಯೇ ತಂ ನ ಪಶ್ಯಂತಿ । ಅಕೃತ್ಸ್ನೋ ಹಿ ಸ ಪ್ರಾಣನ್ನೇವ ಪ್ರಾಣೋ ನಾಮ ಭವತಿ । ವದನ್ ವಾಕ್ ಪಶ್ಯಂಶ್ಚಕ್ಷುಃ ಶೃಣ್ವನ್ ಶ್ರೋತ್ರಂ ಮನ್ವಾನೋ ಮನಸ್ತಾನ್ಯಸ್ಯೈತಾನಿ ಕರ್ಮನಾಮಾನ್ಯೇವ । ಸ ಯೋಽತ ಏಕೈಕಮುಪಾಸ್ತೇ ನ ಸ ವೇದ ಅಕೃತ್ಸ್ನೋ ಹ್ಯೇಷೋಽತ ಏಕೈಕೇನ ಭವತಿ ಆತ್ಮೇತ್ಯೇವೋಪಾಸೀತಾತ್ರ ಹ್ಯೇತೇ ಸರ್ವ ಏಕಂ ಭವಂತಿ । ತದೇತತ್ ಪದನೀಯಮಸ್ಯ ಸರ್ವಸ್ಯ ಯದಯಮಾತ್ಮಾಽನೇನ ಹ್ಯೇತತ್ ಸರ್ವಂ ವೇದ । ಯಥಾ ಹ್ವೈ ಪದೇನಾನುವಿಂದೇದೇವಂ ಕೀರ್ತಿಂ ಶ್ಲೋಕಂ ವಿಂದತೇ ಯ ಏವಂ ವೇದ ॥**

ಬೃ. ೧-೪-೭.

ಶ್ರುತಿಯ ಅಭಿಪ್ರಾಯವೇನೆಂದರೆ: ಜಗತ್ತು ಸುಷುಪ್ತಿಪ್ರಲಯಾದ್ಯವಸ್ಥೆಗಳಲ್ಲಿ ಅವ್ಯಾಕೃತವಾಗಿದ್ದು ಜಾಗ್ರತ್ಸೃಷ್ಟ್ಯಾದಿಗಳಲ್ಲಿ ನಾಮರೂಪಗಳಾಗಿ ವಿಂಗಡಿಸಿಕೊಳ್ಳುತ್ತದೆ. ನಮ್ಮ ಶರೀರೇಂದ್ರಿಯಮನಸ್ಸುಗಳಿಂದೊಡಗೂಡಿರುವ ಕಾರ್ಯಕರಣಸಂಘಾತವು ಈ ಅವ್ಯಾಕೃತಪ್ರಕೃತಿಯ ವಿಕಾರವೇ ಆಗಿರುತ್ತದೆ. ಅವಿದ್ಯಾಕಲ್ಪಿತವಾಗಿರುವ ಈ ವ್ಯಾಕೃತಾವ್ಯಾಕೃತನಾಮರೂಪಗಳಿಂದಾದ ರೂಪಭೇದದಿಂದ ನಿತ್ಯನಿರವಸ್ಥನಾಗಿರುವ ಆತ್ಮನಲ್ಲಿ ಬೇರೆಬೇರೆಯ ಅವಸ್ಥೆಗಳು ತೋರಿಕೊಳ್ಳುತ್ತಿರುತ್ತವೆ. ಮೊದಲು ತಾನೇತಾನಾಗಿರುವ ಆತ್ಮನು ಈ ವ್ಯಾಕೃತವಾಗಿರುವ ಜಗತ್ತಿನಲ್ಲಿ ಒಳಹೊಕ್ಕಿರುವಂತೆ ತೋರಿಕೊಳ್ಳುತ್ತಿರುತ್ತಾನೆ. ಮೊದಲು ಬರಿಯದಾಗಿದ್ದ ಕುಂಬಾರನ ಮನೆಯಲ್ಲಿ ಗಡಿಗೆಮಡಕೆಕುಡಿಕೆಗಳು ಸಿದ್ಧವಾದಮೇಲೆ ಮನೆಯ ಆಕಾಶವೇ ಗಡಿಗೆಯ, ಮಡಕೆಯ, ಮತ್ತು ಕುಡಿಕೆಯ ಆಕಾಶವೆಂದು ಬಿಡಿಬಿಡಿಯಾಗಿ ತೋರುವಂತೆಯೇ ಇದನ್ನು ಅರಿಯಬೇಕು. ನಿತ್ಯಸಿದ್ಧನಾದ ಅನುಭವಸ್ವರೂಪನಾದ ಆತ್ಮನೊಳಗೇ ಈ ನಮ್ಮಗಳ ಬಗೆಬಗೆಯ ದೇಹೇಂದ್ರಿಯಸಂಘಾತಗಳು ಉಂಟಾಗಿರುತ್ತವೆಯಾದರೂ ಆ ಆತ್ಮಚೈತನ್ಯವು- ಆಕಾಶವು

ಗಡಿಗೆ ಮುಂತಾದವುಗಳೊಳಗೆ ಹೊಕ್ಕಿರುವಂತೆ ಹೇಗೆ ತೋರಿಕೊಳ್ಳುತ್ತಿರುವದೋ ಹಾಗೆ- ಈ ಬೇರೆಬೇರೆಯ ಸಂಘಾತಗಳೊಳಗೆ ಹೊಕ್ಕಿರುವಂತೆ ತೋರುತ್ತಿರುವದು.

ಚೈತನ್ಯವು ಈ ಸಂಘಾತಗಳೊಳಗೆ ಸೇರಿಕೊಂಡಿರುವದು ನಮಗೆ ಎರಡು ಬಗೆಯಿಂದ ತೋರುತ್ತಿರುವದು. ಕ್ಷೌರಿಕನು ತನ್ನ ಪೆಟ್ಟಿಗೆಯಲ್ಲಿಟ್ಟುಕೊಂಡಿರುವ ಬಗೆಬಗೆಯ ಕತ್ತಿಗಳು ಹೇಗೆ ಬೇರೆಬೇರೆಯಾಗಿರುವವೋ ಹಾಗೆ ಪರಿಚ್ಛಿನ್ನದೇಶಗಳಲ್ಲಿ ಬಿಡಿಬಿಡಿಯ ಜ್ಞಾನಗಳ ರೂಪದಿಂದಲೂ ಅದು ಸಂಘಾತದಲ್ಲಿ ಹೊಕ್ಕಿರುವಂತೆ ತೋರುತ್ತಿರುವದು. ಕಟ್ಟಿಗೆಯನ್ನೆಲ್ಲ ಅವ್ಯಕ್ತರೂಪದಿಂದ ಹೊಕ್ಕಿರುವ ಬೆಂಕಿಯಂತೆ ಅದು ಸಾಮಾನ್ಯರೂಪದಿಂದಲೂ ಹೊಕ್ಕಿರುವದಾಗಿ ಕಾಣಬರುತ್ತದೆ. ಬುದ್ಧಿ, ಮನಸ್ಸು, ಇಂದ್ರಿಯಗಳು, ಶರೀರ- ಇವುಗಳ ಸಂಘಾತದಲ್ಲಿ ಚೈತನ್ಯವು ಸಾಮಾನ್ಯರೂಪದಿಂದಲೂ ವ್ಯಾಪಿಸಿಕೊಂಡು ಒಂದೊಂದು ಸ್ಥಾನದಲ್ಲಿ ವಿಶೇಷರೂಪದಿಂದಲೂ ತೋರಿಕೊಳ್ಳುತ್ತಿರುವದು.

ವಿಶೇಷರೂಪದಿಂದ ನಮ್ಮ ದೇಹೇಂದ್ರಿಯಸಂಘಾತದಲ್ಲಿ ತೋರಿಕೊಳ್ಳುವದು ಹೇಗೆಂದರೆ: ಪ್ರಾಣನ ವ್ಯಾಪಾರದಿಂದ ಜೀವನು ' ಬದುಕಿರುತ್ತಾನೆ ' ಎನ್ನುತ್ತಾರೆ; ಮಾತನಾಡುತ್ತಿದ್ದರೆ 'ವಾತಾಳಿ, ಮಾತುಗಾರ'– ಎನ್ನುತ್ತಾರೆ. ಹೀಗೆಯೇ ನೋಡುವಾಗ 'ನೋಟಕ'ನೆನಿಸುತ್ತಾನೆ, ಕೇಳುವಾಗ 'ಶ್ರೋತೃ'ವೆನಿಸುತ್ತಾನೆ. ಮನನವನ್ನು ಮಾಡುವಾಗ 'ಮನ್ತೃ'ವು, ವಿಚಾರಕನು ಎನಿಸುತ್ತಾನೆ. ಇತ್ಯಾದಿ. ಆಗಲೆ ಉದಾಹರಿಸಿರುವ ದೃಷ್ಟಾಂತದಲ್ಲಿ ಒಂದೇ ಕೊಠಡಿಯಲ್ಲಿರುವ ಎರಡುಮೂರು ದೀಪಗಳಲ್ಲಿ ಒಂದು ಹಸುರಾಗಿಯೂ ಇನ್ನೊಂದು ಹಳದಿಯಾಗಿಯೂ ಮತ್ತೊಂದು ಕೆಂಪಾಗಿಯೂ ಕಾಣಬಹುದಷ್ಟೆ? ಈ ವಿಶೇಷರೂಪಗಳಿಂದಲೇ ಅಲ್ಲದೆ, ಬೆಳಕು ತನ್ನ ಅವ್ಯಕ್ತರೂಪದಿಂದಲೂ ಮನೆಯನ್ನೆಲ್ಲ ವ್ಯಾಪಿಸಿಕೊಂಡಿರುತ್ತದೆಯಾದರೂ ವಿಶೇಷರೂಪಗಳಿಂದಲೇ ನಮಗೆ ಗೋಚರವಾಗುತ್ತಿರುತ್ತದೆ. ಹೀಗೆಯೇ ಚಿನ್ಮಾತ್ರವಾಗಿರುವ ನಮ್ಮ ಸ್ವರೂಪವು ಒಂದೊಂದು ಇಂದ್ರಿಯಸ್ಥಾನದ ಉಪಾಧಿಯಿಂದ ನೋಡುವದು, ಕೇಳುವದು– ಮುಂತಾದ ವಿಶೇಷಕ್ರಿಯೆಗಳನ್ನು ಹೊರತೋರಿಸುತ್ತಿರುವದು.

ಈ ವಿಶೇಷರೂಪಗಳನ್ನೇ ನಮ್ಮ ರೂಪವೆಂದು ಅರಿತುಕೊಂಡರೆ ನಮ್ಮ ಜ್ಞಾನವು ಅಪೂರ್ಣವಾಯಿತು. ಒಬ್ಬ ಮನುಷ್ಯನು ಸಂಗೀತದಲ್ಲಿ ರಾಗಜ್ಞಾನವುಳ್ಳವನಾಗಿದ್ದರೆ ಅವನ ಕಿವಿಯ ಶಕ್ತಿಯು ಸೂಕ್ಷ್ಮವಾಗಿದೆ ಎನ್ನಬಹುದು; ಅವನು ಚೆನ್ನಾಗಿ ಹಾಡುತ್ತಿದ್ದರೆ 'ಸಂಗೀತಗಾರನು' ಎಂದು ಕರೆಯಬಹುದು. ಹೀಗೆಯೇ ಕೈಯಿಂದ ಚಿತ್ರಬರೆಯು ವ್ಯಾಪಾರದಿಂದ 'ಚಿತ್ರಗಾರ'ನೆಂದೂ ಮರದ ಸಾಮಾನುಗಳನ್ನು ಮಾಡುವ ಕೌಶಲ್ಯವುಳ್ಳವನಾದರೆ ಅವನನ್ನು 'ಬಡಗಿ'ಯೆಂದೂ ನಾವು ಭಾವಿಸಬಹುದು. ಇದರಂತೆಯೇ ಬೇರೆಬೇರೆಯ ಕೆಲಸಗಳಲ್ಲಿ ಕುಶಲನಾಗಿರುವಾತನನ್ನು ನಾವು ಆಯಾ ಕರ್ಮಗಳ ಹೆಸರನ್ನಿಟ್ಟು 'ಕುಂಬಾರನು', 'ಬಣ್ಣಗಾರನು', 'ನೇಯ್ಗೆಯವನು', "ಗಂದಿಗ', 'ಗಾಣಿಗ'—ಎಂದು ಮುಂತಾಗಿ ಕರೆಯಬಹುದು. ಈ ಸಂದರ್ಭಗಳಲ್ಲಿ ಆಯಾ ಕರ್ಮದಲ್ಲಿ ಅವನು ವಿಶೇಷಕೌಶಲ್ಯವನ್ನು ತೋರಿಸುವವನೆಂದು ಭಾವಿಸಬಹುದೇ ಹೊರತು ಅದೇ ಅವನ ಪೂರ್ಣಸ್ವರೂಪವೆಂದು ಭಾವಿಸುವದು ಸರಿಯಾದೀತೆ? ಎಂದಿಗೂ ಆಗಲಾರದು. ಆದ್ದರಿಂದ ನೋಡುವದು, ಕೇಳುವದು, ಮೂಸುವದು, ಮುಟ್ಟುವದು— ಮುಂತಾದ ವಿಶೇಷಜ್ಞಾನಗಳಿಂದ ನಮ್ಮ ಸ್ವರೂಪವನ್ನು ವಿಂಗಡಿಸಿಕೊಂಡು ಅರಿಯುವದು ಅಪೂರ್ಣಜ್ಞಾನವಾಯಿತು.

ಹಾಗಾದರೆ ನಿಜವಾಗಿ ನಮ್ಮ ಪೂರ್ಣಸ್ವರೂಪವನ್ನು ಅರಿತುಕೊಳ್ಳುವದು ಹೇಗೆ?— ಎಂದರೆ ಈ ವಿಶೇಷಜ್ಞಾನಗಳನ್ನೆಲ್ಲ ವ್ಯಾಪಿಸಿಕೊಂಡಿರುವ ಚಿನ್ಮಾತ್ರಸ್ವರೂಪವನ್ನು— ಈವರೆಗೆ ನಾವು ವರ್ಣಿಸಿರುವ ನಿತ್ಯಸಿದ್ಧವಾದ ಅನುಭವಸ್ವರೂಪವನ್ನು— ಎಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ ಇದೇ ನಮ್ಮ 'ಆತ್ಮ'ನು ಎಂದು ಅರಿತುಕೊಳ್ಳಬೇಕು. ಆ ಅರಿವಿನರೂಪವು ನಮ್ಮ ಎಲ್ಲಾ ವಿಶೇಷರೂಪಗಳಲ್ಲಿಯೂ ಅನುಗತವಾಗಿದ್ದುಕೊಂಡಿರುತ್ತದೆ ; ಆ ಒಂದು ರೂಪದಲ್ಲಿ ಈ ಎಲ್ಲಾ ವಿಶೇಷರೂಪಗಳೂ ಅಡಕವಾಗಿರುತ್ತವೆ. ಆದ್ದರಿಂದಲೇ ನಾನು ನೋಡುತ್ತೇನೆ, ನಾನು ಕೇಳುತ್ತೇನೆ, ನಾನು ಮೂಸುತ್ತೇನೆ, ನಾನು ಮುಟ್ಟುತ್ತೇನೆ— ಎಂದು ವಿಶೇಷರೂಪಗಳೊಳಗೆಲ್ಲ ನಾನು ಎಂಬ ಆತ್ಮಪ್ರತ್ಯಯವು ಇದ್ದುಕೊಂಡಿರುತ್ತದೆ. ವಿಶೇಷರೂಪಗಳು ಒಂದಕ್ಕಿಂತ ಒಂದು ಭಿನ್ನವಾಗಿರುವದರಿಂದ ಪರಿಚ್ಛಿನ್ನವಾಗಿರುತ್ತವೆಯಾದರೂ

ಸಾಮಾನ್ಯರೂಪವು ಎಲ್ಲವನ್ನೂ ತನ್ನೊಳಗೆ ಸೇರಿಸಿಕೊಂಡಿರುತ್ತದೆ. ಒಂದು ಎತ್ತನ್ನು ಹುಡುಕುವಾತನು, ನೆಲದಮೇಲೆ ಅಂಕಿತವಾಗಿರುವ ಅದರ ಹೆಜ್ಜೆಯ ಗುರುತಿನಿಂದಲೇ ಅದನ್ನು ಕಂಡುಹಿಡಿಯುವದಕ್ಕೆ ಯತ್ನಿಸುವಂತೆ, 'ನಾನು', 'ನಾನು' ಎಂದು ಎಲ್ಲೆಲ್ಲಿಯೂ ಅನುಸರಿಸಿಕೊಂಡುಬಂದಿರುವ ಆತ್ಮಪ್ರತ್ಯಯದ ಗುರುತಿನಿಂದಲೇ ನಮ್ಮ ಸ್ವರೂಪವನ್ನು ಕಂಡುಕೊಳ್ಳಬೇಕು.

ಈಗ '**ಬ್ರಹ್ಮವಿದ್ಯೆ**' ಎಂದರೇನೆಂಬುದನ್ನು ವಿಚಾರಿಸೋಣ. ಶ್ರುತಿಯು ಹೀಗೆಂದು ಹೇಳುತ್ತಿದೆ :

**ಬ್ರಹ್ಮ ವಾ ಇದಮಗ್ರ ಆಸೀತ್ ತದಾತ್ಮಾನಮೇವಾವೇತ್ ಅಹಂ ಬ್ರಹ್ಮಾಸ್ಮೀತಿ ತಸ್ಮಾತ್ ತತ್ಸರ್ವಮಭವತ್ ||**

ಬೃ. ೧-೪-೧೦.

ನಾವು ಬ್ರಹ್ಮವನ್ನು ಅರಿತುಕೊಳ್ಳಬೇಕಾಗಿದೆ ಎಂದು ಭಾವಿಸಿಕೊಂಡು ಅದನ್ನು ಹುಡುಕುತ್ತಿರುವದರಿಂದಲೇ 'ಆ ಬ್ರಹ್ಮವನ್ನು ಕಾಣುವದು ಆಗದ ಮಾತು; ಅದನ್ನು ಅರಿಯುವದಕ್ಕೆ ಸಾಧನವೇ ಇಲ್ಲ'- ಎಂದು ಮುಂತಾಗಿ ವಾದಿಸುತ್ತಿರುವೆವು. ಶ್ರುತಿಮಾತೆಯ ಮತವೇನೆಂದರೆ **ಈಗಲೂ- ಅರಿತುಕೊಳ್ಳುವದಕ್ಕಿಂತ ಮುಂಚೆಯೂ-ನಾವು ಬ್ರಹ್ಮವೇ ಆಗಿರುವೆವು.** ಹಾಗಾದರೆ ಅದನ್ನು ಅರಿತುಕೊಳ್ಳುವದೆಂದರೇನು? ನಮ್ಮ ಆತ್ಮನನ್ನೇ ಬ್ರಹ್ಮವೆಂದು ಅರಿತುಕೊಳ್ಳಬೇಕು. 'ನಾನೇ ಬ್ರಹ್ಮವು' ಎಂದು ಮೇಲೆ ವಿವರಿಸಿರುವಂತೆ ಸರ್ವತ್ರ ವ್ಯಾಪಿಸಿರುವ ನಮ್ಮ ಆತ್ಮಸ್ವರೂಪವನ್ನೇ ಬ್ರಹ್ಮವೆಂದು-ಅರಿತುಕೊಳ್ಳುವದೇ ಬ್ರಹ್ಮವಿದ್ಯೆ. ಈ ಬ್ರಹ್ಮವನ್ನು ಅರಿತುಕೊಂಡರೆ ಮತ್ತೇನೂ ಅರಿಯಬೇಕಾದದ್ದು ಉಳಿದಿರುವದಿಲ್ಲ; ನಾವೇ ಎಲ್ಲವೂ ಆಗಿಬಿಟ್ಟಿರುತ್ತೇವೆ.

**ತದ್ಯೋ ಯೋ ದೇವಾನಾಂ ಪ್ರತ್ಯಬುಧ್ಯತ ಸ ಏವ ತದಭವತ್ ತಥರ್ಷೀಣಾಂ ತಥಾ ಮನುಷ್ಯಾಣಾಂ ತದ್ಧೈತತ್ ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೇಽಹಂ ಮನುರಭವಂ ಸೂರ್ಯಶ್ಚೇತಿ ||**

ಬೃ. ೧-೪-೧೦.

ನಾನು 'ಇಂಥವನು' ಎಂಬ ವ್ಯಕ್ತಿಜ್ಞಾನವನ್ನು ಬಿಡಬೇಕು; ನಾನು ದೇವತೆ, ನಾನು ಋಷಿ, ನಾನು ಮನುಷ್ಯ– ಎಂದು ತಿಳಿಯುವದು ಅಕೃತ್ಸ್ನಜ್ಞಾನವು. **ಪೂರ್ಣಜ್ಞಾನವಾಗಬೇಕಾದರೆ ನಾನು ಬ್ರಹ್ಮವು, ಸರ್ವರ ಆತ್ಮನು, ಸರ್ವವೂ ನಾನೇ ಎಂದು ಅರಿತುಕೊಳ್ಳಬೇಕು.** ಅಷ್ಟರಿಂದಲೇ, ಹೀಗೆಂದು ಅರಿತುಕೊಂಡಮಾತ್ರದಿಂದಲೇ ಅವನಿಗೆ ಬ್ರಹ್ಮಾತ್ಮತ್ವಪ್ರಾಪ್ತಿಯಾಗಿಬಿಡುತ್ತದೆ. 'ಮನಸೈವೇದಮಾಪ್ತವ್ಯಮ್' ಮನಸ್ಸಿನಿಂದಲೇ ಪಡೆದುಕೊಳ್ಳಬೇಕು– ಎಂದರೆ ಹೀಗೆಯೇ. ನಿತ್ಯಪ್ರಾಪ್ತವಾಗಿರುವ ಅದ್ವಿತೀಯಬ್ರಹ್ಮವೇ ನಾನು ಎಂಬ ಅರಿವನ್ನು ಸಂಪಾದಿಸಿಕೊಳ್ಳಬೇಕು ಅಷ್ಟೆ. 'ನಾನು ಇಂಥವನು' ಎಂಬ ಅವಿದ್ಯಾಕಲ್ಪಿತವಾದ ರೂಪದಲ್ಲಿಟ್ಟುಕೊಂಡಿರುವ ಭಾವನೆಯನ್ನು ಬಿಡಬೇಕು, ಅಷ್ಟೆ. ದೇವತೆಯಾದವನು, ಋಷಿಯಾದವನು, ಮನುಷ್ಯನಾದವನು, ಎಲ್ಲರಿಗೂ ಬ್ರಹ್ಮವೇ ಆತ್ಮನು. ವಾಮದೇವಋಷಿಯು ನಾನೇ ಬ್ರಹ್ಮವೆಂದು ಅರಿತುಕೊಂಡಮಾತ್ರದಿಂದಲೇ ಸರ್ವಾತ್ಮಭಾವವನ್ನು ಪಡೆದನು. ಈ ಕಾಲದಲ್ಲಿಯೂ ಯಾವನು ಹೀಗೆ ಅರಿತುಕೊಳ್ಳುವನೋ ಅವನಿಗೆ ಈ ಸರ್ವಾತ್ಮಭಾವವು ಬರುತ್ತದೆ.

'ಮನಸೈವೇದಮಾಪ್ತವ್ಯಮ್' ಮನಸ್ಸಿನಿಂದಲೇ ಪಡೆಯಬೇಕು; 'ಮನಸೈವಾನುದ್ರಷ್ಟವ್ಯಮ್' ಮನಸ್ಸಿನಿಂದಲೇ ಅದನ್ನು ಅನುದರ್ಶನಮಾಡಿಕೊಳ್ಳಬೇಕು– ಎಂದು ಶ್ರುತಿಯು ಹೇಳುವದರಲ್ಲಿ ಅಡಗಿರುವ ಅಭಿಪ್ರಾಯವೇನೆಂದರೆ, ಇಂದ್ರಿಯಗಳಿಂದ ಹೊರಗೆ ನೋಡುವ ಅಭ್ಯಾಸದಿಂದ ಮನಸ್ಸಿಗೆ ಬಾಹ್ಯವಿಷಯಗಳ ಪರಿಚ್ಛಿನ್ನಜ್ಞಾನದ ವಾಸನೆಯೇ ಬಂದುಬಿಟ್ಟಿದೆ. ಮನಸ್ಸಿನಿಂದ ಇಂದ್ರಿಯಗಳು, ಇಂದ್ರಿಯಗಳಿಂದ ವಿಷಯಗಳು–ತಿಳಿಯಬರುತ್ತವೆ– ಎಂಬ ಲೌಕಿಕಬುದ್ಧಿಯ ವಾಸನೆಯು ನಮಗೆ ಬಲವಾಗಿಬಿಟ್ಟಿದೆ. ಇಂದ್ರಿಯಜನ್ಯಜ್ಞಾನವನ್ನು ಆಧಾರವಾಗಿಟ್ಟುಕೊಂಡು ಕಲ್ಪನೆಯ ರಾಶಿಯನ್ನು ಹಾಕಿಕೊಂಡು 'ವಿಜ್ಞಾನಶಾಸ್ತ್ರ' ವಿಕಾಸವಾದ'– ಎಂದು ಬಡಬಡಿಸುವದಕ್ಕೆ ಪ್ರಾರಂಭಿಸುತ್ತೇವೆ. ಬರಿಯ ಮನಸ್ಸಿನಿಂದಲೇ ಒಳಕ್ಕೆ ನೋಡುವ ಅಭ್ಯಾಸವು ನಮಗೆ ಬಂದೇ ಇಲ್ಲ. ಆದ್ದರಿಂದಲೇ ಶ್ರುತಿಯು-

**ತಸ್ಮಾದೇವಂವಿತ್ ಶಾಂತೋ ದಾಂತ ಉಪರತಸ್ತಿತಿಕ್ಷುಸ್ಸಮಾಹಿತೋ ಭೂತ್ವಾಽಽತ್ಮನ್ಯೇವಾತ್ಮಾನಂ ಪಶ್ಯತಿ । ಸರ್ವಮಾತ್ಮಾನಂ ಪಶ್ಯತಿ ॥**

ಬೃ. ೪-೪-೨೩.

ಎಂದು ಶಮ, ದಮ, ಉಪರತಿ, ತಿತಿಕ್ಷೆ, ಸಮಾಧಾನ- ಮುಂತಾದ ನಿವೃತ್ತಿಸಾಧನಗಳಿಂದಲೇ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳುವದರಿಂದ ಸರ್ವವೂ ಆತ್ಮನೆಂದೇ ಕಂಡುಕೊಳ್ಳುತ್ತಾನೆ-ಎನ್ನುತ್ತಿದೆ. ಅನಾತ್ಮವನ್ನು ನೋಡುವ ದೃಷ್ಟಿಯಿಂದ ಆತ್ಮನನ್ನು ನೋಡುವದು ಆಗದಿದ್ದರೆ ಆಶ್ಚರ್ಯ ವೇನೂ ಇಲ್ಲ. ಆದ್ದರಿಂದ 'ಅತೀಂದ್ರಿಯಜ್ಞಾನವು ಮನುಷ್ಯನಿಗೆ ಸಾಧ್ಯ ವಲ್ಲ, ನಮಗೆ ನಿಶ್ಚಿತಜ್ಞಾನವು ಆಗಲಾರದು, ಮಿಕ್ಕ ವಿಚಾರವನ್ನು ಬಿಟ್ಟು ಇಹಲೋಕದ ವಿಷಯಗಳಿಗೆ ಸಂಬಂಧಿಸಿದ ವಿಚಾರವನ್ನೇ ಮಾಡುತ್ತಿರುವದು ಒಳ್ಳೆಯದು' ಎಂದು ಬಾಹ್ಯಪರಿಚ್ಛಿನ್ನದೃಷ್ಟಿಯಿಂದ ಮಾತಾಡುವವರು ತತ್ತ್ವಜ್ಞಾನಕ್ಕೆ ಅಧಿಕಾರಿಗಳೇ ಅಲ್ಲ. ಆನೆಯನ್ನು ನಾಲ್ಕುಜನ ಕುರುಡರು ನೋಡಿ ನಾಲ್ಕುವಿಧವಾಗಿ ವಿಕಲ್ಪಿಸಿದರಂತೆ- ಎಂಬ ಕಥೆಯು ಅವರಿಗೆ ಅನ್ವ ಯಿಸುತ್ತದೆ. 'ಮನಸೈವಾನುದ್ರಷ್ಟವ್ಯಮ್' ಎಂಬ ವಾಕ್ಯದ ಅಭಿಪ್ರಾಯವು ಅವರಿಗೆ ಹೊಳೆಯುವ ಸಂಭವವೇ ಇಲ್ಲ. ಹೊರಗಿನ ವಿಷಯದ ಎಲ್ಲಾ ಶಾಸ್ತ್ರಗಳನ್ನೂ ಬಲ್ಲ ನಾರದರು ಸನತ್ಕುಮಾರರ ಬಳಿಗೆ ಹೋಗಿ 'ಇಷ್ಟು ಶಾಸ್ತ್ರಗಳನ್ನು ನಾನು ಅರಿತಿದ್ದರೂ ಆತ್ಮವಿದ್ಯೆಯು ನನಗೆ ತಿಳಿಯದೆ ಇರುವ ದರಿಂದ ಶೋಕಿಸುತ್ತಿದೇನೆ' ಎಂದು ಹೇಳಿಕೊಂಡರೆಂಬ ಕಥೆಯನ್ನು ನಾವು ಮನದಂದುಕೊಳ್ಳಬೇಕು. ಬ್ರಹ್ಮವಿದ್ಯೆ, ಅಥವಾ ಆತ್ಮವಿದ್ಯೆ ಎಂಬುದಕ್ಕೆ ಶಾಸ್ತ್ರಾಚಾರ್ಯರು ಉಪದೇಶಿಸುವ ಮಾರ್ಗವನ್ನನುಸರಿಸಿ ಪ್ರತ್ಯಗ್ದೃಷ್ಟಿ ಯನ್ನು ನಾವು ಸಂಪಾದಿಸಿಕೊಳ್ಳಬೇಕು. ಇದೇ **'ಅನುದರ್ಶನ'.** ಇದರಿಂದ ಬ್ರಹ್ಮಾತ್ಮವಸ್ತುವಿನಲ್ಲಿ ಸ್ವಲ್ಪವೂ ನಾನಾತ್ವವಿಲ್ಲವೆಂಬುದು ಮನದಟ್ಟಾಗುತ್ತದೆ.

ಈ ಅನುದರ್ಶನದ ಪ್ರಕಾರವು ಯಾವದು ? ಇದರ ವಿಷಯಕ್ಕೆ ಶ್ರುತಿಯು ಹೇಳುವದೇನೆಂದರೆ :

**ಏಷ ಸರ್ವೇಷು ಭೂತೇಷು**
**ಗೂಢೋಽಽತ್ಮಾ ನ ಪ್ರಕಾಶತೇ ।**
**ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ**
**ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ ॥**

**ಯಚ್ಛೇದ್ ವಾಙ್ಮನಸೀ ಪ್ರಾಜ್ಞಃ**
**ತದ್ಯಚ್ಛೇತ್ ಜ್ಞಾನ ಆತ್ಮನಿ ।**
**ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್**
**ತದ್ಯಚ್ಛೇತ್ ಶಾಂತ ಆತ್ಮನಿ ॥** ಕಠ. ೩-೧೨, ೧೩.

ಅನಾತ್ಮವನ್ನು ಬಿಟ್ಟು ಆತ್ಮನಲ್ಲಿಯೇ ನಿಂತುಕೊಳ್ಳಬೇಕು, ಆ ಆತ್ಮನನ್ನೇ ಬ್ರಹ್ಮವೆಂದು ಅರಿತುಕೊಳ್ಳಬೇಕು, ಬ್ರಹ್ಮವು- ಅಥವಾ ಪರಮಾತ್ಮತತ್ತ್ವವು ನಮ್ಮೆಲ್ಲರಲ್ಲಿಯೂ ನಿತ್ಯಪ್ರಾಪ್ತವಾಗಿದ್ದುಕೊಂಡೇಬಿಟ್ಟಿದೆ; ಒಂದು ಬಗೆಯಿಂದ ನಮಗೆ ಆತ್ಮಾನುಭವವೂ ಇದೆ. ಏಕೆಂದರೆ ಆ ಅನುಭವವನ್ನೇ ನಾವು ಸಿದ್ಧಾನುಭವವೆಂದು ಕರೆದಿರುವದು. ಆದರೂ ಬಾಹ್ಯದೃಷ್ಟಿಯಿಂದ ವಿಷಯಗಳನ್ನೇ ನೋಡುತ್ತಿರುವ ಅಭ್ಯಾಸವುಳ್ಳ ಜನರಿಗೆ ತಮ್ಮಲ್ಲಿಯೇ ನಿತ್ಯಸಿದ್ಧವಾದ ಈ ಬ್ರಹ್ಮಾತ್ಮನು ಇರುತ್ತಾನೆಂಬುದರ ಅರಿವು ಆಗದೆ ಇದೆ. 'ಸೂರ್ಯನನ್ನು ಒಂದು ಗೂಡಿನಲ್ಲಿಟ್ಟು ಬೀಗಹಾಕಿಕೊಂಡಿದಾರೆ' ಎಂದರೆ ಎಷ್ಟು ಉಪಹಾಸ್ಯವೋ ಅಷ್ಟೇ ಆಗಿದೆ, ನಾವು ನಮ್ಮ ಆತ್ಮನನ್ನು ಅರಿಯೆವು ಎಂದರೆ. ಈ ಚಿತ್ಸ್ವರೂಪನಾದ ಆತ್ಮನು ಎಲ್ಲರಲ್ಲಿಯೂ ಅಡಗಿಕೊಂಡಿದ್ದರೂ ಬೆಳಗದೆ ಇರುತ್ತಾನೆ. ಆದ್ದರಿಂದ ನಾವು ಮೊಟ್ಟಮೊದಲು ಹೊರಗೆ ನೋಡುವ ಅಭ್ಯಾಸವನ್ನು ಬಿಟ್ಟುಬಿಡಬೇಕು; 'ವಾಕ್ಕನ್ನು ಮನಸ್ಸಿನಲ್ಲಿ ಬಿಗಿಹಿಡಿದು ನಿಲ್ಲಿಸಿಕೊಳ್ಳಬೇಕು' ಎಂದರೆ, ಎಲ್ಲಾ ಇಂದ್ರಿಯಗಳನ್ನೂ ಮನಸ್ಸಿನಲ್ಲಿ ಲಯಮಾಡಿಕೊಳ್ಳಬೇಕು. ನಿಜವಾಗಿ ಮನಸ್ಸೇ ಎಲ್ಲಾ ಇಂದ್ರಿಯಗಳಾಗಿರುವದು. ಕನಸಿನಲ್ಲಿ ಮನಸ್ಸೇ ಎಲ್ಲಾ ಇಂದ್ರಿಯಗಳ ರೂಪವನ್ನೂ ಧರಿಸಿ ನಮ್ಮನ್ನು ಬಹಿರ್ವಿಷಯಗಳ ದೃಷ್ಟಿಯಲ್ಲಿ ಕೆಡಹುತ್ತಿರುವದು ಅನುಭವದಲ್ಲಿದೆ. ಮನಸ್ಸೆಂಬುದು ಸಂಕಲ್ಪವಿಕಲ್ಪಗಳನ್ನು ಮಾಡುತ್ತಾ ಹೊರಗಿನ ವಿಷಯಗಳಾಗಿಯೂ ತೋರಿಕೊಳ್ಳಬಹುದೆಂದಾಯಿತು. ಆದ್ದರಿಂದ

ಈ ಮನಸ್ಸನ್ನು ಬುದ್ಧಿಯಲ್ಲಿ ಲಯಿಸಿಕೊಳ್ಳಬೇಕು. ಬುದ್ಧಿಯು ಮನಸ್ಸಿಗಿಂತ ಸೂಕ್ಷ್ಮವಾಗಿ ಅದಕ್ಕೂ ಕಾರಣವಾಗಿ ಅರ್ಥನ್ನು ವ್ಯಾಪಿಸಿಕೊಂಡಿರುವ ಅದರ ಆತ್ಮನೇ ಆಗಿರುತ್ತದೆ ಎಂಬ ನಿಶ್ಚಯವನ್ನು ಗಟ್ಟಿಮಾಡಿಕೊಳ್ಳಬೇಕು. ನದಿಯಿಂದ ಎತ್ತಿಕೊಂಡ ತಂಬಿಗೆಯ ನೀರನ್ನು ನದಿಯೊಳಕ್ಕೆ ಸುರಿದಂತೆ ಮನಸ್ಸಿನ ವಿಕಲ್ಪಗಳನ್ನೆಲ್ಲ ಬುದ್ಧಿಯೊಳಗೇ ಅಡಕವಾಗುವಂತೆ ಮಾಡಿಕೊಳ್ಳಬೇಕು. ಇದಕ್ಕೆ ಪ್ರತ್ಯಕ್ಪ್ರವಣತೆಯೂ- ಒಳನೋಟದ ಅಭ್ಯಾಸವೂ- ಕಾರ್ಯವು ಕಾರಣಕ್ಕಿಂತ ಭಿನ್ನವಾಗಿಲ್ಲವೆಂಬುದನ್ನು ಮನದಟ್ಟುಮಾಡಿಕೊಳ್ಳುವ ಮನೋವೃತ್ತಿಯೂ ಅವಶ್ಯ. ಮಣ್ಣನ್ನೇ ಅಲ್ಲವೆ, ನಾವು ಮಡಕೆ ಎನ್ನುತ್ತಿರುವದು? ಹೀಗೆಯೇ ಬುದ್ಧಿಯನ್ನೇ ಮನಸ್ಸು, ಇಂದ್ರಿಯ-ಎಂದು ವಿಕಲ್ಪಿಸುತ್ತಿರುವೆವು. ಈ ಬುದ್ಧಿಯನ್ನು ನಿಜವಾಗಿ ಆತ್ಮನಿಗಿಂತ ಬೇರೆಯಲ್ಲವೆಂದು ಮನಗಾಣಬೇಕು. ಸೂರ್ಯನಿಗಿಂತಲೂ ಸೂರ್ಯನ ಕಿರಣಗಳು ಬೇರೆಯಿರುವವೇನು? ಆ ಆತ್ಮನು ಪ್ರಪಂಚೋಪಶಮನಾದ ಪರಮಾತ್ಮನಿಗಿಂತ ಬೇರೆಯಲ್ಲವಾದರೂ ಉಪಾಧಿಯಿಂದಲೇ ಬೇರೆಯಾಗಿ ಕಾಣುತ್ತಿರುವನೆಂಬ ದೃಢಾನುಭವವನ್ನು ಕಂಡುಕೊಳ್ಳಬೇಕು. **'ಆತ್ಮಸ್ಥೇವ ಮನಃ ಕೃತ್ವಾ ನ ಕಿಞ್ಚಿದಪಿ ಚಿನ್ತಯೇತ್'** ಆತ್ಮನಲ್ಲಿಯೇ ಮನಸ್ಸನ್ನಿಟ್ಟುಕೊಂಡು ಮತ್ತೇನನ್ನೂ ಚಿಂತಿಸದೆ ಇರಬೇಕು-ಎಂಬ ಗೀತಾವಾಕ್ಯಕ್ಕೆ ಇದರಲ್ಲಿಯೇ ತಾತ್ಪರ್ಯವಿದೆ.

ಹೀಗೆ ಅನುಭವಸಾಗರದಲ್ಲಿ ಎಲ್ಲವೂ ಮುಳುಗಿಹೋದಾಗ, ಆತ್ಮನನ್ನೇ ಬ್ರಹ್ಮವೆಂದು ಅರಿತೆವು. ದೀಪವನ್ನು ಕಾಣುವದಕ್ಕೆ ಮತ್ತೊಂದು ದೀಪವು ಬೇಕಿಲ್ಲದಂತೆ ಅನುಭವರೂಪನಾದ ಆತ್ಮನನ್ನು ಅರಿಯುವದಕ್ಕೆ ಮತ್ತೆ ಯಾವ ಅನುಭವವೂ ಬೇಕಿರುವದಿಲ್ಲ. ಇದೇ ಬ್ರಹ್ಮವಿದ್ಯೆ. ಇದು ಮಿಕ್ಕ ಜ್ಞಾನಗಳಂತೆ ಅಲ್ಲವಾದ್ದರಿಂದ ಇದನ್ನು ಇನ್ನಷ್ಟು ವಿವರವಾಗಿ ತಿಳಿದುಕೊಳ್ಳುವದು ಅವಶ್ಯ.

# ೪. ಆತ್ಮಾನಾತ್ಮಜ್ಞಾನವಿವೇಕ

( 1—5—63 )

ಆತ್ಮನು ಅನುಭವರೂಪದಿಂದ ಎಲ್ಲವನ್ನೂ ವ್ಯಾಪಿಸಿಕೊಂಡಿರುತ್ತಾನೆ. ಜೀವನ ವ್ಯವಹಾರವೆಲ್ಲ ಆತ್ಮನೆಂಬ ಬೆಳಕಿನಿಂದಲೇ ಸಾಗಿರುತ್ತದೆ.

**ಆತ್ಮನೈವಾಯಂ ಜ್ಯೋತಿಷಾ ಆಸ್ತೇ ಪಲ್ಯಯತೇ ಕರ್ಮ ಕುರುತೇ ವಿಪಲ್ಯೇತೀತಿ ॥** ಬೃ. ೪–೩–೬.

ನಾವು ಕೂಡುವದು, ಸಂಚರಿಸುವದು, ಕರ್ಮವನ್ನು ಮಾಡುವದು, ಬರುವದು, ನೋಡುವದು, ಕೇಳುವದು, ಮೂಸುವದು, ಮುಟ್ಟುವದು-ಎಲ್ಲಾ ವ್ಯಾಪಾರಕ್ಕೂ ಆತ್ಮನ ಬೆಳಕೇ ಬೇಕು. ಒಂದೊಂದು ವ್ಯಾಪಾರದಿಂದ ಆತ್ಮಸ್ವರೂಪವನ್ನು ತಿಳಿಯುವದು ಅಕೃತ್ಸ್ನದರ್ಶನ; ಆತ್ಮನು–ಎಲ್ಲವನ್ನೂ ವ್ಯಾಪಿಸಿರುವನು ಎಂದು ಅರಿತುಕೊಳ್ಳುವದು ಪೂರ್ಣ ದರ್ಶನ–ಎಂದು ತಿಳಿದುಕೊಂಡದ್ದಾಗಿದೆ.

ಆತ್ಮಜ್ಞಾನವಾಗುವದಕ್ಕೂ ಅನಾತ್ಮದ ಜ್ಞಾನವಾಗುವದಕ್ಕೂ ಏನು ವೈಲಕ್ಷಣ್ಯವಿದೆ? ಎರಡು ಸಂದರ್ಭಗಳಲ್ಲಿಯೂ ಆಗುವ ಜ್ಞಾನವು ಫಲರೂಪವಾದ ಅನುಭವವೇ; ಇದನ್ನೇ 'ಅವಗತಿ'ಯೆಂದು ಕರೆಯುತ್ತಾರೆ ಎಂದು ಆಗಲೆ ಹೇಳಿದ್ದಾಗಿದೆ. **ಜ್ಞಾನೇನ ಹಿ ಪ್ರಮಾಣೇನ ಅವಗನ್ತುಮಿಷ್ಟಂ ಬ್ರಹ್ಮ । ಬ್ರಹ್ಮಾವಗತಿರ್ಹಿ ಪುರುಷಾರ್ಥಃ, ನಿಃಶೇಷಸಂಸಾರಬೀಜಾವಿದ್ಯಾದ್ಯನರ್ಥನಿಬರ್ಹಣಾತ್ ॥** ಜ್ಞಾನವೆಂಬ ಪ್ರಮಾಣದಿಂದ ಬ್ರಹ್ಮವನ್ನು ಅರಿತುಕೊಳ್ಳಬೇಕಾಗಿದೆಯಲ್ಲವೆ? ಬ್ರಹ್ಮದ ಅವಗತಿಯೇ ಪುರುಷಾರ್ಥವು; ಏಕೆಂದರೆ ಸಂಸಾರಕ್ಕೆ ಕಾರಣವಾಗಿರುವ ಅವಿದ್ಯೆಯೇ ಮುಂತಾದ ಅನರ್ಥಗಳನ್ನು ಅದು ನಾಶಮಾಡುತ್ತದೆ- ಎಂದು ಭಾಷ್ಯಕಾರರು ಬರೆದೂ ಇರುತ್ತಾರೆ. ಆದರೆ ಬ್ರಹ್ಮವನ್ನು ಜ್ಞಾನದಿಂದ ತಿಳಿದುಕೊಳ್ಳುವದೆಂದರೇನು? –ಬ್ರಹ್ಮವೆಂದರೆ ನಮ್ಮೆಲ್ಲರ ಆತ್ಮನು; ಜ್ಞಾನವು ವಿಷಯಾಕಾರವಾದರಲ್ಲವೆ, ಅದನ್ನು ಅರಿಯಬಲ್ಲದು? ಆದರೆ ಆತ್ಮನಿಗೆ ಆಕಾರವೇ ಇಲ್ಲವಲ್ಲ!

ಎಂಬ ಶಂಕೆಯು ಹುಟ್ಟುವದು ಸ್ವಾಭಾವಿಕವಾಗಿದೆ. ಇದಕ್ಕೆ ಆಚಾರ್ಯರು ಹೀಗೆಂದು ಬರೆದಿರುತ್ತಾರೆ :

**"ಸರ್ವತ್ರ ಹಿ ಬುದ್ಧ್ಯಾದಿದೇಹಾನ್ತೇ ಆತ್ಮಚೈತನ್ಯಾಭಾಸತಾ ಆತ್ಮಭ್ರಾನ್ತಿಕಾರಣಮ್ ಇತ್ಯತಶ್ಚ ಆತ್ಮವಿಷಯಂ ಜ್ಞಾನಂ ನ ವಿಧಾತವ್ಯಮ್; ಕಿಂ ತರ್ಹಿ ನಾಮರೂಪಾದ್ಯನಾತ್ಮಾಧ್ಯಾರೋಪಣನಿವೃತ್ತಿರೇವ ಕಾರ್ಯಾ, ನಾತ್ಮಚೈತನ್ಯವಿಜ್ಞಾನಂ ಕಾರ್ಯಮ್ । ಅವಿದ್ಯಾಧ್ಯಾರೋಪಿತಸರ್ವಪದಾರ್ಥಾಕಾರೈಃ ಅವಿಶಿಷ್ಟತಯಾ ದೃಶ್ಯಮಾನತ್ವಾತ್ ॥** (ಗೀ.ಭಾ. ೧೮-೫೦) ಆತ್ಮಚೈತನ್ಯದ ಆಭಾಸವು ಮೊದಲು ಬುದ್ಧಿಯಲ್ಲಿ ಕಾಣಿಸಿಕೊಳ್ಳುತ್ತದೆ; ಏಕೆಂದರೆ ಬುದ್ಧಿಯು ಆತ್ಮನಂತೆ ಅತ್ಯಂತ ನಿರ್ಮಲವಾಗಿ ಅತಿಸ್ವಚ್ಛವಾಗಿ ಅತಿಸೂಕ್ಷ್ಮವಾಗಿರುತ್ತದೆ. ಆ ಬುದ್ಧಿಯ ಆಭಾಸವು ಮನಸ್ಸು; ಅದರ ಆಭಾಸಗಳು ಇಂದ್ರಿಯಗಳು; ಅವುಗಳ ಆಭಾಸವು ದೇಹವು. ಆದ್ದರಿಂದ ಬುದ್ಧಿಯಿಂದ ಹಿಡಿದು ದೇಹದವರೆಗೆ ಎಲ್ಲವನ್ನೂ ಬೇರೆಬೇರೆಯ ಜನರು ಆತ್ಮನೆಂದೇ ಅಂಗೀಕರಿಸಿರುತ್ತಾರೆ. ಹೀಗಿರುವದರಿಂದ ಅವಿದ್ಯಾಕಲ್ಪಿತವಾಗಿರುವ ಎಲ್ಲಾ ಪದಾರ್ಥಗಳೊಡನೆಯೂ ಆತ್ಮಚೈತ ತೋರುತ್ತಲೇ ಇದೆ. ಆದ್ದರಿಂದ ಆತ್ಮನೆಂಬ ಅರಿವನ್ನೇನೂ ಹೊಸದಾಗಿ ಉಂಟುಮಾಡಿಕೊಳ್ಳಬೇಕಾಗಿರುವದಿಲ್ಲ ; ಅದರಲ್ಲಿ ಆಗಿರುವ ನಾಮ, ರೂಪ -ಮುಂತಾದ ಅನಾತ್ಮದ ಅಧ್ಯಾರೋಪವನ್ನು ಮಾತ್ರ ಕಳೆದುಕೊಳ್ಳಬೇಕಾಗಿದೆ. ನಾನು ದೇಹವಲ್ಲ, ನಾನು ಇಂದ್ರಿಯಗಳಲ್ಲ, ನಾನು ಮನಸ್ಸಲ್ಲ, ನಾನು ಬುದ್ಧಿಯಲ್ಲ- ಎಂದಿಂತು ಏಕಾಗ್ರಚಿತ್ತದಿಂದ ನೋಡಿ ನಿಶ್ಚಯಿಸಿಕೊಂಡರೆ ಆಯಿತು. ಬ್ರಹ್ಮವು ಚೈತನ್ಯರೂಪದಿಂದ ಅತ್ಯಂತಪ್ರಸಿದ್ಧವಾಗಿರುವದರಿಂದ ಅದನ್ನು ಹೊಸದಾಗಿ ಅರಿತುಕೊಳ್ಳುವದಕ್ಕೇನೂ ಯತ್ನವನ್ನು ಮಾಡಬೇಕಾಗಿರುವದಿಲ್ಲ-ಎಂಬುದು ಭಾಷ್ಯವಾಕ್ಯದ ಅಭಿಪ್ರಾಯವು. ಈ ಕಾರಣದಿಂದಲೇ ಶಾಸ್ತ್ರದಲ್ಲಿ ಬ್ರಹ್ಮಸ್ವರೂಪವನ್ನು 'ಇಂಥದ್ದು' ಎಂದು ವಿಧಿಮುಖವಾಗಿ ತಿಳಿಸುವದಕ್ಕೆ ಹೋಗಿಲ್ಲ; 'ಇಂಥದ್ದಲ್ಲ' ಎಂದು ಅದರದ್ದಲ್ಲದ ಧರ್ಮವನ್ನು ನಿರಾಕರಣಮಾಡುವದರಿಂದಲೇ ಅದನ್ನು ತಿಳಿಸಿಕೊಟ್ಟಿರುತ್ತದೆ. ಪರಮಾತ್ಮನನ್ನು ಅರಿಯುವದಕ್ಕೆಂದು **ಅಧ್ಯಾತ್ಮಯೋಗವನ್ನು** ಉಪದೇಶಿಸಿರುವದೂ ಈ ಅಧ್ಯಾರೋಪನಿವೃತ್ತಿಗಾಗಿಯೇ. ಗೀತಾಭಾಷ್ಯದಲ್ಲಿ

ಕಾಣಬರುವ ಮತ್ತೊಂದು ವಾಕ್ಯವನ್ನು ಇಲ್ಲಿ ಉದಾಹರಿಸುವದರಿಂದ ಜಿಜ್ಞಾಸುಗಳಿಗೆ ಲಾಭವುಂಟು :

**" ಅವಿದ್ಯಾಕಲ್ಪಿತನಾಮರೂಪವಿಶೇಷಾಕಾರಾಪಹೃತಬುದ್ಧೀನಾಮ್ ಅತ್ಯನ್ತಪ್ರಸಿದ್ಧಂ ಸುವಿಜ್ಞೇಯಮ್, ಆಸನ್ನತರಮ್, ಆತ್ಮಭೂತಮಪಿ, ಅಪ್ರಸಿದ್ಧಂ ದುರ್ವಿಜ್ಞೇಯಮ್ ಅತಿದೂರಮ್, ಅನ್ಯದಿವ ಚ ಪ್ರತಿಭಾತಿ ಅವಿವೇಕಿನಾಮ್ । ಬಾಹ್ಯಾಕಾರನಿವೃತ್ತಬುದ್ಧೀನಾಂ ತು ಲಬ್ಧಗುರ್ವಾತ್ಮಪ್ರಸಾದಾನಾಂ ನಾತಃ ಪರಂ ಸುಖಂ ಸುಪ್ರಸಿದ್ಧಂ ಸುವಿಜ್ಞೇಯಂ ಸ್ವಾಸನ್ನತರಮ್ ಅಸ್ತಿ ।"**

(ಗೀ. ಭಾ. ೧೮-೫೦). ಸರಿಯಾಗಿ ನೋಡಿದರೆ ಅತ್ಯಂತಪ್ರಸಿದ್ಧವೂ, ಬಹು ಸುಲಭವಾಗಿ ಅರಿತುಕೊಳ್ಳಬಹುದಾದದ್ದೂ, ಎಲ್ಲಕ್ಕಿಂತಲೂ ಹತ್ತಿರವಿರುವದೂ, ಜನರ ಆತ್ಮನೇ ಆದದ್ದೂ ಆಗಿದ್ದರೂ ಅವಿದ್ಯೆಯಿಂದ ಕಲ್ಪಿತವಾಗಿರುವ ನಾಮರೂಪಗಳೆಂಬ ಬೇರೆಬೇರೆಯ ವಿಷಯಗಳ ಆಕಾರವು ಅಪಹರಿಸಿರುವ ಬುದ್ಧಿಯುಳ್ಳ ಅವಿವೇಕಿಗಳಿಗೆ, ಈ ಬ್ರಹ್ಮವು ಅಪ್ರಸಿದ್ಧವೆಂದೂ ಅದನ್ನು ಅರಿತುಕೊಳ್ಳುವದು ಕಷ್ಟವೆಂದೂ ತಮಗಿಂತ ಬಲುದೂರದಲ್ಲಿರುವದೆಂದೂ ತಮಗಿಂತ ಬೇರೆಯೆಂದೂ ತೋರುತ್ತಿರುವದು. ಆದರೆ ಹೊರಗಿನ ವಿಷಯಾಕಾರಗಳಿಂದ ಹಿಂಜರಿದ ಬುದ್ಧಿಯುವರಾಗಿ ಗುರುಗಳ ಮತ್ತು ಪರಮಾತ್ಮನ ಪ್ರಸಾದವನ್ನು ಹೊಂದಿರುವವರಿಗೋ ಎಂದರೆ ಇದಕ್ಕಿಂತ ಸುಲಭವಾಗಿ ಸುಪ್ರಸಿದ್ಧವಾಗಿ ಸುವಿಜ್ಞೇಯವಾಗಿ ಅತ್ಯಂತ ಹತ್ತಿರವಿರುವದಾಗಿರುವದು ಮತ್ತೊಂದಿರುವದಿಲ್ಲ.

ಈಗ ಆತ್ಮಜ್ಞಾನಕ್ಕೂ ಅನಾತ್ಮದ ಜ್ಞಾನಕ್ಕೂ ಇರುವ ವೈಲಕ್ಷಣ್ಯವೇನೆಂಬುದನ್ನು ನಾವು ತಿಳಿದುಕೊಳ್ಳಬಹುದಾಗಿರುತ್ತದೆ. **ಮೊದಲನೆಯದಾಗಿ** ಅನಾತ್ಮವಸ್ತುವು ನಮಗಿಂತ ಹೊರಗೆ ಇರುವದರಿಂದ ಅದನ್ನು ಅರಿಯಬೇಕೆನ್ನುವಾತನು- ಉದಾಹರಣೆಗೆ ಹೊರಗಿರುವದು ಗಡಿಗೆ- ಎಂಬುದನ್ನು ಅರಿತುಕೊಳ್ಳಬೇಕೆನ್ನುವವನು ಆ ಪ್ರಮೇಯದ ಆಕಾರವಾದ ಅಂತಃಕರಣದ ವೃತ್ತಿಯನ್ನು ಸಂಪಾದಿಸಿಕೊಳ್ಳಬೇಕು. ಅಂತಃಕರಣದ ವೃತ್ತಿಯು ಗಡಿಗೆಯ ಆಕಾರವಾಗಿ ಅದನ್ನು ವ್ಯಾಪಿಸಿಕೊಳ್ಳಬೇಕು ; ಪ್ರತ್ಯಕ್ಷಪ್ರಮಾಣದ ಈ ವ್ಯಾಪಾರದ ಕೊನೆಯಲ್ಲಿ ಘಟದ ಜ್ಞಾನ- ಅಥವಾ ಅನುಭವವು-

ಕಾಣಿಸಿಕೊಳ್ಳಬೇಕು. ಆದರೆ ಆತ್ಮನ ವಿಷಯದಲ್ಲಿಯೋ ಎಂದರೆ ಆತ್ಮನಿಗೆ ಆಕಾರವಿಲ್ಲವಾದ್ದರಿಂದ **ಪ್ರಮಾಣವ್ಯಾಪಾರವೇನೂ ಇಲ್ಲಿ ಕೆಲಸಕ್ಕೆ ಬರುವದಿಲ್ಲ.** ಪ್ರಮಾಣವ್ಯವಹಾರವೇ ಅಧ್ಯಾರೋಪದ ಫಲ- ಆತ್ಮನಲ್ಲಿ ಹುಟ್ಟುಗಟ್ಟಿಕೊಂಡದ್ದು -ಎಂಬ ನಿಶ್ಚಯವಾಗಬೇಕು. ಆತ್ಮನೊಬ್ಬನೇ ಸತ್ಯ -ಎಂಬ ನಿಶ್ಚಯವು ಆಗಬೇಕು. ಎಂದರೆ ಇಲ್ಲಿ ಪ್ರಮಾಣದಲ್ಲಿಯೂ ಅದರ ವಿಷಯದಲ್ಲಿಯೂ ಇರುವ ಸತ್ಯತ್ವಬುದ್ಧಿಯೇ, ಪ್ರಮಾಣವನ್ನು ಉಪಯೋಗಿಸಿಕೊಂಡು ಈ ಪ್ರಮೇಯವನ್ನು ಅರಿಯುವೆನು- ಎಂಬ ಅಭಿನಿವೇಶವೇ, ಅಡ್ಡಿಯಾಗಿರುತ್ತದೆ ಎಂದಾಯಿತು. ಪ್ರಮಾಣಕ್ಕೆ ಆತ್ಮನಾಗಿರುವ ಬ್ರಹ್ಮವನ್ನು ಪ್ರಮಾಣದಿಂದ ಅರಿಯುವದು ಹೇಗೆ ಆದೀತು ?

**ಎರಡನೆಯದಾಗಿ** ಅನಾತ್ಮಜ್ಞಾನವಾಗುವಾಗ ಪ್ರಮಾಣವ್ಯಾಪಾರದ ಫಲವೇ ಅದರ ಅನುಭವವೆನಿಸುತ್ತದೆ; ಪ್ರಮಾಣವ್ಯಾಪಾರದ ಕೊನೆಯಲ್ಲಿಯೇ ಅದು ಕಾಣಬೇಕು; ಆತ್ಮದ ವಿಷಯದಲ್ಲಿಯೋ ಎಂದರೆ ನಾನು ಪ್ರಮಾತೃ ಎಂಬ ಅರಿವು ಹೋದಮೇಲೆಯೇ ಆತ್ಮಾನುಭವವಾಗುತ್ತದೆ. ಈ ವಿಷಯದಲ್ಲಿ **ಸಂಪ್ರದಾಯ**ವನ್ನು ಬಲ್ಲವರು ಹೇಳಿರುವ ಒಂದು ಶ್ಲೋಕವನ್ನು ಆಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ ಉದಾಹರಿಸಿರುತ್ತಾರೆ :

**ಅನ್ವೇಷ್ಟವ್ಯಾತ್ಮವಿಜ್ಞಾನಾತ್ ಪ್ರಾಕ್ ಪ್ರಮಾತೃತ್ವಮಾತ್ಮನಃ ।**
**ಅನ್ವಿಷ್ಟಃ ಸ್ಯಾತ್ ಪ್ರಮಾತೈವ ಪಾಪ್ಮದೋಷಾದಿವರ್ಜಿತಃ ॥**

ಒಬ್ಬನು ತನ್ನ ಹಸುವನ್ನು ಹುಡುಕುತ್ತಿದ್ದು ಅದನ್ನು ಕಂಡುಕೊಂಡ ಮೇಲೂ ಹಸುವಿನ ಒಡೆಯನೇ ಆಗಿ ಉಳಿದುಕೊಂಡಿರುತ್ತಾನೆ. ಆದರೆ ಆತ್ಮನನ್ನು ಹುಡುಕಿ ಕಂಡುಕೊಳ್ಳುವದೆಂದರೆ ಹೀಗಲ್ಲ ; ಏಕೆಂದರೆ ಆತ್ಮನು ಅವನನ್ನು ಹೀಗೆ ಹುಡುಕುವವನ ಪರಮಾರ್ಥಸ್ವರೂಪವೇ ಆಗಿರುತ್ತಾನೆ. ಆದರೆ ಈಗ ಅವನನ್ನು ಪ್ರಮಾತೃ- ದೇಹೇಂದ್ರಿಯಮನಸ್ಸುಗಳನ್ನು ಉಪಯೋಗಿಸುವವನು- ಎಂಬ ಅಧ್ಯಾಸದಿಂದ ತಪ್ಪಾಗಿ ತಿಳಿದುಕೊಂಡಿರುತ್ತೇವೆ. ಆದ್ದರಿಂದ **ಆತ್ಮನನ್ನು ಶಾಸ್ತ್ರದಲ್ಲಿ ಹೇಳಿರುವಂತೆ ತಿಳಿದುಕೊಂಡಾಗ ನಮ್ಮ ಪ್ರಮಾತೃತ್ವವು ಅಧ್ಯಸ್ತವು, ಹುಸಿ- ಎಂಬುದು ಗೊತ್ತಾಗುವದಲ್ಲದೆ, ನಾನೇ ಧರ್ಮಾಧರ್ಮಗಳನ್ನು ಮೀರಿರುವ ನಿತ್ಯಶುದ್ಧ**

ಬುದ್ಧಮುಕ್ತನಾದ ಅನುಭವಸ್ವರೂಪದ ಪರಮಾತ್ಮನು- ಎಂಬ ಅನುಭವವಾಗಿಬಿಡುತ್ತದೆ. ಇಲ್ಲಿ ಮೊದಲೇ ಇದ್ದ ಸಿದ್ಧಾನುಭವವೇ ಕೊನೆಗೂ ಫಲರೂಪದಲ್ಲಿ ಕಾಣಿಸಿಕೊಳ್ಳುವದು- ಎಂಬುದೊಂದು ವಿಶೇಷ. ಮತ್ತು ತಾನೇ ತನ್ನನ್ನೇ ತನ್ನಿಂದಲೇ ಅರಿತುಕೊಂಡಿರುತ್ತಾನೆ.

ಮೂರನೆಯದಾಗಿ ಅನಾತ್ಮವಿಷಯದಲ್ಲಿ ಅಜ್ಞಾನವು – ಅದನ್ನು ಅರಿಯದಿರುವದು, ಮತ್ತು ತಪ್ಪಾಗಿ ತಿಳಿದುಕೊಂಡಿರುವದು– ಅದರ ಜ್ಞಾನದಿಂದ ಬಾಧಿತವಾಗಿಬಿಡುತ್ತದೆ. ದೂರಕ್ಕೆ ನಾವು ಒಂದು ಹಗ್ಗವನ್ನು ಕಂಡು ಅದರ ನಿಜವನ್ನರಿಯದೆ ಅದು ಹಾವೆಂದು ಭಾವಿಸಿಕೊಂಡು ಅಂಜಿಕೆ, ನಡುಕ – ಮುಂತಾದ ಅನರ್ಥಗಳನ್ನು ಅನುಭವಿಸುವದು ಅದರ ಸರಿಯಾದ ಜ್ಞಾನದಿಂದ ಹೋಗಿಬಿಡುತ್ತದೆ. ಆದರೆ ಈ ಜ್ಞಾನವು ಮತ್ತೊಂದು ಸಂದರ್ಭದಲ್ಲಿ ಇದೇ ರೀತಿಯ ಹಗ್ಗದ ಹಾವಿನ ಭ್ರಾಂತಿಯುಂಟಾಗದಂತೆ ತಡೆಗಟ್ಟಲಾರದು. ಆತ್ಮಜ್ಞಾನದ ವಿಷಯದಲ್ಲಿ ಹೀಗಲ್ಲ. 'ನಿತ್ಯಶುದ್ಧಬುದ್ಧಮುಕ್ತನಾದ ಪರಮಾತ್ಮನೇ ನಾನು' ಎಂಬ ನಿಶ್ಚಯವು ನಮಗೆ ಆದ ಬಳಿಕ, ಮತ್ತೂ ಒಂದು ಸಲ ನಮಗೆ 'ನಾನು ಸಂಸಾರಿ' ಎಂಬ ಭ್ರಾಂತಿಯಾಗಲಿ ಆದರಿಂದುಂಟಾಗಬಹುದಾದ ಅನರ್ಥಗಳಾಗಲಿ ಎಂದಿಗೂ ಉಂಟಾಗುವಹಾಗಿಲ್ಲ. ಏಕೆಂದರೆ, ಪ್ರಮೇಯವಿಷಯದ ಭ್ರಾಂತಿಯೂ ಅದನ್ನು ಬಾಧಿಸುವ ಪ್ರಮಾಣಜ್ಞಾನವೂ ಪ್ರಮಾತೃವಿಗೇ ಉಂಟಾಗಿರುತ್ತವೆ. ಆದ್ದರಿಂದ ಪ್ರಮೇಯದ ಅರಿವಾದ ಬಳಿಕವೂ ಪ್ರಮಾತೃವಿನ ಪ್ರಮಾತೃತ್ವವು ಹಾಗೇ ಉಳಿದುಕೊಂಡಿರುತ್ತದೆ. ಆದರೆ ಆತ್ಮನ ವಿಷಯದಲ್ಲಿ ನಮಗೆ ಆಗಿರುವ ಅವಿದ್ಯೆಯೂ ನಾನು ನಿತ್ಯಮುಕ್ತನೆಂಬ ನಿಶ್ಚಯವೂ ನಮ್ಮ ಪರಮಾತ್ಮಸ್ವರೂಪದಲಿ ಹುಟ್ಟುಗಟ್ಟಿಕೊಂಡವುಗಳಾಗಿರುತ್ತವೆ. ಈಗ 'ನಾನು ಪ್ರಮಾತೃ ಎಂಬ ಬುದ್ಧಿಯು ಎಷ್ಟು ಗಟ್ಟಿಯಾಗಿರುವದೋ, ಆತ್ಮಜ್ಞಾನವಾದಬಳಿಕ ಇಷ್ಟೇ ಗಟ್ಟಿಯಾಗಿ, ಅಥವಾ ಇದಕ್ಕಿಂತಲೂ ಗಟ್ಟಿಯಾಗಿ 'ನಾನು ಹಿಂದೆಯೂ ಪ್ರಮಾತೃವಾಗಿರಲಿಲ್ಲ, ಈಗಲೂ ಆಗಿಲ್ಲ, ಮುಂದೆಯೂ ಆಗುವಂತಿಲ್ಲ; ಏಕೆಂದರೆ ಪ್ರಮಾತೃ ಕಾಲವೂ ಪ್ರಮಾಣಪ್ರಮೇಯವಿಭಾಗವೂ ಅತ್ಯಂತವಾಗಿ ಹುಸಿಯಾಗಿರುತ್ತವೆ, ಅವಕ್ಕೆ ಆತ್ಮನಿಗಿಂತ ಬೇರೆಯಾದ ಇರವೇ ಇಲ್ಲ' ಎಂಬ ವೇದಾಂತಜ್ಞಾನದ ನಿಶ್ಚಯವು ಆಗಿಬಿಡುವದು- ಪ್ರಮಾತೃವಲ್ಲದವನಿಗೆ

ಭ್ರಾಂತಿ ಎಲ್ಲಿಂದ ಬರಬೇಕು? ಆದ್ದರಿಂದ **ಆತ್ಮಜ್ಞಾನದಿಂದ ಅವಿದ್ಯೆಯು ಆತ್ಯಂತಿಕವಾಗಿ ನಿವೃತ್ತವಾಗುತ್ತದೆ** ಎಂಬುದು ನಿಶ್ಚಿತ.

**ನಾಲ್ಕನೆಯದಾಗಿ** ಅನಾತ್ಮವಾದ ಪ್ರಮೇಯದ ಜ್ಞಾನವಾದಮೇಲೆ ' ಇದನ್ನು ನಾನು ಅರಿತೆನು ' ಎಂಬ ತಿಳಿವಳಿಕೆಯಾಗುವದಲ್ಲದೆ ಅದರ ವಿಷಯದಲ್ಲಿ **ಹೇಯತ್ವ**– 'ಇದು ಕೆಟ್ಟದ್ದು, ನನ್ನ ದುಃಖಕ್ಕೆ ಕಾರಣವಾದದ್ದು, ಆದ್ದರಿಂದ ಇದನ್ನು ತಪ್ಪಿಸಿಕೊಳ್ಳಬೇಕು' – ಎಂಬ ಬುದ್ಧಿಯಾಗಲಿ **ಉಪಾದೇಯತ್ವ**– ಇದು ಒಳ್ಳೆಯದು, ನನ್ನ ಸುಖಕ್ಕೆ ಕಾರಣವಾದದ್ದು, ಆದ್ದರಿಂದ ಇದನ್ನು ಸಂಪಾದಿಸಿಕೊಳ್ಳಬೇಕು– ಎಂಬ ಬುದ್ಧಿಯಾಗಲಿ ಉಂಟಾಗುವವು. ಹೀಗೆ ಈ ಎರಡು ಬುದ್ಧಿಗಳಲ್ಲಿ ಒಂದು ಉಂಟಾದಮೇಲೆ ಅದಕ್ಕೆ ತಕ್ಕಂತೆ ಆ ವಸ್ತುವನ್ನು ನಿವಾರಿಸಿಕೊಳ್ಳುವದಕ್ಕೊ ಅಥವಾ ಅದನ್ನು ಸಂಪಾದಿಸಿಕೊಳ್ಳುವದಕ್ಕೊ **ಪ್ರವೃತ್ತಿಯು** ( ಮುಂದುವರಿಯುವದು ), ಅಥವಾ **ನಿವೃತ್ತಿಯು** ( ಹಿಂಜರಿಯುವದು ) ಆಗಬೇಕಾದದ್ದು ಉಳಿದಿರುತ್ತದೆ. ಆತ್ಮನನ್ನು ಅರಿತುಕೊಳ್ಳದೆ ತಪ್ಪಾಗಿ ಪ್ರಮಾತೃವಾಗಿ ತಿಳಿದುಕೊಂಡಾಗ ಅಧ್ಯಾಸರೂಪವಾದ ಅವಿದ್ಯೆಯು ಇನ್ನೂ ಉಳಿದಿರುತ್ತದೆಯಾದ್ದರಿಂದ ಅದರ ಫಲವಾಗಿ ಇಷ್ಟಾನಿಷ್ಟಗಳ ಪ್ರಾಪ್ತಿಪರಿಹಾರೇಚ್ಛೆಯು ಇದ್ದುಕೊಂಡಿರುತ್ತದೆ; ವಿಷಯಗಳಲ್ಲಿ ರಾಗದ್ವೇಷಗಳಿರುವದೇ ಇದಕ್ಕೆ ಕಾರಣ. ಮತ್ತು ಇದೇ ಅವಿದ್ಯೆಯ ಫಲವಾದ **ಕರ್ತೃತ್ವಭೋಕ್ತೃತ್ವ**ಬುದ್ಧಿಯೂ ಆಗ ಉಳಿದುಕೊಂಡಿರುತ್ತದೆ. ನಾನು ಒಳ್ಳೆಯ ಕರ್ಮವನ್ನು ಮಾಡಿ ಇಷ್ಟವನ್ನು ಸಂಪಾದಿಸಿಕೊಂಡು ಅದನ್ನು ಅನುಭವಿಸಬೇಕು, ಕೆಟ್ಟಕರ್ಮವನ್ನು ಮಾಡಿ ಅನಿಷ್ಟಫಲವನ್ನು ಅನುಭವಿಸದಂತೆ ನೋಡಿಕೊಳ್ಳಬೇಕು – ಎಂಬ ಬುದ್ಧಿಯು ಸ್ವಭಾವದಿಂದಲೇ ಮನುಷ್ಯನಿಗೆ ಇರುವದಕ್ಕೆ ಈ ಅವಿದ್ಯೆಯೇ ಕಾರಣ. ಆದ್ದರಿಂದ ಅನಾತ್ಮವಾದ ಪ್ರಮೇಯದ ಜ್ಞಾನವು ಪ್ರವೃತ್ತಿಗೆ ಅಥವಾ ನಿವೃತ್ತಿಗೆ ಕಾರಣವಾಗಿರುತ್ತದೆ.

ಆದರೆ ಆತ್ಮಜ್ಞಾನದ ವಿಷಯದಲ್ಲಿ ಹೀಗಿರುವದಿಲ್ಲ; ನಾನು ಕರ್ತೃವಲ್ಲ, ಭೋಕ್ತೃವಲ್ಲ, ಧರ್ಮಾಧರ್ಮಗಳನ್ನು ಮೀರಿರುವ ಪರಮಾತ್ಮನೇ– ಎಂಬ

ಅರಿವೇ ಆತ್ಮಜ್ಞಾನವು. ಅನಾತ್ಮದ ಜ್ಞಾನವಾದಮೇಲೂ ಶೋಕವುಂಟು; ಆತ್ಮಜ್ಞಾನವಾದಮೇಲೆ ಶೋಕವಿಲ್ಲ, ಏಕೆಂದರೆ ಮೋಹವೇ ಇಲ್ಲ. ಆ ಜ್ಞಾನವಾದ ಬಳಿಕ 'ಆತ್ಮನ್ಯೇವ ಅವಸ್ಥಾನಮ್' – ತನ್ನಲ್ಲಿಯೇ ಇದ್ದುಕೊಂಡಿರುವದು, ರೋಗವು ಹೋದಬಳಿಕ ಹೇಗೆ ಮನುಷ್ಯನ ದೇಹದಲ್ಲಿ ಧಾತುವೈಷಮ್ಯವಿಲ್ಲದೆ ಸ್ವಸ್ಥತೆಯುಂಟಾಗುವದೋ ಹಾಗೆ-ಅವಿದ್ಯಾದ್ಯನರ್ಥಗಳು ಹೋಗಲಾಗಿ **ಆತ್ಯಂತಿಕವಾದ ಸ್ವಸ್ಥತೆಯು** ಉಂಟಾಗಿಬಿಡುತ್ತದೆ. ಆದ್ದರಿಂದಲೇ ಈ **ಜ್ಞಾನವಾದಬಳಿಕ ಕರ್ತೃತ್ವಭೋಕ್ತೃತ್ವಗಳು** ಇರುವದೇ ಇಲ್ಲ; **ಆದ್ದರಿಂದ ಆಗ ಪ್ರವೃತ್ತಿಗಾಗಲಿ ನಿವೃತ್ತಿಗಾಗಲಿ ಅವಕಾಶವಿರುವದಿಲ್ಲ.**

ಆಚಾರ್ಯರು "**ಬ್ರಹ್ಮಾವಗತಿರ್ಹಿ ಪುರುಷಾರ್ಥಃ। ನಿಃಶೇಷಸಂಸಾರಬೀಜಾವಿದ್ಯಾದ್ಯನರ್ಥನಿಬರ್ಹಣಾತ್**" ಬ್ರಹ್ಮದ ಅನುಭವವೆಂಬುದು ಪರಮಪುರುಷಾರ್ಥವು ; ಏಕೆಂದರೆ ಸಂಸಾರಕ್ಕೆ ಕಾರಣವಾಗಿರುವ ಅವಿದ್ಯೆಯೇ ಮುಂತಾದವುಗಳನ್ನು ಅದು ತೀರ ನಾಶಮಾಡಿಬಿಡುತ್ತದೆ-ಎಂದಿರುತ್ತಾರೆ. '**ಏತದ್ ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ**' (ಗೀ. ೧೫–೨೦) ಇದನ್ನರಿತುಕೊಂಡರೆ ಜ್ಞಾನಿಯೂ ಆಗುವನು ; ಕೃತಕೃತ್ಯನೂ ಆಗುವನು. ಈ ವಿಷಯದಲ್ಲಿ ಸಂಶಯವಾದಿಗಳಿಗಾಗಲಿ ಮಿಕ್ಕ ಯಾವ ನಾಸ್ತಿಕರಿಗಾಗಲಿ ಅವಕಾಶವಿರುವದಿಲ್ಲ ; ಏಕೆಂದರೆ ಇದು ಅನುಭವಪರ್ಯಂತವಾದ ನಿಶ್ಚಿತಜ್ಞಾನ. **ಇನ್ನುಮೇಲೆ ಹೋಗಬೇಕಾಗಿರುವ ಅಜ್ಞಾನವಿಲ್ಲ, ಬರಬೇಕಾಗಿರುವ ಜ್ಞಾನವೂ ಇಲ್ಲ.**

ಜ್ಞಾನಿಗಳು ಕರ್ಮವನ್ನು ಮಾಡುವದೇ ಇಲ್ಲವೆ? ಜನಸಮಾಜದ ಸುಧಾರಣೆಯನ್ನು ಮಾಡುವದಿಲ್ಲವೆ? – ಎಂದು ಕೇಳಬಾರದು. 'ಸಮಾಜ ಸುಧಾರಣೆ' ಎಂದು ನಾವು ಕರೆಯುತ್ತಿರುವದು ಬೀದಿಯ ಕಸವನ್ನು ಗುಡಿಸುವ ಕೆಲಸ-ಎಂದು **ಸ್ವಾಮಿ ವಿವೇಕಾನಂದರವರು** ಹೇಳಿರುವದನ್ನು ಸ್ಮರಿಸಿಕೊಳ್ಳಿರಿ. ಜ್ಞಾನಿಯು ಆತ್ಮನಿಷ್ಠನಾಗಿರುತ್ತಿದ್ದರೂ ವ್ಯವಹಾರದೃಷ್ಟಿಯಿಂದ ಜನರಿಗೂ ಅವನಿಂದ ಪರೋಪಕಾರವಾಗುವದು. ಸೂರ್ಯನು ಆಕಾಶದಲ್ಲಿ

ತಾನಿರುವಂತೆ ಇರುತ್ತಿದ್ದರೂ ಭೂಮಿಯ ಮೇಲಿರುವ ಜನರ ವ್ಯವಹಾರಕ್ಕೆ ಅವನಿಂದ ಎಷ್ಟು ಉಪಕಾರವಾಗುತ್ತದೆ, ನೋಡಿರಿ ! ಇದರಂತೆಯೇ **ಜ್ಞಾನನಿಷ್ಠನಾಗಿರುವಾತನಿಂದಲೂ ಲೋಕಕ್ಕೆ ಉಪಕಾರವಾಗುತ್ತಲೇ ಇರುತ್ತದೆ.** ಆಧಿಕಾರಿಕಪುರುಷರಾದವರು ಲೋಕಸಂಗ್ರಹಕ್ಕಾಗಿ ಮಾಡುವ ಮಹಾಕಾರ್ಯಗಳೂ ಉಂಟೆಂಬುದು ಇತಿಹಾಸಪುರಾಣಗಳಿಂದ ತಿಳಿಯಬರುತ್ತಿದೆ. ಹೀಗೆ ಜ್ಞಾನಿಯು ಆತ್ಯಂತಿಕವಾಗಿ ಅಜ್ಞಾನವನ್ನು ಕಳೆದುಕೊಂಡು ಕೃತಕೃತ್ಯನಾಗಿರುತ್ತಾನೆ.

# ೫. ಬ್ರಹ್ಮಾತ್ಮಜ್ಞಾನದಿಂದ ಅನರ್ಥನಿವೃತ್ತಿ

(2—5—63)

'ಬ್ರಹ್ಮವಿದ್ಯೆ', 'ಬ್ರಹ್ಮಜ್ಞಾನ', 'ಬ್ರಹ್ಮಾತ್ಮಜ್ಞಾನ', 'ಆತ್ಮೈಕತ್ವವಿದ್ಯೆ' –ಇವೆಲ್ಲ ಪರ್ಯಾಯಶಬ್ದಗಳು. ಈ ಜ್ಞಾನವು ಅವಗತಿಪರ್ಯಂತವಾದ ಜ್ಞಾನ; ಅನುಭವದಲ್ಲಿಯೇ ಕೊನೆಗಾಣತಕ್ಕದ್ದು. 'ಬ್ರಹ್ಮವನ್ನು ಅರಿತರೆ ಪರಮಪುರುಷಾರ್ಥವು ದೊರಕುತ್ತದೆ', ಅವನನ್ನು ಕಂಡುಕೊಂಡರೆ ಹೃದಯ ಗ್ರಂಥಿಯು ನಾಶವಾಗುತ್ತದೆ' ಎಂದು ಶ್ರುತಿಯು ಹೇಳುತ್ತದೆ. ಆದರೆ ಬ್ರಹ್ಮ, ಅದನ್ನು ಅರಿಯುವವನು, ಪರಪ್ರಾಪ್ತಿ–ಎಂದು ಮೂರಲ್ಲ; ಕಾಣುವವನು, ಕಾಣುವದು, ಕಂಡುಕೊಂಡ ಬ್ರಹ್ಮ–ಎಂದು ಮೂರಲ್ಲ. ವಾಕ್ಯದಿಂದ ಹಾಗೆ ಭೇದವಿರುವಂತೆ ತೋರಬಹುದು; ಅಥವಾ ಬಾಧಿತಾನುವೃತ್ತಿಯಿಂದ ಜ್ಞಾನಿಗೂ ಹಾಗೆ ತೋರಬಹುದು. ಕನ್ನಡಿಯಲ್ಲಿ ತೋರುವ ಪ್ರತಿಬಿಂಬವು ಕನ್ನಡಿಯಿಂದ ಇಷ್ಟುದೂರವಿದೆ, ನಾನು ಅಷ್ಟೇ ದೂರವಿದೇನೆ–ಎಂಬಂತೆ ತೋರಿದರೂ ಅದು ಹಾಗೆಯೇ ಇರಬೇಕಾದದ್ದೇನೂ ಇಲ್ಲವಷ್ಟೆ? ಆತ್ಮ ಜ್ಞಾನಕ್ಕೂ ಅನಾತ್ಮಜ್ಞಾನಕ್ಕೂ ಇರುವ ವೈಲಕ್ಷಣ್ಯವನ್ನು ಆಗಲೆ ತಿಳಿದು ಕೊಂಡಾಗಿದೆ. **ಅನಾತ್ಮಜ್ಞಾನದಲ್ಲಿ ಜ್ಞಾತೃ, ಜ್ಞಾನ, ಜ್ಞೇಯ–ಎಂಬ ವಿಭಾಗವಿದೆ; ಆತ್ಮಜ್ಞಾನದಲ್ಲಿ ಹಾಗಿಲ್ಲ, ಎಲ್ಲವೂ ಒಂದೇ ಅನುಭವ.**

ಶಾಸ್ತ್ರದಿಂದಾಗುವ ಜ್ಞಾನವೆಲ್ಲ ಪ್ರವರ್ತಕವಾಗಬೇಕೆಂಬ ನಿಯಮವಿಲ್ಲ. ಕರ್ಮಕಾಂಡವಾಕ್ಯಗಳಿಂದಾಗುವ ಜ್ಞಾನವು ಯಾವದಾದರೊಂದು ಕರ್ಮ-ದಲ್ಲಿ ತೊಡಗಿಸುತ್ತದೆ; ಅಥವಾ ಯಾವದಾದರೊಂದು ಕರ್ಮದಿಂದ ಬಿಡಿಸು-ತ್ತದೆ. ಯಾರು 'ನಾನು ಕರ್ತೃಭೋಕ್ತೃ'–ಎಂಬ ಅಭಿನಿವೇಶವುಳ್ಳವರಾಗಿರು-ವರೋ ಆ ಅಧಿಕಾರಿಗಳು ಕರ್ಮಗಳಲ್ಲಿ ತೊಡಗುತ್ತಾರೆ. ಆ ವಾಕ್ಯಗಳಲ್ಲಿ 'ಈ ಕರ್ಮವನ್ನು ಮಾಡಿರಿ' ಎಂಬಂತೆ ಆಜ್ಞಾರೂಪದ ಕ್ರಿಯಾಪದಗಳೇ ಇರಬೇಕೆಂಬ ನಿರ್ಬಂಧವೇನೂ ಇಲ್ಲ. 'ಇಂಥ ಕರ್ಮಕ್ಕೆ ಇಂಥದ್ದು ಫಲವು' ಎಂದು ಹೇಳಿದರೂ ಆ ಫಲದಲ್ಲಿ ಆಶೆಯಿರುವಾತನು ಅದರಲ್ಲಿ ತೊಡಗಿಯೇ ತೀರುತ್ತಾನೆ. 'ಈ ಕಡಗವನ್ನು ಯಾರಿಗಾದರೂ ದಾನಮಾಡುತ್ತೇನೆ' ಎಂದು

ಕೊಗಿಕೊಂಡ ಮುದಿಹುಲಿಯ ಮಾತನ್ನು ಕೇಳಿ ಒಬ್ಬ ದುರಾಶಾಗ್ರಸ್ತನಾದ ಬ್ರಾಹ್ಮಣನು ಅದನ್ನು ನಂಬಿ ಅತ್ತಕಡೆಗೆ ಹೋದನೆಂದೂ ದಾರಿಯಲ್ಲಿ ಅವನ ಕಾಲು ಕೆಸರಿನಲ್ಲಿ ಕುಸಿದು ಹೂತುಕೊಂಡಿತೆಂದೂ ಪಂಚತಂತ್ರದಲ್ಲಿ ಬರೆದಿರುವ ಕಥೆಯನ್ನು ನೀವು ಕೇಳಿರಬಹುದು. ಆಶೆಯು ಕರ್ಮದಲ್ಲಿ ತೊಡಗಿಸುತ್ತದೆ ಎಂಬುದು ನಮಗೆಲ್ಲ ತಿಳಿದೇಇದೆ. ಆದ್ದರಿಂದ ಕರ್ಮಕಾಂಡದ ವಾಕ್ಯಗಳು ಕೂಡ ನಿಜವಾಗಿ ಕಾರಕವಲ್ಲ; ಅವು ಆಯಾ ಫಲದಲ್ಲಿ ಆಶೆಯಿದ್ದವರಿಗೆ ಇಂಥಿಂಥ ಕರ್ಮವು ಉಪಾಯ-ಎಂದು ಮಾತ್ರ ತಿಳಿಸುತ್ತವೆ. ಫಲದ ಆಶೆ ಇದ್ದವರು ಆಯಾ ಕರ್ಮವನ್ನು ಮಾಡುತ್ತಾರೆ, ಅಷ್ಟೆ.

ಇನ್ನು ವೇದಾಂತವಾಕ್ಯಗಳೊ ? – ಎಂದರೆ ಇವುಗಳ ಜ್ಞಾನವಾದಾಗ ಪ್ರವೃತ್ತಿಯೂ ಇಲ್ಲ; ನಿವೃತ್ತಿಯೂ ಇಲ್ಲ ; ನಮ್ಮಲ್ಲಿ ನಾವು ಇದ್ದುಕೊಂಡಿರುತ್ತೇವೆ ಅಷ್ಟೆ. ಆದ್ದರಿಂದಲೇ ಶ್ರುತಿಯು “ ಪರಮಾತ್ಮನನ್ನು ಕಂಡಾಗ ಹೃದಯಗ್ರಂಥಿಯು ನಾಶವಾಗುತ್ತದೆ” ಎಂದು ಸಾರುತ್ತದೆ. ಆತ್ಮನಿಗೂ ಮನಸ್ಸಿಗೂ ಇಂದ್ರಿಯಗಳಿಗೂ ವಿಷಯಗಳಿಗೂ ಬಿದ್ದಿರುವ ಗಂಟೇ **ಹೃದಯ ಗ್ರಂಥಿ;** ಇದರಿಂದಲೇ ನಮಗೆ ಕಾಮಕರ್ಮಗಳುಂಟಾಗಿರುವದು; ಆತ್ಮ ಜ್ಞಾನಕ್ಕೆ ಅಡ್ಡಿಯಾಗಿರುವದು. ಆತ್ಮಜ್ಞಾನವಾದದ್ದಕ್ಕೆ ಈ ಗಂಟು ಬಿಚ್ಚಿಕೊಂಡದ್ದೇ ಗುರುತು. ಆತ್ಮನಲ್ಲಿ ನಿಜವಾಗಿ ಪ್ರಮಾತೃತ್ವವಿರುವದಿಲ್ಲ. ಆದ್ದರಿಂದ ಅವನು ಏತರಲ್ಲಿಯಾದರೂ ತೊಡಗುವ, ಅಥವಾ ಯಾವದನ್ನಾದರೂ ಬಿಡುವ ಸ್ವಭಾವದವನಲ್ಲ. ಆತ್ಮನನ್ನು ಬಿಡುವದಕ್ಕೂ ಆಗುವದಿಲ್ಲ, ತೆಗೆದುಕೊಳ್ಳುವದಕ್ಕೂ ಆಗುವದಿಲ್ಲ.

‘ಬ್ರಹ್ಮಜ್ಞಾನವು ಬರುವದಕ್ಕೆ ಏನುಮಾಡಬೇಕು ?’ ಎಂದು ಕೇಳುವವರಿಗೆ ಒಂದು ದೃಷ್ಟಾಂತದಿಂದ ಉತ್ತರವನ್ನು ಹೇಳಬಹುದು. ನಿದ್ರೆಯು ಬರುವದಕ್ಕೆ ಏನು ಮಾಡಬೇಕು? ನಿದ್ರೆಯು ಬರಲೆಂದು ಪ್ರಯತ್ನಮಾಡಿದರೆ ಅದು ಬಂದೀತೆ ? ಏನೂಮಾಡದೆ ಇರುವದೇ-ಸುಮ್ಮನಿರುವದೇ, ತನ್ನೊಳಕ್ಕೆ ತಾನು ಸರಿದುಕೊಳ್ಳುವದೇ–ನಿದ್ರೆಗೆ ಉಪಾಯ. ಇದು ನಮ್ಮೆಲ್ಲರ ಅನುಭವದಲ್ಲಿಯೂ ಇದೆ. ಇದರಂತೆ ಅಬ್ರಹ್ಮಜ್ಞಾನವನ್ನು – ನಾನು ಬ್ರಹ್ಮಕ್ಕಿಂತ ಬೇರೆಯಾದ ಸ್ವರೂಪದವನೆಂಬ ಅರಿವನ್ನು ಕಳೆದುಕೊಳ್ಳಬೇಕು ಅಷ್ಟು

ಮಾತ್ರದಿಂದ ಬ್ರಹ್ಮಜ್ಞಾನವು ಬಂದುಬಿಡುತ್ತದೆ. ಕಾಲನ್ನು ಎತ್ತದೆ ನೀರಿನಲ್ಲಿ ಈಜಾಡುವದು ಹೇಗೆ ಬರಲಾರದೋ ಹಾಗೆ ಹೊರಗಿನ **ವಿಷಯಧ್ಯಾನವನ್ನು ಬಿಡದೆ ಎಂದಿಗೂ ಜ್ಞಾನವು ಬರಲಾರದು.** ನಿಜವಾಗಿ ನೋಡುವದು, ಸವಿಯುವದು, ಮೂಸುವದು– ಮುಂತಾದ ನಮ್ಮ ಕ್ರಿಯೆಗಳನ್ನು ಮಾಡುವಾಗಲೆಲ್ಲ ನಾವು ನಮ್ಮ ಸ್ವರೂಪವಾದ ಅನುಭವದಲ್ಲಿಯೇ ಇರುತ್ತೇವೆ. ಶ್ರುತಿಯು ಏನೆನ್ನುತ್ತದೆ, ಕೇಳಿರಿ :

**ಯೇನ ರೂಪಂ ರಸಂ ಗಂಧಂ**
**ಶಬ್ದಾನ್ ಸ್ಪರ್ಶಾಂಶ್ಚ ಮೈಥುನಾನ್ ।**
**ಏತೇನೈವ ವಿಜಾನಾತಿ**
**ಕಿಮತ್ರ ಪರಿಶಿಷ್ಯತೇ । ಏತದ್ವೈ ತತ್ ॥** ಕಾ. ೨–೧–೩.

"ಯಾವ ಈ ಅನುಭವಸ್ವರೂಪದಿಂದಲೇ ರೂಪವನ್ನೂ, ರಸವನ್ನೂ, ವಾಸನೆಯನ್ನೂ, ಶಬ್ದವನ್ನೂ, ವಿಷಯಸಂಪರ್ಕದಿಂದಾಗುವ ಸುಖಪ್ರತ್ಯಯಗಳನ್ನೂ ಅರಿಯುತ್ತಾರೋ ಯಾವದರಿಂದ ಅರಿಯಲಾಗದ್ದು ಒಂದೂ ಉಳಿದಿರುವದಿಲ್ಲವೋ ಅದೇ ಈ ಪರಮಾತ್ಮತತ್ತ್ವವು." ನಮ್ಮ ಬಾಹ್ಯೇಂದ್ರಿಯಗಳ ಮತ್ತು ಮನಸ್ಸಿನ ವ್ಯಾಪಾರದಲ್ಲೆಲ್ಲ ಈ ಅನುಭವರೂಪನಾದ ಆತ್ಮನು ತುಂಬಿಕೊಂಡಿರುತ್ತಾನೆ; ಆ ಅನುಭವದ ಬಲದಿಂದಲೇ ನಾವು ವಿಷಯಗಳನ್ನು ಅರಿಯುತ್ತಿರುವದು. **ಸೂರ್ಯನ ಬೆಳಕಿನಿಂದಲೇ ಜನರು ಎಲ್ಲವನ್ನೂ ಅರಿತು ವ್ಯವಹರಿಸುತ್ತಿರುವಂತೆ ಆತ್ಮನ ಅನುಭವರೂಪದ ಬೆಳಕಿನಿಂದಲೇ ಎಲ್ಲವನ್ನೂ ನಾವು ಅರಿಯುತ್ತಿರುವೆವು. 'ಯೇನ ಸರ್ವಮಿದಂ ತತಮ್'** ಎಂಬ ಗೀತೋಕ್ತಿಯಂತೆ ಯಾವ ಆತ್ಮಚೈತನ್ಯದಿಂದ ಎಲ್ಲವೂ ವ್ಯಾಪ್ತವಾಗಿರುವದೋ ಅದನ್ನು ಅರಿಯುವದಕ್ಕೆ ಮತ್ತೆ ಬೇರೆಯ ಯಾವ ಪ್ರಯತ್ನವುತಾನೆ ಬೇಕಾಗಿದ್ದೀತು ? ನಮ್ಮಲ್ಲಿ ನಾವು ಕುಳಿತರೆ ಆಯಿತು. ಇಷ್ಟೇ ಸಾಕಾಗಿದೆ. ಆದ್ದರಿಂದ ವಿಷಯಧ್ಯಾನವು ಹೋಗಬೇಕು, ಇಂದ್ರಿಯಗಳನ್ನು ಬಿಟ್ಟು ಹಿಂದಕ್ಕೆ ಸರಿಯಬೇಕು ; ಮನಸ್ಸನ್ನು ಹಿಂದಕ್ಕೆಳೆದುಕೊಳ್ಳಬೇಕು. ಈ ಇಂದ್ರಿಯಗಳ ಕಲಬೆರಕೆ ಹೋದರೆ ಶುದ್ಧ ಆತ್ಮಾನುಭವದಲ್ಲಿ ಉಳಿದುಕೊಳ್ಳುವೆವು.

ಮನಸ್ಸನ್ನು ಹಿಂತಿರುಗಿಸುವದೆಂದರೇನು ? ಇಂದ್ರಿಯಗಳನ್ನು ಹಿಂದಕ್ಕೆ ಸರಿಯಿಸುವದೆಂದರೇನು ? **ಹೊರಗಿನ ವಿಷಯಗಳನ್ನು ಹೊರಗೇ ಬಿಟ್ಟುಬಿಡಿರಿ; ಅವುಗಳ ಚಿಂತೆಯನ್ನು ಹತ್ತಿಸಿಕೊಳ್ಳಬೇಡಿರಿ. ನಿಮ್ಮಲ್ಲಿ ನೀವು ನಿಲ್ಲಿರಿ. ಅದೇ ಆತ್ಮಜ್ಞಾನ.** 'ನನ್ನಲ್ಲಿ ನಾನು ನಿಂತೆನು' ಎಂಬುದರ ಅರ್ಥವನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಏಕೆಂದರೆ ನಾವುಗಳೆಲ್ಲರೂ ದ್ವಿಭಾಷಿಗಳಂತೆ ಪ್ರಮಾತೃವಾಗಿ ಹೊರಗಿನ ವಿಷಯವ್ಯವಹಾರವನ್ನೂ ಇಟ್ಟುಕೊಂಡಿರುತ್ತೇವೆ; ಅದೇ ಕಾಲದಲ್ಲಿಯೇ ಎಲ್ಲವನ್ನೂ ನೋಡುತ್ತಿರುವ ಸಾಕ್ಷಿರೂಪದಿಂದಲೂ ಇದ್ದುಕೊಂಡಿರುವೆವು. ನಾನು ಎಂಬ ಪ್ರಮಾತೃರೂಪವಾದ ವಸ್ತು ನಿಜವಾಗಿ ಅನುಭವಾತ್ಮಕನಾದ ಆತ್ಮನ ಬೆಳಕಿನಿಂದ ಹೊಳೆಯುತ್ತಿರುವದು. ಅದನ್ನೇ ಆತ್ಮನು, ನಿಜವಾದ ಸ್ವರೂಪವು-ಎಂದು ಭಾವಿಸುತ್ತಾ ನಾವು ಮೋಸಹೋಗುತ್ತಿದ್ದೇವೆ. ಒಂದು ದುಂಡನೆಯ ತವರದ ತುಂಡು ನೆಲದಲ್ಲಿ ಬಿದ್ದುಕೊಂಡು ಸೂರ್ಯನ ಬಿಸಿಲಿಗೆ ಥಳಗುಟ್ಟುತ್ತಿದ್ದರೆ 'ಸೂರ್ಯನು ನೆಲದಮೇಲೆ ಬಿದ್ದಿದ್ದಾನೆ' ಎನ್ನುವ ಮೂಢರಂತೆ ನಾವು ಆತ್ಮಚೈತನ್ಯದ ಬೆಳಕಿನಿಂದ ಥಳಗುಟ್ಟುತ್ತಿರುವ ಈ ಪ್ರಮಾತೃರೂಪವನ್ನೇ 'ನಾನು' ಎಂದು ಭಾವಿಸಿಕೊಳ್ಳುತ್ತಿದ್ದೇವೆ; ಅದರಿಂದಾಗುವ ಶೋಕಮೋಹಗಳಿಗೂ ತುತ್ತಾಗುತ್ತಿದ್ದೇವೆ. ಆದರೆ 'ನಿಜವಾದ ನಾನು' ಇದರ ಹಿಂದೆ ಇದಕ್ಕೆ ಇರುವ ತಡುಪಾಗಿರುತ್ತದೆ. ಶ್ರುತಿಯನ್ನು ಕೇಳಿ :

**ಸ್ವಪ್ನಾಂತಂ ಜಾಗರಿತಾಂತಂ ಚ**
**ಉಭೌ ಯೇನಾನುಪಶ್ಯತಿ**
**ಮಹಾಂತಂ ವಿಭುಮಾತ್ಮಾನಂ**
**ಮತ್ವಾ ಧೀರೋ ನ ಶೋಚತಿ ॥** ಕಾ. ೨-೨-೪.

ಸ್ವಪ್ನಾವಸ್ಥೆಯನ್ನೂ ಎಚ್ಚರದವಸ್ಥೆಯನ್ನೂ ಯಾವ ಅನುಭವ ಸ್ವರೂಪದಿಂದ ಕಾಣುತ್ತಾನೋ ಆ ಮಹಾವ್ಯಾಪಕನಾದ ಆತ್ಮನನ್ನೇ ಅರಿತುಕೊಂಡವನು ಶೋಕಿಸುವದಿಲ್ಲ.' ಇಲ್ಲಿಯೂ ಎಚ್ಚರದಲ್ಲಿ ಪ್ರಮಾತೃವಾಗಿದ್ದು ವ್ಯವಹರಿಸುವ 'ನಾನು' ಎಂಬವನಿಗೆ ಕನಸಿಗೆ ಹೋಗಲು ಯೋಗ್ಯತೆ ಇರುವದಿಲ್ಲ. 'ನಾನು ಕನಸುಕಂಡೆನು' ಎನ್ನುತ್ತಿದೇವಲ್ಲ, ಯಾವ ಸಾಕ್ಷಿ

ಚೈತನ್ಯದ ಬಲದಿಂದ ಹೀಗೆಂದು ಹೇಳುತ್ತಿರುವೆವೋ ಅವನೇ ಈ ಎರಡವಸ್ಥೆಗಳನ್ನೂ ತನ್ನ ಅನುಭವಸ್ವರೂಪದಿಂದ ವ್ಯಾಪಿಸಿರುವ ನಮ್ಮ ನಿಜವಾದ ಆತ್ಮನು. 'ಆ ಸ್ವರೂಪವೇ ನಾನು' ಎಂಬ ಅನುಭವವನ್ನು ಕಂಡುಕೊಂಡವನಿಗೆ ಎಲ್ಲಿಯ ಶೋಕ ? ಏತಕ್ಕಾಗಿ ಶೋಕ ? ಒಂದು ದೃಷ್ಟಿಯಿಂದ ನೋಡಿದರೆ ಪ್ರಮಾತೃವಾಗಿರುವ ನಾವೇ ಮತ್ತೊಂದು ದೃಷ್ಟಿಯಿಂದ ನೋಡಿದರೆ ಪರಮಾತ್ಮಸ್ವರೂಪರಾಗಿಬಿಟ್ಟಿರುತ್ತೇವೆ; ಪ್ರಮಾತೃಸ್ವರೂಪವನ್ನು ಬಿಡಿಸಿಕೊಂಡು ನಮ್ಮ ಸ್ವರೂಪದಲ್ಲಿ ನಿಂತುಬಿಟ್ಟೆವೆಂದರೆ ಅವಿದ್ಯೆಯ ನಿವೃತ್ತಿಯಾಯಿತು, ಆತ್ಮಪ್ರಾಪ್ತಿಯಾಯಿತು.

'ಇದು ಹೃದಯದಲ್ಲಿರುವದೆಂದು ಯಾವನು ಅರಿತುಕೊಳ್ಳುವನೋ ಅವನು ಅವಿದ್ಯೆಯ ಗಂಟನ್ನು ಬಿಚ್ಚಿಕೊಳ್ಳುವನು', 'ಅವಿದ್ಯೆಯ ಆಚೆಯ ದಡವನ್ನು ಕಾಣಿಸಿದೆಯಲ್ಲ, ಆ ನೀನೇ ನಮ್ಮ ತಂದೆ !' ಎಂದು ಶ್ರುತಿಯಲ್ಲಿ ಅವಿದ್ಯಾನಿವೃತ್ತಿಯನ್ನು ಬಗೆಬಗೆಯಾಗಿ ವರ್ಣಿಸಿರುತ್ತದೆಯಷ್ಟೆ? ಅದನ್ನು ಹೀಗೆಯೇ ತಿಳಿದುಕೊಳ್ಳಬೇಕು. **'ವಿದ್ಯಾಪ್ರಾಪ್ತಿ', 'ಅವಿದ್ಯಾನಿವೃತ್ತಿ', 'ಬ್ರಹ್ಮಪ್ರಾಪ್ತಿ'- ಇವು ಕ್ರಮಕ್ರಮವಾಗಿ ಒಂದೊಂದಾಗಿ ಆಗುವವಲ್ಲ, ಒಟ್ಟಿಗೇ ಆಗಿಬಿಡುತ್ತವೆ.** ಊಟಮಾಡುವವನಿಗೆ ಹೇಗೆ ಪ್ರತಿಯೊಂದು ತುತ್ತಿಗೂ ಸಂತೃಪ್ತಿಯೂ ಪುಷ್ಟಿಯೂ ಹಸಿವು ಹೋಗುವದೂ- ಆಗುತ್ತಿರುವವೋ ಹಾಗೆಯೇ ಇದನ್ನು ತಿಳಿಯಬೇಕು. ಪರಮಾರ್ಥಕ್ಕೂ ವ್ಯವಹಾರಕ್ಕೂ ನಿಜವಾಗಿ ಭೇದವಿಲ್ಲ ; ಒಂದೇ ತತ್ತ್ವವು ಬೇರೆಬೇರೆಯ ಎರಡು ದೃಷ್ಟಿಗಳಿಂದ ಪರಮಾರ್ಥವೆಂದೂ ವ್ಯವಹಾರವೆಂದೂ ಕಾಣಿಸುತ್ತಿರುತ್ತದೆ.

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।**
**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥**

ಗೀ. ೨-೬೯

ಪರಮಾರ್ಥವೆಂಬುದು ಸಾಮಾನ್ಯಜೀವರಿಗೆ ಒಂದು ಕಗ್ಗತ್ತಲೆಯ ರಾತ್ರಿಯಿದ್ದಂತೆ. ಅವರಿಗೆ ಪರಮಾರ್ಥವೆಂಬುದು ಹೇಗೆ, ಎಲ್ಲಿದೆ ? -ಎಂಬುದರ ಅರಿವೇ ಆಗುವಂತಿರುವದಿಲ್ಲ. ಕಗ್ಗತ್ತಲೆಯಲ್ಲಿ ಓಡಾಡುವವರಿಗೆ ಎಲ್ಲವೂ ಹೇಗೆ ಕಪ್ಪುಬಣ್ಣದ್ದೇ ಆಗಿರುವದೋ, 'ಇದು ಇಂಥದ್ದು' ಎಂದು ಗೊತ್ತಾಗು

ವದಿಲ್ಲವೋ, ಹಾಗೆಯೇ ಅಜ್ಞಾನದ ಕತ್ತಲೆಯಲ್ಲಿರುವವರಿಗೆ "ಅಖಂಡೈಕರಸವಾದ ಚಿನ್ಮಾತ್ರಾನುಭವಸ್ವರೂಪವಾದ ಪರಮಾನಂದತತ್ತ್ವವೊಂದಿದೆ' ಎಂದರೆ ಆಶ್ಚರ್ಯವಾಗುತ್ತದೆ. ಇಷ್ಟೊಂದು ಭೇದಗಳಿಂದ ತುಂಬಿರುವ ಸುಖದುಃಖಮಯವಾದ ಈ ಜಗತ್ತನ್ನು ಅಖಂಡಚಿನ್ಮಾತ್ರವಸ್ತುವೆಂದೂ ಆನಂದರೂಪವೆಂದೂ ಹೇಳುತ್ತಿದ್ದಾರಲ್ಲ! -ಎಂದು ಅವರಿಗೆ ಅನಿಸುತ್ತಿರುತ್ತದೆ. ಆದರೆ ಇದು ನನ್ನದು, ಇದು ನಿನ್ನದು; ಇದನ್ನು ಹೀಗೆ ಮಾಡಿದರೆ ಇಂಥ ಫಲವು ಸಿಕ್ಕುವದು-ಎಂದು ಸಾಮಾನ್ಯಜನರು ವಿಂಗಡಿಸಿ ಸ್ಪಷ್ಟವಾಗಿ ಕಾಣುತ್ತಿರುವಂತೆ ಯಾವದನ್ನು ವ್ಯವಹರಿಸುತ್ತಿರುವರೋ, ಆ ಭೇದ ಪ್ರಪಂಚವು ಜ್ಞಾನಿಯಾದವನಿಗೆ ಕಾಣಿಸುತ್ತಿರುವದೇ ಇಲ್ಲ. ಎಲ್ಲಿ ನೋಡಿದರೂ ಒಂದೇ ಒಂದು ಆನಂದಘನವಾದ ತತ್ತ್ವವು ಇರುವಲ್ಲಿ ಇವರಿಗೆ ಹೀಗೆಲ್ಲ ಭೇದವು ಏತರಿಂದ ಕಾಣಿಸುತ್ತಿರಬಹುದು? ಇವರೆಲ್ಲಿಯೋ ಕನವರಿಸುತ್ತಿರಬೇಕು-ಎಂದು ಅವನ ಭಾವನೆ. **ಇರುವದು ಒಂದೇ ತತ್ತ್ವವು. ದೃಷ್ಟಿಭೇದದಿಂದ ಪ್ರಾಕೃತಜನರಿಗೆ ಅದು ಭೇದಪ್ರಪಂಚವಾಗಿ ತೋರುತ್ತದೆ; ಜ್ಞಾನಿಗೆ ಅದು ಅಖಂಡಚಿನ್ಮಾತ್ರವಾಗಿ ಕಾಣಿಸುತ್ತಿರುತ್ತದೆ.**

'ಆತ್ಮಜ್ಞಾನವಾಯಿತು' ಎಂದರೆ ವಿಪರೀತಜ್ಞಾನವು, ಅಧ್ಯಾರೋಪಲಕ್ಷಣವಾದ ಅವಿದ್ಯೆಯು, ಹೋಯಿತು ಎಂದರ್ಥ; 'ಆತ್ಮಪ್ರಾಪ್ತಿಯಾಯಿತು' ಎಂದರೆ ಆತ್ಮಜ್ಞಾನವಾಯಿತು ಎಂದೇ ಅರ್ಥ. **ಅಜ್ಞಾನವು ಹೋಗುವದು, ಜ್ಞಾನವು ಬರುವದು; ಆತ್ಮನನ್ನು ಹುಡುಕುವದು, ಆತ್ಮಪ್ರಾಪ್ತಿಯಾಗುವದು-ಇವೆಲ್ಲ ವಿಕಲ್ಪಮಾತ್ರವೇ. ಇದೆಲ್ಲವೂ ಅನುಭವರೂಪನಾದ ಆತ್ಮನೇ ಎಂದು ಮನಗಾಣುವದೇ ಸರ್ವಾನರ್ಥನಿವೃತ್ತಿ, ಸರ್ವಪುರುಷಾರ್ಥಪ್ರಾಪ್ತಿ.**

# ೬. ಶಾಸ್ತ್ರೋಪದೇಶ

(3—5—63)

ಈವರೆಗೆ ಬಾಹ್ಯವಿಷಯಗಳನ್ನು ಅರಿಯುವದಕ್ಕಿರುವ ಜ್ಞಾನದ್ವಾರಗಳನ್ನು ಬಿಡಿಸಿ ಅವುಗಳ ಮೂಲಕವೇ ನಮಗೆ ಹೊರಗಿನ ವಿಷಯದ ಜ್ಞಾನವಾಗುತ್ತದೆ ಎಂದು ತಿಳಿಸಿದ್ದಾಯಿತು. ಆ ದ್ವಾರಗಳೆಲ್ಲೆಲ್ಲ ಅನುಸ್ಯೂತವಾಗಿದ್ದುಕೊಂಡಿರುವ ಅನುಭವವೂ ಒಂದು ಮುಖ್ಯದ್ವಾರವೆಂಬುದನ್ನು ತಿಳಿಸಿ ಪ್ರಮೇಯದ ವಿಷಯದಲ್ಲಾಗುವ ಪ್ರತ್ಯಕ್ಷಾದಿಪ್ರಮಾಣಗಳ ವ್ಯಾಪಾರದ ಕೊನೆಯಲ್ಲಿ ತೋರುವ ಪ್ರಮಿತಿ, ಅವಗತಿ- ಎಂಬ ಫಲರೂಪವಾದ ಅರಿವೂ ಅದೇ ಅನುಭವವೇ ಎಂಬುದನ್ನು ತಿಳಿಸಿದ್ದಾಯಿತು. ಆದರೆ ಆತ್ಮಜ್ಞಾನದ ವಿಷಯದಲ್ಲಿ ಹೊಸದಾಗಿ ಯಾವ ಅರಿವೂ ಉಂಟಾಗಬೇಕಾಗಿಲ್ಲ ; ಏಕೆಂದರೆ ಆತ್ಮನೇ ಅರಿವಿನ ಸ್ವರೂಪನಾಗಿದ್ದಾನೆ. ಇಂಥ ಆತ್ಮನನ್ನು ಅರಿತುಕೊಳ್ಳುವದೆಂದರೇನು ? ಎಲ್ಲವನ್ನೂ ಅರಿಯುವ ಅನುಭವಸ್ವರೂಪನಾದ ಆತ್ಮನನ್ನು ಅರಿಯುವದು ಹೇಗಾದೀತು ? ಶ್ರುತಿಯಲ್ಲಿ 'ಮನಸ್ಸಿನಿಂದಲೇ ಅರಿತುಕೊಳ್ಳಬೇಕು' ಎಂದು ಹೇಳಿರುವದಕ್ಕೆ ಅಭಿಪ್ರಾಯವೇನು ?- ಎಂಬ ಪ್ರಶ್ನೆಯನ್ನು ತೆಗೆದು ಆತ್ಮನನ್ನು ಅರಿತುಕೊಳ್ಳುವದೆಂದರೆ ಅವನಲ್ಲಿ ಆಗಿರುವ ಅಧ್ಯಾರೋಪಗಳೆಲ್ಲವನ್ನೂ ಕಳೆದುಹಾಕುವದೇ; ಮುಖ್ಯವಾಗಿ ಆತ್ಮಸ್ವರೂಪದಲ್ಲಿ ಅಧ್ಯಸ್ತವಾಗಿರುವ ಪ್ರಮಾತೃತ್ವವನ್ನು ಕಳೆದುಹಾಕಬೇಕು, ಇದಕ್ಕಾಗಿ ಮನಸ್ಸಿಗೆ ಸಂಸ್ಕಾರವನ್ನು ಮಾಡಿಕೊಂಡು ಅಧ್ಯಾತ್ಮಯೋಗದ ಸಹಾಯವನ್ನು ಪಡೆದುಕೊಳ್ಳಬೇಕು-ಎಂದು ತಿಳಿಸಿದ್ದಾಯಿತು.

ಈಗ ಇಂಥ ಆತ್ಮಸ್ವರೂಪವನ್ನು ಶಾಸ್ತ್ರವು ಹೇಳಿಕೊಡುವದು ಹೇಗೆ ? -ಎಂಬುದನ್ನು ವಿಚಾರಿಸಬೇಕಾಗಿದೆ. ಆತ್ಮನು ಮನಸ್ಸಿಗೆ ಗೋಚರನಲ್ಲದಿದ್ದರೂ, ನಾವು ಸಂಸ್ಕೃತವಾದ ಮನಸ್ಸಿನಿಂದ ಪ್ರತ್ಯಗ್ದೃಷ್ಟಿಯನ್ನು ಅವಲಂಬಿಸಿದರೆ ವಿಕಲ್ಪಗಳನ್ನೆಲ್ಲ ಕಿತ್ತುಹಾಕಿ, ಅನುಭವಸ್ವರೂಪನಾದ ಆತ್ಮನಲ್ಲಿಯೇ ನಿಂತುಕೊಳ್ಳಬಹುದು, ಅದೇ ಆತ್ಮಜ್ಞಾನ- ಎಂದು ಹೇಗೆ ಗೊತ್ತಾಯಿತೋ ಹಾಗೆಯೇ ಆತ್ಮನು ಶಬ್ದಕ್ಕೆ ಗೋಚರನಲ್ಲದಿದ್ದರೂ ಶಬ್ದರೂಪವಾದ

ವೇದವೇ ಒಂದಾನೊಂದು ವಿಲಕ್ಷಣವಾದ ರೀತಿಯಿಂದ ಇಂಥ ಆತ್ಮಸ್ವರೂಪ ವನ್ನು ಉಪದೇಶಿಸಬಹುದು- ಎಂದು ಊಹಿಸುವದಕ್ಕೆ ಅವಕಾಶವಿರುತ್ತದೆ. ಈ ಅಭಿಪ್ರಾಯವನ್ನು ನಮಗೆ ತಿಳಿಸಿಕೊಡುವದಕ್ಕೆ ಶ್ರುತಿಯು ಲೌಕಿಕರ ಅಭಿಪ್ರಾಯವನ್ನು ಹೀಗೆಂದು ಅನುವಾದಮಾಡಿಕೊಂಡಿರುತ್ತದೆ :

**ನ ತತ್ರ ಚಕ್ಷುರ್ಗಚ್ಛತಿ**
**ನ ವಾಗ್ಗಚ್ಛತಿ ನೋ ಮನಃ ।**
**ನ ವಿದ್ಮೋ ನ ವಿಜಾನೀಮೋ**
**ಯಥೈತದನುಶಿಷ್ಯಾತ್ ॥** ಕೇ. ೩.

ಅಲ್ಲಿಗೆ ಚಕ್ಷುಸ್ಸು ಹೋಗುವಂತಿಲ್ಲ; ಯಾವ ಇಂದ್ರಿಯಕ್ಕೂ ಗೋಚರ ವಾಗದ್ದು ಅದು. ಅದನ್ನು ವಾಕ್ಕು ತಿಳಿಸಿಕೊಡಲಾರದು; ಏಕೆಂದರೆ ಶಬ್ದ ಪ್ರವೃತ್ತಿಗೆ ನಿಮಿತ್ತಗಳಾಗಿರುವ ಜಾತಿ, ದ್ರವ್ಯ, ಗುಣ, ಕ್ರಿಯೆ, ಸಂಬಂಧ- ಮುಂತಾದ ಯಾವ ವಿಶೇಷವೂ ಅದರಲ್ಲಿಲ್ಲ, ಅದನ್ನು ಮನಸ್ಸೂ ಅರಿಯ ಲಾರದು; ಏಕೆಂದರೆ ಹೊರಗಿನ ಪ್ರಮೇಯಗಳನ್ನು ಮಾತ್ರವೇ ಅದು ವಿಷಯೀಕರಿಸಬಲ್ಲದು. ಹೀಗಿರುವದರಿಂದ ಇದನ್ನು ಹೇಗೆ ಅರಿತುಕೊಳ್ಳ ಬೇಕು? ಹೇಗೆ ಹೇಳಿಕೊಡಬೇಕು? ನಮಗಂತೂ ತಿಳಿಯುವದಿಲ್ಲ- ಎಂದು ಸಾಮಾನ್ಯಜನರ ಅಭಿಪ್ರಾಯವನ್ನೇ ಶ್ರುತಿಯೂ ಇಲ್ಲಿ ಹೇಳಿರುತ್ತದೆ.

ಇನ್ನೊಂದು ಶಂಕೆ. ಪರಮಾತ್ಮನಲ್ಲಿಯೇ ಎಲ್ಲವೂ ಕಲ್ಪಿತವಾಗಿರುತ್ತದೆ:

**ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸ ಇತಿಹಾಸಃ ಪುರಾಣಂ ವಿದ್ಯಾ ಉಪನಿಷದಃ ಶ್ಲೋಕಾಃ ಸೂತ್ರಾಣ್ಯನು ವ್ಯಾಖ್ಯಾನಾನಿ ವ್ಯಾಖ್ಯಾನಾನ್ಯಸ್ಯೈವೈತಾನಿ ನಿಃಶ್ವಸಿತಾನಿ ॥**

ಬೃ. ೨-೪-೧೦.

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ-ಎಂಬ ವೇದ ಗಳೂ ಇತಿಹಾಸ, ಪುರಾಣ, ವಿದ್ಯೆ, ಉಪನಿಷತ್ತುಗಳು, ಶ್ಲೋಕಗಳು; ಸೂತ್ರ ಗಳು, ಅನುವ್ಯಾಖ್ಯಾನಗಳು, ವ್ಯಾಖ್ಯಾನಗಳು-ಎಂದು ಎಂಟು ವಿಧವಾಗಿ

ರುವ ಬ್ರಾಹ್ಮಣಭಾಗಗಳೂ ಆ ಪರಮಾತ್ಮನ ಉಸಿರೇ ಎಂದು ಶ್ರುತಿಯೂ ಹೇಳುತ್ತಿದೆ. ಹೀಗಿರುವಲ್ಲಿ ಆ ಶಾಸ್ತ್ರಕ್ಕೆ ಮೂಲವಾಗಿರುವ ಬ್ರಹ್ಮಾತ್ಮವಸ್ತುವನ್ನು ಶಾಸ್ತ್ರವಾದರೂ ಹೇಗೆ ಹೇಳಿಕೊಟ್ಟೀತು? 'ವೇದಗಳೆಲ್ಲವೂ ಬ್ರಹ್ಮವನ್ನು ತಿಳಿಸುತ್ತವೆ' ಎಂದು ವೇದವಾಕ್ಯವಿದೆ. ಇದು ಹೇಗೆ ಸಾಧ್ಯ? ವೇದವು ಎಂಥ ಉತ್ಕೃಷ್ಟವಾದ ಶಬ್ದವಾದರೂ ಶಬ್ದದ ಸ್ವಭಾವವನ್ನು ಬಿಟ್ಟು ಅದು ಹೇಗೆತಾನೆ ನಿರ್ವಿಶೇಷನಾದ ಆತ್ಮನನ್ನು ತಿಳಿಸೀತು?

ಈ ಶಂಕೆಗೆ ಪರಿಹಾರವೇನೆಂದರೆ, ಆತ್ಮನನ್ನು ಹೀಗಿದಾನೆಂದು ತಿಳಿಸುವದಕ್ಕೆ ಆಗುವದಿಲ್ಲವೆಂಬುವೇ ನಿಜ. ಏಕೆಂದರೆ ಆತ್ಮನನ್ನು ಏನೆಂದು ಕಲ್ಪಿಸಿದರೂ ಪರಿಚ್ಛೇದಗೊಳಿಸಿದಂತೆ ಆಗುತ್ತದೆ. ಒಂದು ಕಡೆಯಲ್ಲಿ ಆಚಾರ್ಯರೂ ಹೀಗೆಂದು ಬರೆದಿರುತ್ತಾರೆ:

> **ಅಸ್ತಿನಾಸ್ತಿ, ಏಕಮ್ ನಾನಾ, ಗುಣವದ್ ಅಗುಣಮ್, ಜಾನಾತಿ ನ ಜಾನಾತಿ, ಕ್ರಿಯಾವದ್, ಅಕ್ರಿಯಮ್, ಫಲವದ್ ಅಫಲಮ್, ಸಬೀಜಮ್ ನಿರ್ಬೀಜಮ್, ಸುಖಂ ದುಃಖಮ್, ಮಧ್ಯಮ್ ಅಮಧ್ಯಮ್, ಶೂನ್ಯಮ್ ಅಶೂನ್ಯಮ್' ಪರಃ, ಅಹಮ್, ಅನ್ಯಃ–ಇತಿ ವಾ ಸರ್ವವಾಕ್ಪ್ರತ್ಯಯಾಗೋಚರೇ ಸ್ವರೂಪೇ ಯೋ ವಿಕಲ್ಪಯಿತುಮ್ ಇಚ್ಛತಿ ಸ ನೂನಂ ಖಮಪಿ ಚರ್ಮವದ್ ವೇಷ್ಟಯಿತುಮ್ ಇಚ್ಛತಿ। ಸೋಪಾನಮಿವ ಚ ಪದ್ಭ್ಯಾಮಾರೋಢುಮ್, ಜಲೇ ಖೇ ಚ ಮೀನಾನಾಂ ವಯಸಾಂ ಚ ಪದಂ ದಿದೃಕ್ಷತೇ, 'ನೇತಿ ನೇತಿ', 'ಯತೋ ವಾಚೋ ನಿವರ್ತನ್ತೇ' ಇತ್ಯಾದಿಶ್ರುತಿಭ್ಯಃ। 'ಕೋ ಅದ್ಧಾ ವೇದ' ಇತಿ ಮನ್ತ್ರವರ್ಣಾತ್ ॥**
>
> —ಐ. ಭಾ. ೨ನೆಯ ಅಧ್ಯಾಯದ ಸಂಬಂಧ

"ಪರಮಾತ್ಮತತ್ತ್ವವನ್ನು ಇಂಥವನು, ಹೀಗೆ ಇದಾನೆ –ಎಂದು ಕಲ್ಪಿಸುವದು ಆಗದ ಕೆಲಸ. 'ಇದೆ, ಇಲ್ಲ ; ಒಂದು ಅನೇಕ ; ಗುಣವುಳ್ಳದ್ದು ಗುಣವಿಲ್ಲದ್ದು ; ಅರಿಯುತ್ತದೆ, ಅರಿಯುವದಿಲ್ಲ ; ಕ್ರಿಯೆಗಳುಳ್ಳದ್ದು ಕ್ರಿಯೆಗಳಿಲ್ಲದ್ದು ; ಫಲವುಳ್ಳದ್ದು, ಫಲವಿಲ್ಲದ್ದು; ಕಾರಣವುಳ್ಳದ್ದು, ಕಾರಣವಿಲ್ಲದ್ದು; ಸುಖರೂಪವಾದದ್ದು, ದುಃಖರೂಪವಾದದ್ದು; ನಡುವೆ ಇರತಕ್ಕದ್ದು, ನಡುವೆ

ಯಿಲ್ಲದ್ದು; ಶೂನ್ಯವು, ಶೂನ್ಯವಲ್ಲ; ಪರಮಾತ್ಮ, ನಾನು, ಮತ್ತೊಬ್ಬನು -ಎಂದು ಯಾವ ವಾಕ್ಕಿಗೂ ಪ್ರತ್ಯಯಕ್ಕೂ ಗೋಚರವಾಗದ ಸ್ವರೂಪವನ್ನು ಯಾವನು ವಿಕಲ್ಪಿಸಲೆಳಸುವನೋ ಅವನು ನಿಜವಾಗಿಯೂ ಆಕಾಶವನ್ನು ಕೂಡ ಚರ್ಮದ ಹಾಗೆ ಸುತ್ತುವೆನೆಂದೂ ಮೆಟ್ಟಿಲಿನ ಸೋಪಾನದಂತೆ ಹತ್ತುವೆನೆಂದೂ ನೀರಿನಲ್ಲಿ ಮಿನುಗಳ ಹೆಜ್ಜೆಯ ಗುರುತನ್ನೂ ಆಕಾಶದಲ್ಲಿ ಹಕ್ಕಿಗಳ ಹೆಜ್ಜೆಯ ಗುರುತನ್ನೂ ಕಾಣುವೆನೆಂದೂ ಎಣಿಸಿದವನಾಗುತ್ತಾನೆ. ಏಕೆಂದರೆ 'ಇದಲ್ಲ, ಅದೂ ಅಲ್ಲ', 'ಈತನಿಂದ ವಾಕ್ಕುಗಳೂ (ಮನಸ್ಸೂ) ಹಿಂತಿರುಗುತ್ತವೆ' ಎಂದು ಶ್ರುತಿಯಿದೆ. 'ಯಾವನು ತಾನೆ ಸ್ಪಷ್ಟವಾಗಿ ಅರಿತುಕೊಂಡಾನು?' ಎಂದು ಮಂತ್ರವರ್ಣವಿದೆ."

ಹೀಗೆ ಯಾವ ವಿಕಲ್ಪವನ್ನು ಮಾಡಿದರೂ ಅದು ಬ್ರಹ್ಮವಲ್ಲದೆ ಹೋಗುತ್ತದೆ. ಆದ್ದರಿಂದ ವಿಕಲ್ಪವನ್ನು ಮಾಡದ್ದೆ ಇರುವದೇ ಸರ್ವೋತ್ತಮ.

ಹಾಗಾದರೆ ಶಾಸ್ತ್ರವು ನಮ್ಮ ಆತ್ಮನನ್ನು ತಿಳಿಸಿಕೊಡುವದಾದರೂ ಹೇಗೆ? – ಎಂದು ನೀವು ಕೇಳಬಹುದು. ಇದಕ್ಕೆ ಆಗಲೆ ಉತ್ತರವನ್ನು ಹೇಳಿದಂತೆಯೇ ಆಗಿದೆ. ನಮ್ಮ ಆತ್ಮನನ್ನು ಯಾವ ವಿಕಲ್ಪವೂ ಇಲ್ಲದವನೆಂದು ತಿಳಿಯುವದೇ ಆತ್ಮನನ್ನು ಅರಿಯುವದಕ್ಕೆ ಹೇಗೆ ಮಾರ್ಗವೋ, ಹಾಗೆಯೇ ಆತ್ಮನಲ್ಲಿ ಯಾವ ವಿಕಲ್ಪವೂ ಇಲ್ಲವೆಂದು ತಿಳಿಸಿಕೊಡುವದೇ ಇದಕ್ಕೆ ಉಪಾಯ. ಈ ಕ್ರಮಕ್ಕೆ ಆಗಮವೆಂದು ಹೆಸರು.

**ಸತ್ಯಮೇವಂ ಪ್ರತ್ಯಕ್ಷಾದಿಭಿಃ ಪ್ರಮಾಣೈರ್ನ ಪರಃ ಪ್ರತ್ಯಾಯಯಿತುಂ ಶಕ್ಯಃ । ಆಗಮೇನ ತು ಶಕ್ಯತ ಏವ ಪ್ರತ್ಯಾಯಯಿತುಮ್ । ತದುಪದೇಶಾರ್ಥಮಾಗಮಮಾಹ ॥** ಕೇ. ೧-೪

ನಿಜ. ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ಅದನ್ನು ತಿಳಿಸುವದಕ್ಕೆ ಆಗುವದಿಲ್ಲವೆಂಬುದು ಸರಿ. ಆದರೆ ಆಗಮದಿಂದ ತಿಳಿಯಿಸಿಕೊಡುವದಕ್ಕೆ ಆಗಿಯೇತೀರುತ್ತದೆ. ಆದ್ದರಿಂದ-

**ಅನ್ಯದೇವ ತದ್ವಿದಿತಾದಥೋ**
**ಅವಿದಿತಾದಧಿ ।**

ಎಂದು ಆಗಮವನ್ನು ಹೇಳಿರುತ್ತದೆ– ಎಂದು ಭಾಷ್ಯಕಾರರು ಬರೆದಿರುತ್ತಾರೆ. 'ಆಗಮ'ವೆಂದರೆ ಶಾಸ್ತ್ರ ಎಂದರ್ಥವಲ್ಲ ; ಆತ್ಮಸ್ವರೂಪವನ್ನು ತಿಳಿಯಿಸಿಕೊಡುವದಕ್ಕೆ ('ಆಗಮ'ಯಿತುವ್) ಉಪಯೋಗಿಸುವ ಸಾಂಪ್ರದಾಯಿಕವಾದ ಕ್ರಮವಿದು. ಉದಾಹರಣೆಗೆ ಬ್ರಹ್ಮವು ವಿದಿತ (ಅರಿತದ್ದು)ಕ್ಕಿಂತ ಬೇರೆ; ಅವಿದಿತ (ಅರಿಯದ್ದು)ಕ್ಕಿಂತ ಬೇರೆ–ಎಂದು ಶ್ರುತಿ ಹೇಳುತ್ತದೆ. **ವಿದಿತ**ವೆಂದರೆ-ಯಾವದಾದರೊಂದು ಪದಾರ್ಥವು ಎಲ್ಲಿದ್ದರೂ ಯಾರಿಗಾದರೂ ವಿದಿತವಾಗಿಯೇ ಇರುತ್ತದೆ ; ಅರಿಯುವದಕ್ಕೆ ತಕ್ಕದ್ದೇ ಆಗಿರುತ್ತದೆಯಾದ್ದರಿಂದ ಅರಿಯುವದಕ್ಕೆ ಯೋಗ್ಯವಾದ **ವ್ಯಾಕೃತ**ಪ್ರಪಂಚವು ವಿದಿತವು. **ಅವಿದಿತ** ವೆಂದರೆ– ವ್ಯಾಕೃತಪ್ರಪಂಚಕ್ಕೆ ಮೂಲವಾಗಿರುವ ಅವಿದ್ಯಾಕಲ್ಪಿತವಾದ **ಅವ್ಯಾಕೃತ**ಬೀಜವು. ಇವೆರಡಕ್ಕಿಂತಲೂ ಆತ್ಮನು ಬೇರೆ ಎಂದರೆ ವಿಲಕ್ಷಣನು –ಎಂದದ್ದರಿಂದ ಇವುಗಳನ್ನು ತನ್ನ ಚೈತನ್ಯದ ಬೆಳಕಿನಿಂದ ಅರಿಯುವ ಪರಮಾತ್ಮನು ಎಂದರ್ಥವಾಗುತ್ತದೆ. ಹೀಗೆ ವಿಷಯವಾಗಿರುವ ವ್ಯಕ್ತಾವ್ಯಕ್ತಪ್ರಪಂಚಕ್ಕಿಂತ ವಿಲಕ್ಷಣವಾದದ್ದು ಎಂದು ತಿಳಿಸಿದ್ದರಿಂದಲೇ ಆತ್ಮಸ್ವರೂಪವನ್ನು ತಿಳಿಸಿದಂತೆ ಆಗುತ್ತದೆ. ಭಗವದ್ಗೀತೆಯಲ್ಲಿ ಕ್ಷರ, ಅಕ್ಷರ–ಎರಡಕ್ಕಿಂತ ಬೇರೆಯಾಗಿರುವ **ಪುರುಷೋತ್ತಮನು** ಎಂದೂ ಇದೇ ತತ್ತ್ವವನ್ನೇ ಹೇಳಿರುತ್ತದೆ.

ಹಾಗಾದರೆ ಶಾಸ್ತ್ರವೆಂಬ ಪ್ರಮಾಣದಿಂದ ಬ್ರಹ್ಮವನ್ನು ತಿಳಿಯುವದು ಹೇಗೆ? ಶಾಸ್ತ್ರವು ಪ್ರಮಾಣವೇ ಆದರೆ, ಯಾವ ಪ್ರಮಾಣದಿಂದಲೂ ಅದನ್ನು ವಿಷಯೀಕರಿಸಿ ಇಂಥದ್ದೆಂದು ತಿಳಿಯಿಸುವದಕ್ಕೆ ಆಗುವದಿಲ್ಲವೆಂದದ್ದು ಹೇಗೆ ಸರಿಯಾಯಿತು ? ಶ್ರೀಶಂಕರಭಗವತ್ಪಾದರವರು ಇದೇ ಶಂಕೆಯನ್ನು ತೆಗೆದು ಬರೆದಿರುವದೇನೆಂದರೆ :

**ಅವಿಷಯತ್ವೇ ಬ್ರಹ್ಮಣಃ ಶಾಸ್ತ್ರಯೋನಿತ್ವಾನುಪಪತ್ತಿರಿತಿ ಚೇತ್ । ನ । ಅವಿದ್ಯಾಕಲ್ಪಿತಭೇದನಿವೃತ್ತಿಪರತ್ವಾತ್ ಶಾಸ್ತ್ರಸ್ಯ । ನ ಹಿ ಶಾಸ್ತ್ರಮ್ ಇದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ; ಕಿಂ ತರ್ಹಿ, ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿಭೇದಮ್ ಅಪನಯತಿ ॥** ಸೂ. ಭಾ. ೧–೧–೪

**ಶಾಸ್ತ್ರವು ಬ್ರಹ್ಮವು ಇಂಥದ್ದು ಎಂದು ತಿಳಿಯಿಸುವದಿಲ್ಲ, ವಿಷಯವಲ್ಲವೆಂದೇ ತಿಳಿಯಿಸಿ ತಿಳಿಯುವವನು, ತಿಳಿಯಲ್ಪಡತಕ್ಕದ್ದು-ಮುಂತಾದ ಭೇದವನ್ನು ಕಳೆದುಹಾಕುತ್ತದೆ. ಹೀಗೆಯೇ ಹೇಳುವ ಶಾಸ್ತ್ರ, ಹೇಳುವದು, ಹೇಳಲ್ಪಡತಕ್ಕದ್ದು- ಎಂಬ ಭೇದವನ್ನಿಟ್ಟುಕೊಂಡೇನೂ ಶಾಸ್ತ್ರವಾಕ್ಯವು ತಿಳಿಯಿಸುವದಿಲ್ಲ ; ಇದು ಹೇಳುವದಕ್ಕೆ ವಿಷಯವಲ್ಲ, ಹೇಳುವ ಶಾಸ್ತ್ರಕ್ಕೂ ಆತ್ಮನಿದು- ಎಂದೇ ತಿಳಿಸುತ್ತದೆ.** ಆದ್ದರಿಂದ ದೋಷವಿಲ್ಲ.

'ಹೀಗೆ ಹೇಳುವದರಿಂದ ಪ್ರಯೋಜನವೇನು ?' ಎಂದರೆ ಹೊರಗಿನ ಪ್ರಪಂಚದ ವಿಂಗಡಗಳನ್ನೆಲ್ಲ ಅಲ್ಲಗಳೆದು ಆತ್ಮಸ್ವರೂಪದಲ್ಲಿ ನಿಲ್ಲಿಸುವದೇ ಆಗಿದೆ. **ಅಥಾತ ಆದೇಶೋ ನೇತಿ ನೇತಿ** (ಬೃ. ೨-೩-೬) 'ಇನ್ನು ಬ್ರಹ್ಮವನ್ನು ಕುರಿತ ಉಪದೇಶವು, ಇದೂ ಅಲ್ಲ, ಅದೂ ಅಲ್ಲ'ಎಂದು ಶ್ರುತಿಯು ಹೇಳುವಾಗ ನಾವು ಬ್ರಹ್ಮದಲ್ಲಿ ಯಾವಯಾವ ವಿಕಲ್ಪವನ್ನು ಮಾಡಿಕೊಳ್ಳಬಹುದೋ ಅದೆಲ್ಲವನ್ನೂ ಅಲ್ಲಗಳೆದು ನಿರ್ವಿಕಲ್ಪವಾದ ನಮ್ಮ ಆತ್ಮನಲ್ಲಿಯೇ ನಿಲ್ಲಿಸಿಬಿಡುವದರಿಂದ ಶಾಸ್ತ್ರವು ಬ್ರಹ್ಮವನ್ನು ತಿಳಿಸಿಕೊಟ್ಟಂತೆ ಆಗುತ್ತದೆ.

ನಿಷೇಧರೂಪವಾದ ನೇತಿನೇತಿವಾಕ್ಯದಿಂದ 'ಇಂಥದ್ದಲ್ಲ' ಎಂಬ ಅಭಾವವೆಂದು ಅರ್ಥವಾಗುವದಿಲ್ಲವೆ ?–ಎಂಬ ಒಬ್ಬರು ಕೇಳಿದ್ದರು ; ಅದಕ್ಕೆ 'ನಾವು **ಭಾವಾದ್ವೈತ**ವನ್ನು ಒಪ್ಪಿದೇವೆ' ಎಂಬ ಉತ್ತರವನ್ನು ಕೆಲವರು ಕೊಟ್ಟರು. ಅದು ಸರಿಯಲ್ಲ. ಏಕೆಂದರೆ ಭಾವವಾಗಲಿ, ಅಭಾವವಾಗಲಿ ಪ್ರಪಂಚವೇ ; ಪ್ರಪಂಚವಿಲಕ್ಷಣನಾದ ನಿಷ್ಪ್ರಪಂಚಾತ್ಮನನ್ನು ತಿಳಿಸುವಾಗ 'ಭಾವಾದ್ವೈತ' ಎಂದು ಸಂಕೋಚಪಡಿಸಿಕೊಂಡರೆ ಹೇಗೆ ಸರಿಯಾದೀತು ? ಭಾವವಾಗಲಿ, ಅಭಾವವಾಗಲಿ ಯಾವದನ್ನು ಕಲ್ಪಿಸಿದರೂ ಅದನ್ನು ಅಲ್ಲಗಳೆಯುವದೇ ನೇತಿನೇತಿವಾಕ್ಯದ ಅಭಿಪ್ರಾಯ. ಆದ್ದರಿಂದ ಶ್ರುತಿಯಲ್ಲಿ 'ಅಸ್ಥೂಲಮ್' ದಪ್ಪವಲ್ಲ– ಎಂದರೆ ಸಣ್ಣದು ಎಂದು ಅರ್ಥಮಾಡಿಕೊಂಡಾರೆಂದು 'ಅನಣು' ಎಂದು ಅದರ ವಿರುದ್ಧವಾದದ್ದನ್ನೂ ಅಲ್ಲಗಳೆದಿರುತ್ತದೆ. ನಿಷೇಧವಾಚಕ(ವಾದ ನಞ್ ಪದ)ಕ್ಕೆ ಅದರ ಅಭಾವ, ಅದಕ್ಕಿಂತ ಭಿನ್ನ, ಅದರ ವಿರುದ್ಧ-ಎಂದು ಮುಂತಾಗಿ

ಯಾವಯಾವ ಅರ್ಥವನ್ನು ಮಾಡಿದರೂ ಸಾಲದು ; **ಸರ್ವವಿಕಲ್ಪಗಳನ್ನೂ ನಿಷೇಧಮಾಡುವದಕ್ಕೆ ಶ್ರುತಿಯು ಬಂದಿರುತ್ತದೆ.** ನಿಜವಾಗಿ ಯಾವ ವಿಕಲ್ಪವೂ ಆತ್ಮವಸ್ತುವಿನಲ್ಲಿಲ್ಲ ಎಂಬುದನ್ನು ತಿಳಿಸುವದಕ್ಕೆ **'ತದೇಜತಿ ತನ್ನೈಜತಿ'**-(ಈ. ೫.) ಅದು ಅಲುಗಾಡುತ್ತದೆ ; ಅದು ಅಲುಗಾಡುವದೂ ಇಲ್ಲ- ಎಂದು ವಿರುದ್ಧಧರ್ಮಗಳನ್ನು ಹೇಳಿರುವದುಂಟು. ಹಾಗಾದರೆ ಅದನ್ನು ತಿಳಿಯಿಸುವದು ಹೇಗೆ ? ತಿಳಿಯುವದು ಹೇಗೆ ? ಸುಮ್ಮನಿರುವದೇ (ತೂಷ್ಣೀಮವಸ್ಥಾ) ಅದನ್ನು ತಿಳಿಯಿಸುವದಕ್ಕೆ ತಿಳಿಯುವದಕ್ಕೆ ಪರಮೋಪಾಯ. ಬಾಷ್ಕಲಿ ಎಂಬವನು ಬಾಧ್ವನೆಂಬಾತನನ್ನು ಕೇಳಿದಾಗ ಆತನು ಮಾತನಾಡದೆಯೇ ಬ್ರಹ್ಮವನ್ನು ಹೇಳಿಕೊಟ್ಟನು. ಎರಡು ಮೂರು ಸಲ ಮತ್ತೆಮತ್ತೆ ಹೇಳಿಕೊಡಿರೆಂದು ಬಾಷ್ಕಲಿಯು ಕೇಳಿದ್ದಕ್ಕೆ **'ಬ್ರೂಮಃ ಖಲು ತ್ವಂ ತು ನ ವಿಜಾನಾಸಿ। ಉಪಶಾಂತೋಽಯಮಾತ್ಮಾ'** ॥ (ಸೂ. ಭಾ. ೩-೨-೧೭.) ಹೇಳುತ್ತಿದ್ದೇವಲ್ಲ, ನೀನು ಮಾತ್ರ ಅರಿತುಕೊಳ್ಳದೆ ಇರುವೆ. ಈ ಆತ್ಮನು ಪ್ರಪಂಚೋಪಶಮನು- ಎಂದನಂತೆ. ಆದರೆ ಸುಮ್ಮನಿದ್ದರೂ ನಾವು ಆತ್ಮಸ್ವರೂಪವನ್ನು ಚೆನ್ನಾಗಿ ಅರಿತೆವು ಎಂದು ಭಾವಿಸುವದಕ್ಕಿಲ್ಲ. ಏಕೆಂದರೆ ಆಗಲೂ 'ಮನಸ್ಸಿನಲ್ಲಿ ನಾನು ಅರಿತೆನು' ಎಂಬ ತಪ್ಪುಭಾವನೆಯು ಇರಬಹುದಾಗಿದೆ. ಬ್ರಹ್ಮವು ಯಾವ ವಿಕಲ್ಪಕ್ಕೂ ವಿಷಯವಲ್ಲ ಎಂದು ಆತ್ಮನಲ್ಲಿ ನೆಲೆನಿಲ್ಲುವದೇ ನಿಜವಾದ ತೂಷ್ಣೀಮವಸ್ಥೆ.

ಇದಲ್ಲ, ಇದಲ್ಲ-ಎಂದರೆ ಬ್ರಹ್ಮಕ್ಕಿಂತ ಬೇರೆಯಾಗಿ 'ಇದು', 'ಇದು' ಎಂದು ನಾವು ಹೇಳುವ ಮತ್ತು ಅರಿಯುವ ವಿಕಲ್ಪಗಳು ಇವೆ ಎಂದು ತಿಳಿದಾರು ಎಂದು ಶ್ರುತಿಯು ಹೀಗೆನ್ನುತ್ತಿದೆ :

> **ಬ್ರಹ್ಮೈವೇದಮಮೃತಂ ಪುರಸ್ತಾತ್ ।**
> **ಬ್ರಹ್ಮ ಪಶ್ಚಾತ್ ಬ್ರಹ್ಮ ದಕ್ಷಿಣತಶ್ಚೋತ್ತರೇಣ ॥**
> **ಅಧಶ್ಚೋರ್ಧ್ವಂ ಚ ಪ್ರಸೃತಂ ಬ್ರಹ್ಮೈವೇದಂ**
> **ವಿಶ್ವಮಿದಂ ವರಿಷ್ಠಮ್ ॥** ಮುಂ. ೨-೨-೧೧

**ಅವಿದ್ಯಾದೃಷ್ಟಿಯಿಂದ ನಮ್ಮ ಮುಂದೆ ಏನೇನು ಕಾಣಿಸುತ್ತಿರುವದೋ ಇದೆಲ್ಲವೂ ಬ್ರಹ್ಮವೇ; ಹಿಂದಿರುವದೂ ಬ್ರಹ್ಮವೇ, ಬಲಕ್ಕೂ**

**ಬ್ರಹ್ಮವೇ, ಎಡಕ್ಕೂ ಬ್ರಹ್ಮವೇ, ಕೆಳಕ್ಕೂ ಮೇಲಕ್ಕೂ ವ್ಯಾಪಿಸಿ ಕೊಂಡಿರುವದು ಎಲ್ಲವೂ ವರಿಷ್ಠವಾದ ಬ್ರಹ್ಮವೇ, 'ಹಿಂದೆ, ಮುಂದೆ' -ಎಂಬ ದೇಶವೂ 'ಅಂದು, ಇಂದು' ಎಂಬ ಕಾಲವೂ 'ಆದ್ದರಿಂದ' ಎಂಬ ಕಾರ್ಯಕಾರಣಭಾವವೂ ನಿಜವಾಗಿ ಬ್ರಹ್ಮವೇ.** ಬ್ರಹ್ಮವಲ್ಲವೆಂದು ನಾವು ಅರಿಯುವದೆಲ್ಲವೂ ಹಗ್ಗದಲ್ಲಿರುವ ಹಾವಿನರಿವಿನಂತೆ ಅವಿದ್ಯೆಯಿಂದಾದ ವಿಕಲ್ಪಮಾತ್ರವೇ. ಇದನ್ನು ಮನವರಿಕೆಮಾಡುವದಕ್ಕೆ ಶಾಸ್ತ್ರವು 'ಇದಲ್ಲ' 'ಅದಲ್ಲ' ಎಂದು ಅಲ್ಲಗಳೆಯುವದು. ಆದ್ದರಿಂದಲೇ ವೇದಾಂತಸಂಪ್ರದಾಯ ವನ್ನು ಬಲ್ಲವರಾದ ಶ್ರೀಗೌಡಪಾದಾಚಾರ್ಯರು ಹೇಳುತ್ತಾರೇನೆಂದರೆ :

**ತತ್ತ್ವಮಾಧ್ಯಾತ್ಮಿಕಂ ದೃಷ್ಟ್ವಾ ತತ್ತ್ವಂ ದೃಷ್ಟ್ವಾ ತು ಬಾಹ್ಯತಃ |**
**ತತ್ತ್ವೀಭೂತಸ್ತದಾರಾಮಸ್ತತ್ತ್ವಾದಪ್ರಚ್ಯುತೋ ಭವೇತ್ ||**

ಗೌ. ಕಾ. ೨-೩೮

ಒಳಗೆ ದೇಹ, ಇಂದ್ರಿಯ, ಮನಸ್ಸು- ಮುಂತಾಗಿ ಕಾಣುವ ಆಧ್ಯಾತ್ಮಿಕವಿಕಲ್ಪವೆಲ್ಲವನ್ನೂ ಪರಮಾತ್ಮತತ್ತ್ವವೇ ಎಂದು ಅರಿತುಕೊಳ್ಳ ಬೇಕು ; ಹೊರಗೆ ಕಾಣುತ್ತಿರುವ ಪೃಥಿವ್ಯಾದಿವಿಕಲ್ಪಗಳನ್ನು ತತ್ತ್ವವೆಂದೇ ಕಂಡುಕೊಳ್ಳಬೇಕು. ತಾನೂ ತತ್ತ್ವವೇ, ಪ್ರಮಾತೃತ್ವವೆಂಬ ವಿಕಲ್ಪವು ತನ್ನಲ್ಲಿಲ್ಲ-ಎಂಬುದನ್ನು ಕಂಡುಕೊಳ್ಳಬೇಕು; ತತ್ತ್ವದಲ್ಲಿಯೇ ಆರಮಣ ಮಾಡುತ್ತಾ ಇದ್ದುಕೊಂಡು ತತ್ತ್ವದಿಂದ ಜಾರದೆ ಇರಬೇಕು. ಯಾವ ವಿಕಲ್ಪವೂ ಇಲ್ಲದ ಅಖಂಡವಾದ ಪರಮಾರ್ಥತತ್ತ್ವವೊಂದೇ - ಎಂದು ಅನುಭವಕ್ಕೆ ತಂದುಕೊಳ್ಳಬೇಕು. ಹಾಗಾದರೆ ಅವನಿಗೆ ಎಂದಿಗೂ ತತ್ತ್ವ ದಿಂದ ಚ್ಯುತಿಯಿಲ್ಲ ; ತತ್ತ್ವವು ತತ್ತ್ವದಿಂದ ಹೇಗೆತಾನೆ ಜಗುಳಿಬಿದ್ದೀತು ?

ಇದೇ ಶಾಸ್ತ್ರಬೋಧನೆಯ ಕ್ರಮ, ಇದೇ ಶಾಸ್ತ್ರಾರ್ಥವನ್ನು ಅರಿತು ಕೊಳ್ಳುವದೆಂಬುದು.

# ೭. ಆಚಾರ್ಯೋಪದೇಶ, ಈಶ್ವರಾನುಗ್ರಹ

(4—5—63)

ಇದುವರೆಗೆ ಬ್ರಹ್ಮವಿದ್ಯೆಯನ್ನು ಕುರಿತು ಹೇಳಿದ್ದಾಯಿತು. 'ಬ್ರಹ್ಮವಿದ್ಯೆಯಿಂದ ಪರಮಪುರುಷಾರ್ಥವು ದೊರಕುತ್ತದೆ; ಸರ್ವಕಾಮಗಳೂ ಪ್ರಾಪ್ತವಾಗುತ್ತವೆ' ಎಂದು ಶ್ರುತಿಯಲ್ಲಿ ಹೇಳಿರುವದನ್ನು ಯಥಾಶ್ರುತವಾಗಿ ಅರ್ಥಮಾಡಿಕೊಂಡರೆ, ಬ್ರಹ್ಮವಿದ್ಯೆ 'ಎಂಬ ಹೆಚ್ಚಿನ ವಿದ್ಯೆಯೊಂದಿದೆ; ಅದರಿಂದ ಈಗ ನಮಗೆ ಸಿಕ್ಕದೆ ಇರುವ ಹೆಚ್ಚಿನ ಪುರುಷಾರ್ಥವೊಂದು ಸಿಕ್ಕುತ್ತದೆ,ಎಲ್ಲಾ ಕಾಮಗಳನ್ನೂ ಭೋಗಿಸಿ ಆನಂದಪಡುವ ಹೆಚ್ಚಿನ ಸ್ಥಿತಿಯು ಲಭಿಸುವದು- ಎಂದು ಥಟ್ಟನೆ ತೋರುತ್ತದೆ. ಆದರೆ ನಿಜವಾದ ಅರ್ಥವು ಇದಲ್ಲವೇ ಅಲ್ಲ. ಬ್ರಹ್ಮವೆಂದರೆ ನಮಗಿಂತ ವ್ಯತಿರಿಕ್ತವಾಗಿರುವ ಒಂದು ದೊಡ್ಡ ವಸ್ತುವಲ್ಲ. ಅದರ ವಿದ್ಯೆ ಅಥವಾ ಜ್ಞಾನ ಎಂದರೆ ಲೋಕದಲ್ಲಿ ಪ್ರತ್ಯಕ್ಷಾದಿಗಳಿಂದ ವಸ್ತುಗಳನ್ನು ತಿಳಿದುಕೊಂಡಂತೆ ಒಂದಾನೊಂದು ಪ್ರಮಾಣದಿಂದ ಅರಿತುಕೊಳ್ಳುವದೂ ಅಲ್ಲ. ಬ್ರಹ್ಮವೆಂಬುದು ನಮ್ಮ ಆತ್ಮನೇ ಆಗಿದೆ; ಅದರ ವಿದ್ಯೆ ಎಂದರೆ ಅನಾತ್ಮದಿಂದ ಹಿಂದಕ್ಕೆ ಸರಿದು ನಮ್ಮ ಆತ್ಮಸ್ವರೂಪದಲ್ಲಿಯೇ ನೆಲೆನಿಲ್ಲುವದು. ಅದರಿಂದ ಪರಮಪುರುಷಾರ್ಥವು ದೊರಕುವದು, ಎಂದರೆ ನಮಗೆ ಈಗ ಸಿಕ್ಕಿಲ್ಲದ ಒಂದಾನೊಂದು ಫಲವು ದೊರಕುವದು, ಎಂದೂ ಅರ್ಥವಲ್ಲ; ಆ ಪುರುಷಾರ್ಥವೆಂದರೆ ನಮ್ಮ ಆತ್ಮನಾದ ಬ್ರಹ್ಮವೇ. ಅದು ದೊರಕುವದೆಂದರೆ ಅನಾತ್ಮದ ಅಧ್ಯಾರೋಪವನ್ನು ಕಳೆದುಕೊಂಡು ನಮ್ಮ ನಿತ್ಯಪ್ರಾಪ್ತಸ್ವರೂಪವನ್ನೇ ಅನುಭವದಿಂದ ಕಂಡುಕೊಳ್ಳುವದೇ.

ಜನರಿಗೆ ಶಾಸ್ತ್ರವಾಕ್ಯದ ಅರ್ಥವು ಹೀಗೇಕೆ ತಲೆಕೆಳಕಾಗಿ ಮನಸ್ಸಿಗೆ ತಟ್ಟುತ್ತದೆ? ಇದಕ್ಕೊಂದು ಕಾರಣವಿದೆ. ಬ್ರಹ್ಮವಿದ್ಯೆಗೆ ಒಂದು ವಿಲಕ್ಷಣವಾದ ದೃಷ್ಟಿಕೋನವು ಬೇಕಾಗಿರುತ್ತದೆ; ಈಗಿರುವ ನಮ್ಮ ಸ್ವಾಭಾವಿಕ ದೃಷ್ಟಿಕೋನವೇ ಬೇರೆಯಾಗಿರುತ್ತದೆ. ಇದು ಬರಿಯ ಭಾಷೆಯ ಜ್ಞಾನವನ್ನು ಸಂಪಾದಿಸಿಕೊಂಡಮಾತ್ರದಿಂದ ಆಗುವದಿಲ್ಲ. ನಿಘಂಟು, ವ್ಯಾಕರಣ- ಇವುಗಳ ನೆರವಿನಿಂದ ನಮಗೆ ಭಾಷೆಯ ಜ್ಞಾನವು ಲಭಿಸಬಹುದು. ಆದರೆ

ನಮ್ಮ ದೃಷ್ಟಿಯು ಒಲವು ಮಾರ್ಪಟ್ಟಹೊರತು ಬ್ರಹ್ಮವಿದ್ಯೆಯ ಮರ್ಮವು ಗೊತ್ತಾಗುವಂತಿಲ್ಲ. ಮನುಷ್ಯನು ಒಂದರ್ಥದಲ್ಲಿ ಕುರಿಯಂತೆ ಇರುತ್ತಾನೆ. ಕುರಿಗಳೆಲ್ಲ ತಲೆಯನ್ನು ಕೆಳಕ್ಕೇ ತಿರುಗಿಸಿಕೊಂಡಿವೆ. ಅವುಗಳಿಗೆ ಮುಂದಿರುವ ಇನ್ನೊಂದು ಕುರಿಯು ಮಾತ್ರ ಗೊತ್ತು. ಮುಂದಿರುವ ಒಂದು ಕುರಿಯು ಎತ್ತತಿರುಗಿದರೆ, ಮಿಕ್ಕ ಕುರಿಗಳೂ ಅತ್ತಲೇ ತಿರುಗುವವು. ಒಂದು ಕುರಿಯು ಯಾವದಾದರೂ ಕಾರಣದಿಂದ ಮೇಲಕ್ಕೆ ನೆಗೆದರೆ ಹಿಂದಿನ ಕುರಿಗಳೂ ಆ ಕಾರಣವು ಇಲ್ಲದಿದ್ದರೂ ಆ ಸ್ಥಳಕ್ಕೆ ಬಂದಾಗ ನೆಗೆದೇತೀರುವವು! **ಮನುಷ್ಯರಿಗೂ ಹಾಗೆಯೇ. ಅವರಿಗೆ ಇಂದ್ರಿಯಗಳು ಹೊರಗಡೆಯ ವಿಷಯಗಳನ್ನು ಹಿಡಿಯುವದಕ್ಕನುಗುಣವಾಗಿಯೇ ಸೃಷ್ಟವಾಗಿವೆ ; ಆದ್ದರಿಂದ ಅವರೆಲ್ಲರೂ ಸ್ವಭಾವದಿಂದಲೇ ಹೊರಕ್ಕೆ ನೋಡುತ್ತಿರುತ್ತಾರೆ.** ತಮ್ಮೊಳಗೆ 'ಏನಿರಬಹುದು'-ಎಂಬುದನ್ನು ನೋಡುವದಕ್ಕೆ ಪ್ರಯತ್ನಿಸುವವರು ಬಹಳ ಕಡಿಮೆ. ಇಂದ್ರಿಯಗಳು ಮನುಷ್ಯನನ್ನು ಮರ್ತ್ಯ (ಸಾಯುವವ)ನನ್ನಾಗಿ ಮಾಡುವವು ; ಆದ್ದರಿಂದ ಮನುಷ್ಯರು ಬಲುಮಟ್ಟಿಗೆ ಸಾವಿನ ಕಡೆಗೇ ಮುಂದುವರಿಯುತ್ತಿದಾರೆ; ಇವರ ಹಿಂದಿನವರೂ ಹಾಗೆಯೇ ಮಾಡುತ್ತಿದ್ದರು, ಇವರೂ ಹಾಗೆಯೇ ಮಾಡುತ್ತಿದಾರೆ; ಮುಂದಿನ ತಲೆಮಾರಿನವರೂ ಹೀಗೆಯೇ ಹೊರನೋಟದವರಾಗಿಯೇ ಹುಟ್ಟಿಸಾಯುವರು. ಇದೊಂದು ನರಗುರಿಗಳ ಸಂಪ್ರದಾಯ!

ಮನುಷ್ಯನು ಒಂದಾನೊಂದು ಜಾತಿಯ ಕೋತಿಯ ವಂಶಕ್ಕೆ ಸೇರಿರುತ್ತಾನೆಂದು ವಿಕಾಸವಾದಿಗಳು ಹೇಳುತ್ತಿದಾರೆ. ಅದು ನಿಜವಾಗಿರಲಿ, ಸುಳ್ಳಾಗಿರಲಿ, ಮನುಷ್ಯರ ಮನಸ್ಸಂತೂ ಕೋತಿಯ ಹಾಗೆ ಚಂಚಲವಾಗಿರುವದು-ನಿಜ. ಅದು ಸ್ವಲ್ಪ ಹೊತ್ತೂ ಚಾಂಚಲ್ಯವನ್ನು ಬಿಟ್ಟು ಇರುವಂತಿಲ್ಲ ; ಅನಾದಿಕಾಲದಿಂದ ಹೊರಕ್ಕೆ ನೋಡುತ್ತಾ, ಹರಿದಾಡುವ ಮನಸ್ಸುಳ್ಳ ಹೀಗಿರುವ ಮನುಷ್ಯನಿಗೆ ಸೂಕ್ಷ್ಮವಾದ ಬ್ರಹ್ಮವಸ್ತುವಿನ ಜ್ಞಾನವು ಹೇಗೆ ಆಗಬೇಕು ? ಆ ಬ್ರಹ್ಮದಲ್ಲಿ ಮನಸ್ಸನ್ನು ಏಕಾಗ್ರಗೊಳಿಸುವ ಅಭ್ಯಾಸವು ಹೇಗೆ ಬರಬೇಕು ? ಉಣ್ಣುವದು, ತಿನ್ನುವದು, ಬರೆಯುವದು, ದುಡಿಯುವದು, ಮನೆಮಠಗಳನ್ನು ಮಾಡಿಕೊಳ್ಳುವದು, ಮಕ್ಕಳನ್ನು ಹೆರುವದು-

ಇವೇ ಮನುಷ್ಯನ ಗೀಳಾಗಿ ಬಿಟ್ಟಿದೆ. ಬ್ರಹ್ಮದಂಥ ಸೂಕ್ಷ್ಮತತ್ತ್ವದ ವಿಚಾರವು ಅವನಿಗೆ ಹಿಡಿಯುವಂತೆಯೇ ಇಲ್ಲ.

ಬ್ರಹ್ಮವು **ಸೂಕ್ಷ್ಮ** ವಾಗಿದೆ ಎಂದರೇನು? ಎಲ್ಲಕ್ಕಿಂತಲೂ ಬಹಳ ಸಣ್ಣದು ಎಂದೇನು ಅರ್ಥವಲ್ಲ. ಎಷ್ಟೇ ಸಣ್ಣವಸ್ತುಗಳಾದರೂ ಸೂಕ್ಷ್ಮದರ್ಶಕಯಂತ್ರಗಳಿಂದ ಅವುಗಳನ್ನು ಕಾಣಬಹುದು; ಹಾಗೆಯೇ ಅವುಗಳ ಶಬ್ದಗಳು ಎಷ್ಟೇ ತಗ್ಗಾಗಿದ್ದರೂ ಕೇಳಬಹುದು. ಇಂದ್ರಿಯಗಳಿಂದ ಈಗ್ಗೆ ಕಾಣುವದಕ್ಕಾಗದ ವಸ್ತುವನ್ನು ಇಲ್ಲಿ ಸೂಕ್ಷ್ಮವೆಂದಿಲ್ಲ, ಸೂಕ್ಷ್ಮವೆಂದರೆ ಅತೀಂದ್ರಿಯವಸ್ತು. ನಾವು ಎಷ್ಟೇ ಪ್ರಯತ್ನವನ್ನು ಮಾಡಿದರೂ ಎಂದೆಂದಿಗೂ ಇಂದ್ರಿಯಗಳಿಂದ ಅರಿಯುವದಕ್ಕಾಗದ, ಮನಸ್ಸಿನ ಪ್ರತ್ಯಯಗಳಿಂದ ಅರಿಯುವದಕ್ಕಾಗದ, ವಸ್ತುವನ್ನೇ ಇಲ್ಲಿ ಸೂಕ್ಷ್ಮವೆಂದಿದೆ. ನಮ್ಮೆಲ್ಲರಿಗೂ ಆತ್ಮನಾಗಿರುವ ಬ್ರಹ್ಮವು ಸರ್ವಪ್ರಾಣಿಗಳಲ್ಲಿಯೂ ಹುದುಗಿಕೊಂಡಿರುತ್ತದೆ. ಆದರೆ ಏಕಾಗ್ರತೆಯಿಂದ ಸೂಕ್ಷ್ಮವಾಗಿರುವ ಬುದ್ಧಿಯಿಂದ ಸೂಕ್ಷ್ಮದರ್ಶಿಗಳಾದವರು ಅದನ್ನು ಕಾಣಬಹುದಾಗಿರುತ್ತದೆ. ಯಾವನೋ ಒಬ್ಬ ವಿವೇಕಿಯು ಮಾತ್ರ ಅದನ್ನು ಅರಿತುಕೊಳ್ಳುತ್ತಾನೆ; ಅವನು ಉಳಿದ ಮಾನವರ ಹೊರನೋಟದ ದೃಷ್ಟಿಯನ್ನು ಬಿಟ್ಟು ತನ್ನೊಳಕ್ಕೇ ನೋಡುವದಕ್ಕೆ ಹೊರಡುತ್ತಾನೆ. ಆದ್ದರಿಂದ ಅವನು ತನ್ನ ಅಂತರಾತ್ಮನನ್ನು ಕಂಡುಕೊಳ್ಳುತ್ತಾನೆ, ಇನ್ನು ಮೇಲೆ ಅವನು ಮರ್ತ್ಯನಾಗಿ ಉಳಿಯುವದಿಲ್ಲ, ಅಮೃತನಾಗುತ್ತಾನೆ–ಎಂದು ಉಪನಿಷತ್ತು ಸಾರುತ್ತಿದೆ.

ಹೀಗೆ ದೃಷ್ಟಿಕೋನವನ್ನೇ ಮಾರ್ಪಡಿಸಿಕೊಳ್ಳುವ ಮಾರ್ಗವು ಹೇಗೆ ತಿಳಿದೀತು? **'ಅದನ್ನು ಅರಿತುಕೊಳ್ಳುವದಕ್ಕೆ ವಿನಯದಿಂದ ಗುರುವಿನ ಬಳಿಗೇ ಸಾರಬೇಕು'** ಎಂದು ಶ್ರುತಿಯು ಹೇಳುತ್ತಿದೆ. **'ಶಾಸ್ತ್ರಜ್ಞೋಽಪಿ ಸ್ವಾತನ್ತ್ರ್ಯೇಣ ಬ್ರಹ್ಮಜ್ಞಾನಾನ್ವೇಷಣಂ ನ ಕುರ್ಯಾತ್-ಇತ್ಯೇತತ್ ಗುರುಮೇವ ಇತ್ಯವಧಾರಣಫಲಮ್'** ॥ ಗುರುವಿನ ಬಳಿಗೇ ಹೋಗಬೇಕು- ಎಂದು ಅವಧಾರಣೆಮಾಡಿ ಹೇಳಿರುವದೇಕೆಂದರೆ, ಶಾಸ್ತ್ರಜ್ಞನಾದರೂ ತಾನೇ ಸ್ವತಂತ್ರವಾಗಿ ಬ್ರಹ್ಮಜ್ಞಾನವನ್ನು ಹುಡುಕಿ ಅರಿತುಕೊಳ್ಳುವದಕ್ಕೆ ಹೋಗಬಾರದು ಎಂಬ ಕಾರಣದಿಂದ. 'ಕಂಟಕಾರಿಕಷಾಯ' ಎಂಬ ಮಾತಿಗೆ ಮುಳ್ಳಿಗೆ ವೈರಿಯಾದ ಚರ್ಮದಮೆಟ್ಟಿನ ಕಷಾಯ– ಎಂದು ಅರ್ಥವನ್ನು

ಮಾಡಿಕೊಂಡ ಮೂರ್ಖನಂತೆ ಬರಿಯ ಶಾಸ್ತ್ರಬಲದಿಂದ ಅರ್ಥಮಾಡಿಕೊಳ್ಳು ವವನ ವಾಕ್ಯಾರ್ಥವು ಅನರ್ಥಕ್ಕೆ ಕಾರಣವಾಗುವದು. ಜಿಜ್ಞಾಸುವಾದವ ನಿಗೆ ಈಶ್ವರನಲ್ಲಿಯೂ ಗುರುವಿನಲ್ಲಿಯೂ ಭಕ್ತಿಯಿರಬೇಕು.

**ಯಸ್ಯ ದೇವೇ ಪರಾ ಭಕ್ತಿಃ**
**ಯಥಾ ದೇವೇ ತಥಾ ಗುರೌ ।**
**ತಸ್ಯೈತೇ ಕಥಿತಾ ಹ್ಯರ್ಥಾಃ**
**ಪ್ರಕಾಶನ್ತೇ ಮಹಾತ್ಮನಃ ॥** ಶ್ವೇ. ೬-೬.

ಯಾವನಿಗೆ ಪರಮೇಶ್ವರನಲ್ಲಿ ಮಿಗಿಲಿಲ್ಲದ ಭಕ್ತಿಯಿರುವದೋ, ಹೇಗೆ ಈಶ್ವರನಲ್ಲಿರುವದೋ ಹಾಗೆಯೇ ಯಾವನಿಗೆ ಗುರುವಿನಲ್ಲಿಯೂ ಭಕ್ತಿಯಿರು ವದೋ ಅಂಥವನಿಗೆ ಈ ಹೇಳಿದ ವೇದಾಂತಾರ್ಥಗಳು ಹೊಳೆಯುವವು- ಎಂದು ಶ್ರುತಿಯೇ ಹೇಳುತ್ತಿದೆ.

ಇಲ್ಲೊಂದು ಶಂಕೆ : ಪರಮಾರ್ಥವೆಂಬುದು ನಿತ್ಯನಿರ್ವಿಕಲ್ಪವಾದ ವಸ್ತು. ಅದರಲ್ಲಿ ಯಾವದನ್ನು ಕಲ್ಪಿಸಿದರೂ ವಿಕಲ್ಪವೇ. ಹೀಗಿರುವಲ್ಲಿ ಗುರು, ಈಶ್ವರ, ಶಾಸ್ತ್ರ, ಶಿಷ್ಯ, ಸಾಧನ- ಇವೆಲ್ಲವೂ ವಿಕಲ್ಪಗಳುತಾನೆ ? ಈ ವಿಕಲ್ಪ ಗಳಿಂದ ನಿಜವು ಹೇಗೆ ಗೊತ್ತಾಗುತ್ತದೆ? ಇದಕ್ಕೆ ಉತ್ತರವೇನೆಂದರೆ: ಎಲ್ಲವೂ ಪರಮಾರ್ಥದಲ್ಲಿ ಮಾಡಿಕೊಂಡಿರುವ ವಿಕಲ್ಪಗಳೇ ಆದರೂ ವ್ಯವಹಾರದೃಷ್ಟಿ ಯಿಂದ ಅವುಗಳಲ್ಲಿ ತಾರತಮ್ಯವಿರುತ್ತದೆ. ಕೆಲವು ತಾಮಸವಿಕಲ್ಪಗಳು, ಕೆಲವು ರಾಜಸ, ಮತ್ತೆ ಕೆಲವು ಸಾತ್ತ್ವಿಕ. ತಾಮಸವಿಕಲ್ಪಗಳನ್ನು ರಾಜಸ ದಿಂದ ಗೆಲ್ಲಬೇಕು; ಅದೇ ನಾಗರಿಕತೆಯ ಮಾರ್ಗ. **ರಾಜಸವಿಕಲ್ಪಗಳನ್ನು ಸಾತ್ತ್ವಿಕದಿಂದ ಗೆಲ್ಲಬೇಕು ; ಇದು ನೀತಿಧರ್ಮಗಳ ಮಾರ್ಗ. ಇದೆಲ್ಲವನ್ನೂ ಪ್ರತ್ಯಗ್ದೃಷ್ಟಿಯನ್ನವಲಂಬಿಸುವ ಶುದ್ಧಸಾತ್ತ್ವಿಕ ದಿಂದ ಗೆಲ್ಲಬೇಕು. ಇದು ಅಧ್ಯಾತ್ಮಮಾರ್ಗ.**

ವ್ಯವಹಾರದೃಷ್ಟಿಯಿಂದಲೂ ಹೆಚ್ಚಿನ ತಿಳಿವಳಿಕೆಯು ಬೇಕಾದರೆ ಒಂದೊಂದು ವಿಷಯಕ್ಕೂ ಗುರುವು ಬೇಕು. ಆದರೆ ವ್ಯವಹಾರದೃಷ್ಟಿಯು ಹೊರಗಡೆಗೆ ನೋಡುವ ಪ್ರಮಾತೃದೃಷ್ಟಿ. ಈ ದೃಷ್ಟಿಯನ್ನು ತೆಗೆಯುವದಕ್ಕೆ ಮಾಡಬೇಕಾದ ಸಾಧನಗಳನ್ನು ತಿಳಿಸುವದಕ್ಕೆ ಪರಮಾತ್ಮನ ಅನುಭವವನ್ನು

ಸಂಪಾದಿಸಿಕೊಂಡಿರುವ ಆಚಾರ್ಯನೇ ಬೇಕು. ಅವನು ಹೇಳಿಕೊಡುವ ಮಾರ್ಗದಲ್ಲಿ ಪ್ರತಿಯೊಬ್ಬ ಸಾಧಕನೂ ತನ್ನ ತನ್ನ ಮನಸ್ಸಿನಿಂದ ನೇರಾಗಿ ನೋಡಿಕೊಳ್ಳುವದನ್ನು ಕಲಿಯಬೇಕು. ದುಃಖವೆಂದರೆ ಮತ್ತೊಬ್ಬರಿಗೆ ಆಗುತ್ತಿರುವದೆಂದು ಕಾಣುವ ದುಃಖವಲ್ಲ ; ತನಗೇ ನೇರಾಗಿ ಅನುಭವಕ್ಕೆ ಬಂದ ದುಃಖ. ಹೀಗೆಯೇ ಭಯ, ಆಶ್ಚರ್ಯ, ಸಂತೋಷ, ನಿದ್ರೆ, ಎಚ್ಚರ, ಅಜ್ಞಾನ, ಜ್ಞಾನ–ಮುಂತಾದವುಗಳನ್ನು ತನತನಗೆ ನೇರಾಗಿ ಆಗುವ ಅನುಭವದಿಂದಲೇ ಅರಿತುಕೊಂಡು ಅದರ ಬಲದಿಂದ ಶಿಷ್ಯರಿಗೆ ಸೂಚಿಸಬೇಕು. ಆತ್ಮಜ್ಞಾನವನ್ನು ತನ್ನ ಆತ್ಮಜ್ಞಾನದ ಅನುಭವದೃಷ್ಟಿಯಿಂದಲೇ ಬೋಧಿಸಬೇಕು. ಪುಸ್ತಕದ ಬದನೆಕಾಯಿ ಹೇಗೆ ಅಡಿಗೆಗೆ ಬಾರದೋ ಹಾಗೆಯೇ ಹೇಳಿಕೇಳಿದ ಜ್ಞಾನವು ಇಲ್ಲಿ ಯಾವ ಫಲಕಾರಿಯೂ ಆಗದು. **ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಆಚಾರ್ಯನೇ ಬೇಕು.**

ಈಶ್ವರತ್ವವೆಂಬುದೂ ಪರಮಾರ್ಥದಲ್ಲಿ ಆಗಿರುವ ಒಂದು ವಿಕಲ್ಪವೇ. ಆದರೂ ಈಶ್ವರನಲ್ಲಿ ಶ್ರದ್ಧೆಯಿಟ್ಟಿರುವವರಿಗೆ ಆಗುವ ಆನಂದವು ಮತ್ತೊಬ್ಬರಿಗೆ ಎಂದಿಗೂ ಗೊತ್ತಾಗುವಂತಿಲ್ಲ ; ಆಚಾರ್ಯತ್ವವೆಂಬುದೂ ಒಂದು ವಿಕಲ್ಪವೇ. ಆದರೆ ಅದೊಂದು ಉತ್ತಮವರ್ಗದ ವಿಕಲ್ಪವು. ಆಚಾರ್ಯನಲ್ಲಿ ಶ್ರದ್ಧಾಭಕ್ತಿಗಳಿಂದ ಪಡೆದುಕೊಂಡ ಉಪದೇಶದಿಂದ **'ಈಶ್ವರೋ ಗುರುರಾತ್ಮೇತಿ ಮೂರ್ತಿಭೇದಾದ್ ವಿಭಾಗಿನೇ । ವ್ಯೋಮವದ್ ವ್ಯಾಪ್ತದೇಹಾಯ ದಕ್ಷಿಣಾಮೂರ್ತಯೇ ನಮಃ ॥'** ಎಂದಿರುವಂತೆ ಈಶ್ವರ, ಗುರು, ಭಕ್ತನೂ ಶಿಷ್ಯನೂ ಆದ ತಾನು –ಎಂದು ಆಕಾರದಿಂದ ಮೂರು ಬಗೆಯಾಗಿದ್ದರೂ ಒಂದೇ ಒಂದಾಗಿ ಸರ್ವವ್ಯಾಪಕವಾಗಿರುವ ಪರಬ್ರಹ್ಮರೂಪವಾದ ಪರಮಾರ್ಥತತ್ತ್ವವೇ ಹಾಗೆ ಭಿನ್ನವಾಗಿ ತೋರುತ್ತಿದೆ ಎಂಬ ಅರಿವು ಆಗುತ್ತದೆ.

ವಿಕಲ್ಪಗಳು ಮಿಥ್ಯೆ ಎಂದಮಾತ್ರಕ್ಕೆ ಅವುಗಳಲ್ಲಿ ವ್ಯವಸ್ಥೆಯಿಲ್ಲವೆಂದು ತಿಳಿಯಬಾರದು. ತೋರಿಕೆಯ ರೂಪದಿಂದ ಅವು ಮಿಥ್ಯೆ; ಬ್ರಹ್ಮರೂಪದಿಂದ ಅವು ಪರಮಾರ್ಥವೇ. ಪರಮಾರ್ಥದ ಕಡೆಗೆ ಯಾವದು ನಮ್ಮನ್ನು ಕರೆದೊಯ್ಯುವದೋ ಅದೇ ಸಾತ್ತ್ವಿಕವಾದ ಸಾಧನರೂಪವಾದ ವಿಕಲ್ಪ.

**ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ**
**ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।**
**ತಂ ಹ ದೇವಮಾತ್ಮಬುದ್ಧಿಪ್ರಕಾಶಂ**
**ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥** ಶ್ವೇ. ೬-೮.

ಪರಮಾತ್ಮನು ಮೊದಲು ಹಿರಣ್ಯಗರ್ಭಬ್ರಹ್ಮನನ್ನು ಕಲ್ಪಾದಿಯಲ್ಲಿ ಸೃಷ್ಟಿಸುತ್ತಾನೆ. ಅವನ ಮನಸ್ಸಿನಲ್ಲಿ ವೇದಗಳು ಹೊಳೆಯುವಂತೆ ಅನುಗ್ರಹಿಸುತ್ತಾನೆ. ಆ ದೇವನೇ ನಮ್ಮಲ್ಲಿ ಆತ್ಮಬುದ್ಧಿಯು ಹೊಳೆಯುವಂತೆ ಮಾಡುವವನು. ಆದ್ದರಿಂದ ಈಶ್ವರನಲ್ಲಿಯೂ ಆಚಾರ್ಯನಲ್ಲಿಯೂ ಭಕ್ತಿಯನ್ನು ಸಂಪಾದಿಸಿಕೊಳ್ಳಬೇಕು. ಈಶ್ವರನು ನಮಗೆ ಪರೋಕ್ಷವಾಗಿ ಗುರುವಾಗಿರುತ್ತಾನೆ; ಆದರೆ ಆಚಾರ್ಯನು ನೇರಾದ ಗುರುವಾಗಿರುತ್ತಾನೆ. ಗಂಧಾರದೇಶದಿಂದ ಒಬ್ಬ ಮನುಷ್ಯನನ್ನು ಕಳ್ಳರು ಕಣ್ಣುಕಟ್ಟಿ ತಂದು ದೂರದೇಶದ ಕಾಡಿನಲ್ಲಿ ಬಿಟ್ಟುಬಿಟ್ಟರಂತೆ. ಅಲ್ಲಿ ಒಬ್ಬ ಕಾರುಣಿಕನಾದ ದಾರಿಹೋಕನು ಅವನ ಕಣ್ಣುಕಟ್ಟನ್ನು ಬಿಚ್ಚಿ 'ಈ ದಿಕ್ಕಿಗೆ ಹೋಗು, ಈ ಕಡೆಗೆ ಗಂಧಾರದೇಶವಿದೆ' ಎಂದು ತಿಳಿಸಿಕೊಟ್ಟನು. ಆಗ ಅವನು ದಾರಿಹೋಕನು ಹೇಳಿಕೊಟ್ಟ ಮಾರ್ಗವನ್ನು ವಿವೇಕದಿಂದ ಅನುಸರಿಸಿಕೊಂಡು ತನ್ನ ದೇಶವನ್ನು ಸೇರಿದನು. ಇದರಂತೆಯೇ ಆಚಾರ್ಯನ ಉಪದೇಶದಿಂದ ಅರಿತುಕೊಳ್ಳಬೇಕು – ಎಂದು ಉಪನಿಷತ್ತಿನಲ್ಲಿದೆ. ನಾವು ನಮ್ಮ ಮೂಲಸ್ಥಾನವಾದ ಬ್ರಹ್ಮವನ್ನು ಬಿಟ್ಟು ಹೊರದೇಶದ ಇಂದ್ರಿಯಗೋಚರವಾದ ಕಗ್ಗಾಡಿನಲ್ಲಿ ದಾರಿಗಾಣದೆ ಇರುತ್ತೇವೆ. ತತ್ತ್ವವೇತ್ತನಾದ ಗುರುವು 'ಹಿಂದುಗಡೆಗೆ ತಿರುಗು, ನಿನ್ನಲ್ಲಿಯೇ ನೋಡಿಕೊ; ಆಗ ಆತ್ಮವಸ್ತುವನ್ನು ಕಾಣಬಹುದು' ಎಂದು ಬೋಧಿಸಲಾಗಿ ತತ್ತ್ವದ ಸಾಕ್ಷಾತ್ಕಾರವಾಗುವದು.

ಹೀಗಿರುವದರಿಂದ ಈಶ್ವರನ ಅನುಗ್ರಹವೂ ಬೇಕು.

**'ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥'**
ಎಂದಿರುವಂತೆ **ನಮ್ಮ ಹೃದಯದಲ್ಲಿರುವ ಈಶ್ವರನನ್ನೇ ಭಾವಪೂರ್ವಕವಾಗಿ ಶರಣುಹೊಂದಬೇಕು. ಆತನ ಪ್ರಸಾದದಿಂದಲೇ ನಮಗೆ**

**ಪರಮಪುರುಷಾರ್ಥವೂ ಆ ಈಶ್ವರನ ಕಡೆಗೆ ತಿರುಗುವ ಮಾರ್ಗವನ್ನು ಹೇಳಿಕೊಡುವ ಗುರುವಿನ ಅನುಗ್ರಹವೂ ದೊರಕುವವು.**

ಆಚಾರ್ಯನು ನಮಗೆ ಈಶ್ವರಭಕ್ತಿಯ ಮರ್ಮವನ್ನು ಹೇಳಿಕೊಡುತ್ತಾನೆ; ನಮ್ಮ ಹೃದಯದಲ್ಲಿ ಶ್ರದ್ಧಾಭಕ್ತಿಗಳ ಬುಗ್ಗೆಯು ಚಿಲ್ಲನೆ ಹಾರುವಂತೆ ಮಾಡಿಕೊಡುತ್ತಾನೆ. ಅಳುವವರನ್ನು ಕಂಡರೆ ಅಳುವೂ ನಗುವವರನ್ನು ಕಂಡರೆ ನಗೆಯೂ ಬರುವಂತೆ ಬ್ರಹ್ಮನಿಷ್ಠನಾದ ಶಾಂತನಾದ ಗುರುವಿನ ದರ್ಶನಸೇವಾದಿಗಳಿಂದ ನಮ್ಮ ಮನಸ್ಸಿನಲ್ಲಿಯೂ ಶಾಂತಿಯು ಕಾಣಿಸಿಕೊಳ್ಳುವದು.

ಹೀಗೆ ಈಶ್ವರನಲ್ಲಿಯೂ ಗುರುಗಳಲ್ಲಿಯೂ ಶ್ರದ್ಧಾಭಕ್ತಿಗಳನ್ನಿಟ್ಟುಕೊಂಡು ಮಾಡುವ ಸಾಧನಗಳಿಂದಲೇ ಬ್ರಹ್ಮಜ್ಞಾನವಾಗುವದು. ಅನ್ವರ್ಥವಾಗಿಯೂ ಜಗದ್ಗುರುಗಳಾಗಿರುವ ಶ್ರೀಶಂಕರಭಗವತ್ಪಾದರವರ ಅನುಗ್ರಹದಿಂದ ನಮಗೆ ಪ್ರತ್ಯಗ್ದೃಷ್ಟಿಯ ಮಾರ್ಗವು ಲಭಿಸಲಿ! ಸರ್ವವಿಕಲ್ಪಗಳೂ ತೊಲಗಿ ನಿತ್ಯನಿರ್ವಿಕಲ್ಪವಾಗಿ ನಮ್ಮ ಆತ್ಮನೇ ಆಗಿರುವ ಪರಬ್ರಹ್ಮದಲ್ಲಿಯೇ ನಿಷ್ಠೆಯಾಗುವ ಸುಯೋಗವು ಲಭಿಸಲಿ! -ಎಂದು ಹಾರೈಸೋಣ.

## ೮. ಶ್ರೀಶಂಕರಭಗವತ್ಪಾದರವರು

(5-5-63)

ಶಂಕರಸಪ್ತಾಹದ ಮಂಗಳದ ದಿವಸ ಆಚಾರ್ಯರವರ ಗುಣಕಥನವನ್ನು ಮಾಡುವ ಪದ್ಧತಿಯಿದೆ. ಈ ಗುಣಕಥನವನ್ನು ಯಾವ ದೃಷ್ಟಿಯಿಂದ ಮಾಡಬೇಕು? -ಎಂಬ ಪ್ರಶ್ನೆಯೊಂದು ನಮ್ಮ ಮುಂದೆ ಬಂದು ನಿಲ್ಲುತ್ತದೆ. ಏಕೆಂದರೆ ಅವರನ್ನು ನೇರಾಗಿ ನೋಡಿದೇವೆಂಬವರು ಈಗ ಯಾರೂ ಇಲ್ಲ. ಅವರಿದ್ದ ಕಾಲವು ಯಾವದೆಂಬುದು ವಾದಗ್ರಸ್ತವಾಗಿರುತ್ತದೆ; ದೇಶವು ಸ್ವಲ್ಪಮಟ್ಟಿಗೆ ಗೊತ್ತಾಗಿದೆ. ಅವರ ಚರಿತ್ರೆ ಎಂದು ಬರೆದಿರುವ ಶಂಕರವಿಜಯಗಳು ಹೇರಳವಾಗಿದ್ದರೂ ಒಂದಕ್ಕೊಂದು ವಿರುದ್ಧವಾದ ಘಟನೆಗಳನ್ನು ತಿಳಿಸುತ್ತಿವೆ. ಹೀಗಿರುವದರಿಂದ ಅವರನ್ನು ನಾವು ಏನೆಂತ ಸ್ಮರಣೆಮಾಡಿಕೊಳ್ಳಬೇಕು?

**ಆಚಾರ್ಯರು ಒಂದು ದೇಶಕ್ಕೆ ಅಥವಾ ಒಂದು ಕಾಲಕ್ಕೆ ಕಟ್ಟುಬಿದ್ದ ವ್ಯಕ್ತಿಯಲ್ಲ.** ದೇಶಕ್ಕೆ ಉಪಕಾರವನ್ನು ಮಾಡಿದ ವ್ಯಕ್ತಿಗಳ ಜೀವನಚರಿತ್ರೆಗಳಿವೆ. ಆದರೆ ಅಂಥ ವ್ಯಕ್ತಿಗಳನ್ನು ಬೇರೆಬೇರೆಯ ತಲೆ ಮಾರಿನವರು ತಮ್ಮ ತಮ್ಮ ದೃಷ್ಟಿಯಿಂದ ಮೇಲಕ್ಕೆ ಏರಿಸುತ್ತಾರೆ, ಅಥವಾ ಕೆಳಕ್ಕೆ ಇಳಿಸುತ್ತಾರೆ. ಆಚಾರ್ಯರು ಅಂಥ ವ್ಯಕ್ತಿಗಳ ಗುಂಪಿಗೆ ಸೇರುವಂತಿಲ್ಲ. ಏಕೆಂದರೆ 'ಕಾಲದೇಶನಿಮಿತ್ತಗಳನ್ನು ಮೀರಿರುವ ಪರವಸ್ತುವೇ ನಮ್ಮೆಲ್ಲರ ಆತ್ಮನು' ಎಂಬ ಘನವಾದ ತತ್ತ್ವವನ್ನು ಅವರು ಅನುಭವಕ್ಕೆ ಹೊಂದಿಸಿ ಎಲ್ಲರಿಗೂ ಉಪದೇಶಿಸಿರುತ್ತಾರೆ.

ಆದ್ದರಿಂದ ಆಚಾರ್ಯರ ಸ್ಮರಣೆ ಎಂದರೂ ಒಂದೇ, ನಮ್ಮೆಲ್ಲರ ಆತ್ಮನ ಸ್ಮರಣೆ ಎಂದರೂ ಒಂದೇ. ಅವರ ಆತ್ಮನು ಹಿಂದಿನಕಾಲಕ್ಕೆ ಸೇರಿದವನೆಂದು ಒಂದು ಕಥೆಯನ್ನು ಅವರ ವಿಷಯಕ್ಕೆ ಬರೆದರೆ ಅವರ ಸ್ಮರಣೆಯಾಗಲಾರದು; ಅವರು ಮುಂದಿನ ಪೀಳಿಗೆಗೆ ಬೇಕಾದ ಜೀವನಸೂತ್ರವನ್ನು ತೋರಿಸಿಕೊಟ್ಟಿರುತ್ತಾರೆಂದು ಅವರನ್ನು ಸ್ಮರಿಸುವದೂ ಸಲ್ಲದು. **ನಿತ್ಯಶುದ್ಧಬುದ್ಧಮುಕ್ತ ಪರಮಾತ್ಮಸ್ವರೂಪರೇ ಅವರು ; ಆ ಸ್ವರೂಪದಿಂದ ಅವರು ಈಗಲೂ ನಮ್ಮ ಆತ್ಮಸ್ವರೂಪರೇ ಆಗಿದ್ದುಕೊಂಡು ನಮ್ಮನ್ನು ಅನುಗ್ರಹಿಸುತ್ತಿರುತ್ತಾರೆ.** ಆ ರೂಪದಿಂದ ಅವರನ್ನು ಸ್ಮರಿಸಬೇಕು ; ಆದರಿಂದ ನಮಗೆ ನಿತ್ಯಕಲ್ಯಾಣವಾಗುವದು.

**ಆಚಾರ್ಯರಿಗಿಂತ ಹಿಂದಿನ ಕಾಲದಲ್ಲಿ ವೇದಾಂತವು** ಇರಲಿಲ್ಲವೆ ? ಇವರು ಹೊಸದಾಗಿ ನಮಗೆ ಹೇಳಿಕೊಟ್ಟದ್ದೇನು ?– ಎಂದು ಯಾರಾದರೂ ಕೇಳಬಹುದು. ಬಾದರಾಯಣಾಚಾರ್ಯರು ವೇದಾಂತ ಸೂತ್ರಗಳನ್ನು ರಚಿಸಿದ ಕಾಲಕ್ಕೆ ಜೀವಾತ್ಮಪರಮಾತ್ಮರ ಸಂಬಂಧವನ್ನು ಕುರಿತ ಮೂರು ಬೇರೆಬೇರೆಯ ಅಭಿಪ್ರಾಯಗಳಿದ್ದವೆಂದು ತಿಳಿಯಬರುತ್ತದೆ. **ಆ ಶ್ಮ ರ ಥ್ಯ** ರೆಂಬ ಆಚಾರ್ಯರು 'ಆತ್ಮನನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ ಆಗುವದು' ಎಂದು ಶ್ರುತಿಯಲ್ಲಿದೆ ; ಆದ್ದರಿಂದ ಪರಮಾತ್ಮನಿಗೂ ನಮಗೂ ಭೇದಾಭೇದವಿದೆ. ಭೇದದ ಅಂಶವು ಹೋದಬಳಿಕ ನಾವು ಪರಮಾತ್ಮನಲ್ಲಿ ಒಂದಾಗುವೆವು' ಎನ್ನುತ್ತಿದ್ದರಂತೆ. **ಔಡುಲೋಮಿ**

ಎಂಬ ಆಚಾರ್ಯರು 'ಈಗ ನಮಗೆ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ—ಇವುಗಳ ಗುಂಪಿನಿಂದ ಕಾಲುಷ್ಯವುಂಟಾಗಿರುತ್ತದೆ. ಜ್ಞಾನ, ಧ್ಯಾನ—ಮುಂತಾದವುಗಳನ್ನು ಅನುಷ್ಠಾನಮಾಡಿದರೆ, ಈ ದೇಹಾದಿಸಂಘಾತವನ್ನು ಬಿಟ್ಟುಹೋದಬಳಿಕ ಪರಮಾತ್ಮನೊಡನೆ ನಾವು ಒಂದಾಗುವೆವು' ಎಂದು ಬೋಧಿಸುತ್ತಿದ್ದರಂತೆ. **ಕಾಶಕೃತ್ಸ್ನ**ರೆಂಬ ಮತ್ತೊಬ್ಬ ಆಚಾರ್ಯರು ಇದ್ದರು. ಅವರು 'ಪರಮೇಶ್ವರನೇ ಈ ನಮ್ಮ ರೂಪದಿಂದಲೂ ನಮ್ಮ ದೇಹೇಂದ್ರಿಯಸಂಘಾತದೊಳಗೆ ಪ್ರವೇಶಿಸಿರುತ್ತಾನೆಂದು ಶ್ರುತಿಯು ಹೇಳುತ್ತಿದೆ. ಆದ್ದರಿಂದ ನಾವು ಈಗಲೇ ಇಲ್ಲಿಯೇ ಪರಮಾತ್ಮಸ್ವರೂಪರಾಗಿದೇವೆ. ಇದನ್ನು ಅರಿತುಕೊಂಡು ಕೃತಕೃತ್ಯರಾಗಬೇಕು' ಎಂದು ಉಪದೇಶಿಸುತ್ತಿದ್ದರಂತೆ. ಈ ಮತವೇ ನಿಜವಾದ ಸಿದ್ಧಾಂತವು ಎಂಬುದನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ತಿಳಿಯಹೇಳಿರುತ್ತಾರೆ.

ಆಚಾರ್ಯರ ಹಿಂದೆಯೂ ಜೀವಬ್ರಹ್ಮರ ಏಕತ್ವವನ್ನು ಹೇಳುವ ಮತಗಳು ಬಹಳ ಇರುತ್ತಿದ್ದವು. ಆದರೆ ಅವುಗಳಲ್ಲಿ ವೇದಾಂತದ ನಿಜವಾದ ಪ್ರಕ್ರಿಯೆಯನ್ನು ಶ್ರುತಿಯುಕ್ತ್ಯನುಭವಗಳಿಗೆ ಹೊಂದಿಸಿ ಹೇಳುವ ಕೌಶಲವಿರಲಿಲ್ಲ. ಆಚಾರ್ಯರವರ ಸಂಪ್ರದಾಯದವರ ಮತವನ್ನು ಶ್ರೀಗೌಡಪಾದರವರು ತಮ್ಮ ಮಾಂಡೂಕ್ಯಕಾರಿಕೆಗಳಲ್ಲಿ ಸ್ಪಷ್ಟಪಡಿಸಿರುತ್ತಾರೆ. ಅದೇ ಸಾರ್ವತ್ರಿಕಾನುಭವಕ್ಕೆ ಹೊಂದುವದರಿಂದ ಪರಮಸಿದ್ಧಾಂತವೆನಿಸಿರುತ್ತದೆ.

**ನಿಜವಾದ ಸಿದ್ಧಾಂತವೆಂದರೆ ಸಾರ್ವತ್ರಿಕವಾಗಿರಬೇಕು, ಸುನಿಶ್ಚಿತವಾಗಿರಬೇಕು. ಆಚಾರ್ಯರು ಬೋಧಿಸಿರುವ ಸಂಪ್ರದಾಯದ ವೇದಾಂತದಲ್ಲಿ ಈ ಎರಡು ಗುಣಗಳೂ ಇರುತ್ತವೆ.** ಶ್ರುತಿಯು 'ಅದೇ ನೀನು,ಆ ಪರಮಾತ್ಮವಸ್ತುವೇ ನೀನಾಗಿರುವೆ'-ಎಂದು ಎಲ್ಲರಿಗೂ ಹೇಳುತ್ತಿದೆ. ನಾವು ಅರಿತಿರಲಿ ಅರಿಯದಿರಲಿ, ನಮ್ಮೆಲ್ಲರ ಆತ್ಮನು ಎಂದೆಂದಿಗೂ ಪರಮಾತ್ಮನೇ ಆಗಿರುತ್ತಾನೆ; ಇಂಥ ದೇಶದವರ, ಇಂಥ ಕಾಲದವರ, ಇಂಥ ಜಾತಿಯವರ, ಇಂಥ ಲಿಂಗಭೇದದವರ, ಇಂಥ ಅವಸ್ಥೆಯಲ್ಲಿರುವವರ ಆತ್ಮನು ಪರಮಾತ್ಮನು ಎಂದೇನೂ ಹೇಳಿರುವದಿಲ್ಲ. ಇದು ವಿಚಾರಮಾಡಿ ನೋಡಿಕೊಳ್ಳಬಲ್ಲವರಿಗೆಲ್ಲ ಅನುಭವಕ್ಕೆ ಬರುವಂತಿವೆ ಎಂಬುದು ಆಚಾರ್ಯರ ಉಪದೇಶ.

ಹಿಂದಕ್ಕೆ ಕ್ರಿಸ್ತೀಯಮತದವರು ಕ್ರಿಸ್ತನ ಉಪದೇಶವನ್ನು ಯಹೋದ್ಯರಲ್ಲದವರಿಗೆ ಹೇಳುತ್ತಿರಲಿಲ್ಲವಂತೆ; ಆದರೆ **ಪಾಲ್** ಎಂಬಾತನು ಎಲ್ಲರಿಗೂ ಅದನ್ನು ಬೋಧಿಸಿದನು. 'We live, move and have our being in Him' ನಾವು ಆ ಪರಮಾತ್ಮನ ಸತ್ತೆಯುಳ್ಳವರಾಗಿ, ಅವನಲ್ಲಿಯೇ ಜೀವಿಸಿದ್ದು, ನಮ್ಮ ವ್ಯಾಪಾರಗಳನ್ನು ಮಾಡುತ್ತಿದೇವೆ- ಎಂಬ ಘನತತ್ತ್ವವನ್ನು ಅವನು ಬೋಧಿಸಿದನೆಂದು ಹೇಳುತ್ತಾರೆ. ಶ್ರುತಿಯೂ ಹೀಗೆಯೇ ಎಲ್ಲರೂ ಬ್ರಹ್ಮವೇ-ಎಂದು ಸಾರುತ್ತಿದೆ.

**ಬ್ರಹ್ಮ ದಾಶಾ ಬ್ರಹ್ಮ ದಾಸಾ ಬ್ರಹ್ಮೈವೇಮೇ ಕಿತವಾಃ ||**

ಬೆಸ್ತರೂ ಬ್ರಹ್ಮವೇ, ಗರ್ಭದಾಸರೂ ಬ್ರಹ್ಮವೇ, ಜೂಜಾಡುವ ಕೀಳು ಜನರೂ ಬ್ರಹ್ಮವೇ-ಎಂದು ಹೇಳುತ್ತಿರುವ ಈ ಸಾರ್ವತ್ರಿಕವಾದ ತತ್ತ್ವವನ್ನು ಸುನಿಶ್ಚಿತರೀತಿಯಿಂದ ಬೋಧಿಸಿದ ಶ್ರುತಿಯ ಮಹಿಮೆಯನ್ನು ಎಲ್ಲರಿಗೂ ನೆನಪಿಗೆ ತಂದುಕೊಟ್ಟ ಯಶಸ್ಸು ಆಚಾರ್ಯರದು.

'ಈ ತತ್ತ್ವವನ್ನು ಅರಿತುಕೊಳ್ಳುವದೇ ಜನರಿಗೆ ಜನ್ಮಸಾಫಲ್ಯ, ಅದರಲ್ಲಿಯೂ ಬ್ರಾಹ್ಮಣನಿಗೆ ವಿಶೇಷವಾಗಿ ಜನ್ಮಸಾರ್ಥಕ್ಯವನ್ನು ಕೊಡತಕ್ಕದ್ದು; ಈ ಜ್ಞಾನವನ್ನು ಪಡೆದುಕೊಂಡವನು ದ್ವಿಜನೇ ಹೊರತು, ಬೇರೊಂದು ಪ್ರಕಾರದಿಂದಲ್ಲ' ಎಂದು **ಮನು ವು** ಹೇಳಿರುತ್ತಾನೆ. 'ಇದನ್ನರಿತವನೇ ನಿಜವಾದ ಅರ್ಥದಲ್ಲಿ ಬ್ರಾಹ್ಮಣನು' ಎಂದು ಶ್ರುತಿಯೂ ಹೇಳುತ್ತಿದೆ. ಇಂಥ ತತ್ತ್ವವನ್ನು 'ನಿಜ, ನಿಜ!' ಎಂದು ತಲೆದೂಗಿ ಒಪ್ಪುವಂತೆ ಅನುಭವಕ್ಕೆ ಬರುವಂತೆ ಬೋಧಿಸಿರುವ ಆಚಾರ್ಯರಿಗೆ ನಾವು ಕೃತಜ್ಞರಾಗಿರಬೇಕು.

**ಓಂ ತತ್ಸತ್**

15-9-83, 2000, ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.

# ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

---

## ಈ ಕಾರ್ಯಾಲಯದಿಂದ ತಾವು ಯಾವಯಾವ ಲಾಭವನ್ನು ಪಡೆಯಬಹುದು?

೧. ಕಾರ್ಯಾಲಯದಲ್ಲಿ ಆಗಾಗ್ಗೆ ನಡೆಯುತ್ತಿರುವ ಪೂಜೆ, ಪುರಾಣಶ್ರವಣ, ಉಪನ್ಯಾಸ, ಅನುಷ್ಠಾನಗಳು-ಇವುಗಳನ್ನು ನೋಡಿ ನಲಿಯಬಹುದು.

೨. ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯವಾದ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

೩. ಕಾರ್ಯಾಲಯದಲ್ಲಿ ಪ್ರಕಟವಾಗುವ 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು. ಮಹಾಪೋಷಕರೂ ಪೋಷಕರೂ ಆಗಿ ಪತ್ರಿಕೆಯನ್ನು ಪ್ರೋತ್ಸಾಹಿಸಬಹುದು.

೪. ಕಾರ್ಯಾಲಯದಲ್ಲಿ ಸಿದ್ಧವಾಗುತ್ತಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಪುಣ್ಯಸಂಪಾದನೆ ಮಾಡಿಕೊಳ್ಳಬಹುದು.

೫. ಕಾರ್ಯಾಲಯದ ಕಟ್ಟಡಕ್ಕೂ, ಗುರುಮಂದಿರ, ಪೂಜಾಮಂದಿರಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬಹುದು.